# ರಾಷ್ಟ್ರೋತ್ಥಾನ ಪರಿಷತ್

ಸ್ವಯಂಸೇವಾ ಸಂಸ್ಥೆ

1965 ರಿಂದ

# ವಾರ್ಷಿಕ ವರದಿ: 2022–23



# ರಾಷ್ಟ್ರೋತ್ಥಾನ ಪರಿಷತ್

## ಲಕ್ಷ್ಯ

ಸ್ವಸ್ಥ–ಸುಸ್ಥಿರ ಸಮಾಜನಿರ್ಮಾಣ

## ಧ್ಯೇಯ

- ಭಾರತೀಯ ಜೀವನಮೌಲ್ಯಗಳನ್ನು ಜನಮನದಲ್ಲಿ ಬೇರೂರಿಸುವ ಸಾಹಿತ್ಯ ನಿರ್ಮಾಣ ಮತ್ತು ಪ್ರಸಾರ.
- ವಿದ್ಯಾರ್ಥಿಗಳ ಸರ್ವಾಂಗೀಣ ವಿಕಾಸಕ್ಕೆ ಪೂರಕವಾದ ಸಂಸ್ಕಾರಯುಕ್ತ, ರಾಷ್ಟ್ರನಿಷ್ಠ ಶಿಕ್ಷಣದ ಮೂಲಕ ಸಾಮಾಜಿಕ ಪರಿವರ್ತನೆ.
- ಸಮಾಜದ ಅಗತ್ಯಗಳ ಪೂರೈಕೆಗಾಗಿ ಯೋಗ, ಆರೋಗ್ಯ ಮತ್ತು ವಿವಿಧ ಸೇವಾ ಚಟುವಟಿಕೆಗಳು.
- ಈ ಎಲ್ಲ ಚಟುವಟಿಕೆಗಳಲ್ಲೂ ಉತ್ಕೃಷ್ಟ ಕಾರ್ಯಮಾದರಿಗಳ ಸೃಷ್ಟಿ ಮತ್ತು ಅವುಗಳ ವ್ಯಾಪಕ ಅಳವಡಿಕೆಗೆ ಪ್ರೋತ್ಸಾಹ.


## ಮೌಲ್ಯಗಳು

- ಆತ್ಮೀಯತೆ
- ಬದ್ಧತೆ
- ರಾಷ್ಟ್ರಭಕ್ತಿ
- ಸಮಗ್ರತೆ (Integrity)

# ರಾಷ್ಟ್ರೋತ್ಥಾನ ಪರಿಷತ್


## ವಾರ್ಷಿಕ ವರದಿ: 2022–23

# ರಾಷ್ಟ್ರೋತ್ಥಾನ ಪರಿಷತ್
# ಆಡಳಿತ ಮಂಡಳಿ



**ಅಧ್ಯಕ್ಷರು**

ಶ್ರೀ ಎಂ. ಪಿ. ಕುಮಾರ್



**ಉಪಾಧ್ಯಕ್ಷರು**

ಶ್ರೀ ಎ. ಆರ್. ದ್ವಾರಕನಾಥ್



**ಪ್ರಧಾನ ಕಾರ್ಯದರ್ಶಿ**

ಶ್ರೀ ನಾ. ದಿನೇಶ್ ಹೆಗ್ಡೆ



**ಖಜಾಂಚಿ**

ಶ್ರೀ ಕೆ. ಎಸ್. ನಾರಾಯಣ


## ಸದಸ್ಯರು




ಶ್ರೀ ಅಶೋಕ್ ಸೋನ್‌ಕರ್



ಶ್ರೀ ಬಿ. ಎಸ್. ರವಿಕುಮಾರ್



ಶ್ರೀ ಗಜಾನನ ಲೋಂಢೆ



ಶ್ರೀ ಗಣಪತಿ ಹೆಗಡೆ

# ರಾಷ್ಟ್ರೋತ್ಥಾನ ಪರಿಷತ್

## ಸ್ವಸ್ಥ–ಸುಸ್ಥಿರ ಸಮಾಜನಿರ್ಮಾಣ

scan/ click for video

ಅನನ್ಯ ರಾಷ್ಟ್ರಪ್ರೇಮವನ್ನು ಮೈಗೂಡಿಸಿಕೊಂಡ ಸಾವಿರಾರು ಸ್ವಯಂಸೇವಕರು ಬಿತ್ತಿದ ಬೀಜವೊಂದು ಇಂದು ಸೇವಾ ಕ್ಷೇತ್ರದ ಹೆಮ್ಮರವಾಗಿ ಬೆಳೆದು ನಿಂತಿದೆ!

ಶ್ರೀ ಯಾದವರಾವ್ ಜೋಷಿ, ಶ್ರೀ ಹೊ. ವೆ. ಶೇಷಾದ್ರಿ ಮೊದಲಾದ ಪ್ರಾಜ್ಞರ ಮಾರ್ಗದರ್ಶನದಲ್ಲಿ ರಾಷ್ಟ್ರೋತ್ಥಾನ ಪರಿಷತ್ ತನ್ನ ಸೇವಾ ಕಾರ್ಯವನ್ನು ಪ್ರಾರಂಭಿಸಿತು.

1965ರಲ್ಲಿ ಸ್ವಯಂಸೇವಾ ಸಂಸ್ಥೆಯಾಗಿ ರಾಷ್ಟ್ರೋತ್ಥಾನ ಪರಿಷತ್ 'ಜನಜಾಗೃತಿ–ಜನಶಿಕ್ಷಣ–ಜನಸೇವಾ' ಎನ್ನುವ ಮಾರ್ಗದರ್ಶಕ ಅಂಶಗಳೊಂದಿಗೆ ಪಯಣ ಆರಂಭಿಸಿ, ಈಗ 'ಸ್ವಸ್ಥ–ಸುಸ್ಥಿರ ಸಮಾಜನಿರ್ಮಾಣ' ಎನ್ನುವ ಉನ್ನತ ಲಕ್ಷ್ಯವನ್ನಿಟ್ಟುಕೊಂಡು ಸಮಾಜಸೇವಾ ಕೈಂಕರ್ಯವನ್ನು ಮುನ್ನಡೆಸುತ್ತಿದೆ.

'ಭಾರತೀಯತೆಯ ಸಮಗ್ರ ಮನೋಭಾವ' ರಾಷ್ಟ್ರೋತ್ಥಾನ ಪರಿಷತ್ತಿನ ಆತ್ಮವಾಗಿದ್ದು, ಆತ್ಮೀಯತೆ, ಬದ್ಧತೆ, ರಾಷ್ಟ್ರಭಕ್ತಿ ಹಾಗೂ ಸಮಗ್ರತೆ ರಾಷ್ಟ್ರೋತ್ಥಾನ ಪರಿಷತ್‌ನ ಮೌಲ್ಯಗಳಾಗಿವೆ.

ತನ್ನ ಪ್ರಾರಂಭಿಕ ಹೆಜ್ಜೆಯಾಗಿ, ರಾಷ್ಟ್ರೀಯತೆಯ ಭಾವನೆಯನ್ನು ಜಾಗೃತಗೊಳಿಸುವ "ಉತ್ಥಾನ" ಮಾಸಪತ್ರಿಕೆಯನ್ನು ರಾಷ್ಟ್ರೋತ್ಥಾನ ಪರಿಷತ್ 1965ರಲ್ಲಿ ಹೊರತಂದಿತು. ನಂತರದ ದಿನಗಳಲ್ಲಿ ರಾಷ್ಟ್ರೋತ್ಥಾನ ಪರಿಷತ್ ಭಾರತೀಯ ಜೀವನ ಮೌಲ್ಯಗಳನ್ನು ಬೇರೂರಿಸುವ ಸಾಹಿತ್ಯ ಪ್ರಕಟಣೆಗಳ ಮೂಲಕ, ಅದರಲ್ಲೂ ಮುಖ್ಯವಾಗಿ ಭಾರತ–ಭಾರತಿ ಸರಣಿಯ ಪುಸ್ತಕಗಳ ಮೂಲಕ ಜನಮಾನಸವನ್ನು ತಲುಪಿತು. ಹಾಗೆಯೇ ತನ್ನ ಪಯಣವನ್ನು ಮುಂದುವರೆಸಿದ ಸಂಸ್ಥೆಯು 'ಅವಕಾಶಕ್ಕಾಗಿ ಕಾಯದೇ' ನಿರಂತರವಾಗಿ 'ಸೇವಾವಕಾಶಗಳನ್ನು ತಾನೇ ಹುಡುಕಿಕೊಂಡು', ತನ್ನ ಸೇವಾ ವಿಸ್ತಾರವನ್ನು ಹೆಚ್ಚಿಸುತ್ತಾ ಮುನ್ನಡೆಯಿತು. ದಿನಕಳೆದಂತೆ ಸಂಸ್ಥೆಯ ಕಾರ್ಯವ್ಯಾಪ್ತಿಯು ಆರೋಗ್ಯ, ಶಿಕ್ಷಣ, ಪ್ರಕೃತಿ ಸಂರಕ್ಷಣೆ ಹಾಗೂ ಸೇವಾ ವಸತಿಗಳ ಅಭಿವೃದ್ಧಿ ಮುಂತಾದ ಕ್ಷೇತ್ರಗಳಿಗೆ ಪಸರಿಸಿತು. ಕರ್ನಾಟಕದ ಬಹುತೇಕ ಎಲ್ಲ ಜಿಲ್ಲೆಗಳಿಗೆ ರಾಷ್ಟ್ರೋತ್ಥಾನದ ಚಟುವಟಿಕೆಗಳು ತಲುಪಿದವು.

**ಇಂದು ರಾಷ್ಟ್ರೋತ್ಥಾನದ ಚಟುವಟಿಕೆಗಳು ಸರ್ವವ್ಯಾಪಿಯಾಗಿ–ಸರ್ವಸ್ಪರ್ಶಿಯಾಗಿ ಬೆಳೆದು ನಿಂತಿವೆ:**

- 18ಕ್ಕೂ ಅಧಿಕ ಪ್ರಕಲ್ಪಗಳು
- 1100ಕ್ಕೂ ಹೆಚ್ಚು ಸಾಹಿತ್ಯ ಪ್ರಕಟಣೆಗಳು ಹಾಗೂ ಉತ್ಥಾನ ಮಾಸಪತ್ರಿಕೆ
- ಅತ್ಯಾಧುನಿಕ ಮುದ್ರಣ ಸಾಮರ್ಥ್ಯ ಹೊಂದಿರುವ ಮುದ್ರಣಾಲಯ
- ನಗರ ಮತ್ತು ಗ್ರಾಮೀಣ ಪ್ರದೇಶಗಳ ಹಿಂದುಳಿದ ಮಕ್ಕಳಿಗಾಗಿ ರಾಜ್ಯ ಪಠ್ಯಕ್ರಮದ 18 ಶಾಲೆಗಳು
- 'ಪಂಚಮುಖಿ ಶಿಕ್ಷಣ'ದ ಮೂಲಕ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಶ್ರಮಿಸುತ್ತಿರುವ 11 ಸಿ.ಬಿ.ಎಸ್.ಎ. ಪಠ್ಯಕ್ರಮದ ವಿದ್ಯಾಕೇಂದ್ರಗಳು
- 200ಕ್ಕೂ ಹೆಚ್ಚಿನ ಸೇವಾವಸತಿಗಳಲ್ಲಿ 350+ ಶಾಲಾ ನಂತರದ ಕಲಿಕಾ ತರಬೇತಿ ಕೇಂದ್ರಗಳು ಹಾಗೂ 20 ಸೇವಾವಸತಿಗಳ ಸಮಗ್ರ ಅಭಿವೃದ್ಧಿ
- ಯಾವುದೇ ಭೇದ–ಭಾವವಿಲ್ಲದೇ, ಅಗತ್ಯವಿರುವ ಎಲ್ಲ ರೋಗಿಗಳಿಗೂ ಸುರಕ್ಷಿತ ರಕ್ತವನ್ನು ನೀಡುವ 2 ರಕ್ತಕೇಂದ್ರಗಳು, ಬೆಂಗಳೂರು ಹಾಗೂ ಹುಬ್ಬಳ್ಳಿಯಲ್ಲಿ

- ತಲಸ್ಸೆಮಿಯಾ ಪೀಡಿತ ಮಕ್ಕಳಿಗೆ ಉಚಿತ ಆರೈಕಾ ಕೇಂದ್ರ
- ದೈಹಿಕ, ಮಾನಸಿಕ, ಬೌದ್ಧಿಕ ಮತ್ತು ಆಧ್ಯಾತ್ಮಿಕ ಉನ್ನತಿಗೆ ಸಹಕರಿಸುವ 20+ ಯೋಗ ಕೇಂದ್ರಗಳು
- ದೇಶೀ ತಳಿಯ ಗೋವುಗಳ ಸಂರಕ್ಷಣೆ, ಪ್ರಚಾರ ಹಾಗೂ ಅಭಿವೃದ್ಧಿಗಾಗಿ ಗೋಶಾಲೆ
- 35 ಏಕರೆ ಭೂಮಿಯಲ್ಲಿ 15,000ಕ್ಕೂ ಅಧಿಕ ಸಸಿ ನೆಡುವಿಕೆ
- ಗ್ರಾಮೀಣ ಮತ್ತು ಹಿಂದುಳಿದ ಪ್ರದೇಶಗಳ ಪ್ರತಿಭಾನ್ವಿತ ಮತ್ತು ಅರ್ಹ ಬಡ ಮಕ್ಕಳಿಗೆ ಉಚಿತ ಪದವಿ ಪೂರ್ವ ಶಿಕ್ಷಣ ಹಾಗೂ ಉನ್ನತ ಶಿಕ್ಷಣದ ಪ್ರವೇಶ ಪರೀಕ್ಷೆಗಳಿಗೆ ತರಬೇತಿ ನೀಡುವ ತಪಸ್ ಮತ್ತು ಸಾಧನಾ ಯೋಜನೆಗಳು
- ಆಧುನಿಕ ವೈದ್ಯಕೀಯ ಪದ್ಧತಿ, ಆಯುರ್ವೇದ, ಹೋಮಿಯೋಪತಿ, ಯೋಗ ಮತ್ತು ಪ್ರಕೃತಿ ಚಿಕಿತ್ಸೆಗಳನ್ನೊಳಗೊಂಡ ಸಮಗ್ರ ಚಿಕಿತ್ಸೆಯ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ, ಬೆಂಗಳೂರಿನಲ್ಲಿ

ಹೀಗೆ ರಾಷ್ಟ್ರೋತ್ಥಾನ ಪರಿಷತ್‌ನ ವೃಕ್ಷ, ಹಲವು ಆಯಾಮಗಳೊಡನೆ ದಿನದಿಂದ ದಿನಕ್ಕೆ ಬೆಳೆಯುತ್ತಲೇ ಇದೆ.

ಕಾರ್ಯಸಾಧನೆಯ ದೃಷ್ಟಿಯಿಂದ ರಾಷ್ಟ್ರೋತ್ಥಾನ ಪರಿಷತ್ ತನ್ನೆಲ್ಲ ಚಟುವಟಿಕೆಗಳನ್ನು ಸಾಹಿತ್ಯ, ಶಿಕ್ಷಣ ಹಾಗೂ ಸೇವೆ ಎನ್ನುವ ಮೂರು ವಿಭಾಗಗಳಲ್ಲಿ ವಿಂಗಡಿಸಿ, ಅನುಷ್ಠಾನಗೊಳಿಸುತ್ತದೆ.

ಉದ್ದೇಶದಲ್ಲಿ ಸ್ಪಷ್ಟತೆ, ಕಾರ್ಯ ಮಾದರಿಯಲ್ಲಿ ಉತ್ಕೃಷ್ಟತೆ, ಕಾರ್ಯನಿರ್ವಹಣೆಯಲ್ಲಿ ನಿಖರತೆ, ವೃತ್ತಿಪರ ದಕ್ಷತೆ, ಸೇವಾ ಕೈಂಕರ್ಯದಲ್ಲಿ ಹಾರ್ದಿಕ ಭಾವ ಹಾಗೂ ಪ್ರತಿ ಹಂತದ ಚಿಕ್ಕಪುಟ್ಟ ಕೆಲಸಗಳನ್ನೂ ಸಹ ಅತ್ಯಂತ ಶ್ರದ್ಧೆಯಿಂದ, ಅಚ್ಚುಕಟ್ಟುತನದಿಂದ ಮಾಡುವುದು ಸಂಸ್ಥೆಯ ವಿಶೇಷತೆ. ಆದ್ದರಿಂದಲೇ ಇಂದು ರಾಷ್ಟ್ರೋತ್ಥಾನ ಪರಿಷತ್‌ನ ಯೋಜನೆಗಳು ಅತಿ ವೇಗವಾಗಿ ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ತಲುಪಿ, ಸಮಾಜದ ಮೇಲೆ ಪ್ರಭಾವ ಬೀರಿವೆ. ಸಮಾಜದ ವಿವಿಧ ಆಯಾಮಗಳಲ್ಲಿ ಗಮನಾರ್ಹ ಬದಲಾವಣೆಗೆ ಕಾರಣವಾಗಿವೆ.

**ರಾಷ್ಟ್ರೋತ್ಥಾನ ಪರಿಷತ್**

# 93/1, 'ಕೇಶವ ಶಿಲ್ಪ', ಕೆಂಪೇಗೌಡನಗರ, ಬೆಂಗಳೂರು – 560 004

ದೂರವಾಣಿ: 080-2661 2730/ 31/ 32/ 94482 84602
ಮಿಂಚಂಚೆ: info@rashtrotthana.org

**www.rashtrotthana.org**

FB & Instagram: rashtrotthanaparishath
Twitter: rashtrotthana_p
YouTube: Rashtrotthana
LinkedIn: rashtrotthana-parishat

# ರಾಷ್ಟ್ರೋತ್ಥಾನ ಪರಿಷತ್

## 18 ಸಮಾಜಸೇವಾ ಪ್ರಕಲ್ಪಗಳು 4 ಆಯಾಮಗಳಲ್ಲಿ

## ಸಾಹಿತ್ಯ • ಶಿಕ್ಷಣ • ಆರೋಗ್ಯ • ಸೇವೆ

---

**ಸತ್ ಚಿಂತನ ಜಾಗೃತಿಗೆ ಸಾಹಿತ್ಯ**

- ಉತ್ಥಾನ
- ಸಾಹಿತ್ಯ
- ಮುದ್ರಣಾಲಯ

-----

**ಪಂಚಮುಖೀ ಶಿಕ್ಷಣಕ್ಕಾಗಿ**

- ರಾಜ್ಯ ಪಠ್ಯಕ್ರಮ ಶಾಲೆಗಳು
- ಸಿ.ಬಿ.ಎಸ್.ಇ. ಶಾಲೆಗಳು
- ತಪಸ್–ಸಾಧನಾ
- ಪ್ರಶಿಕ್ಷಣಭಾರತಿ
- ಸಂವಿತ್ ರಿಸರ್ಚ್ ಫೌಂಡೇಷನ್


**ಆರೋಗ್ಯ ಸೇವೆಗಳು:**

- ಯೋಗ
- ರಕ್ತಕೇಂದ್ರ
- ಸಂರಕ್ಷಾ
- ಆಸ್ಪತ್ರೆ
- ಅಗ್ನಿವೇಶ ಆಯುರ್ವೇದ ಅನುಷ್ಠಾನ
- ಸ್ವಾಸ್ಥ್ಯಭಾರತೀ

-----

**ಜನ–ಜೀವ–ಜೀವನ ಸೇವೆಗಳು:**

- ಸೇವಾ ವಸತಿ
- ಮಾಧವ ಸೃಷ್ಟಿ



# ಮಾಗಿ ಫಲಬರುತ್ತಿರುವ ಕಾಲದೊಳಗೊಂದು ಧನ್ಯತೆಯ ಸಂದೇಶ

ಸ್ವಸ್ಥ–ಸುಸ್ಥಿರ ಸಮಾಜನಿರ್ಮಾಣ ಮಾಡುವ ನಿಟ್ಟಿನಲ್ಲಿ ಕಳೆದ 58 ವರ್ಷಗಳಿಂದ ರಾಷ್ಟ್ರೋತ್ಥಾನ ಪರಿಷತ್ ಸಮಾಜಸೇವಾ ಕೈಂಕರ್ಯದಲ್ಲಿ ಸಕ್ರಿಯವಾಗಿದೆ. ವ್ಯಕ್ತಿ ನಿರ್ಮಾಣ, ತನ್ಮೂಲಕ ಸಮಾಜದಲ್ಲಿ ಪರಿವರ್ತನೆ, ಈ ಹಿನ್ನೆಲೆಯಲ್ಲಿ ಪರಿಷತ್ ನಿರಂತರವಾಗಿ ತನ್ನ ಪ್ರಭಾವ ವಲಯವನ್ನು ವಿಸ್ತರಿಸುತ್ತಾ ಬಂದಿದೆ.

ಕೆಲ ಕಾಲದ ಹಿಂದೆ 'ನಮ್ಮ ಕೆಲಸದ ಗಾತ್ರವನ್ನು ನೋಡಬೇಡಿ, ಗುಣವಂತಿಕೆಯನ್ನು ಮಾತ್ರ ನೋಡಿ' ಎಂದು ಹೇಳುವ ಹಂತದಲ್ಲಿದ್ದೆವು. ಅದನ್ನು ದಾಟಿ ಕೆಲ ವರ್ಷಗಳೇ ಆಗಿವೆ. ಈಗ 'ನಮ್ಮ ಕೆಲಸದ ಗಾತ್ರವನ್ನೂ ನೋಡಿ' ಎನ್ನುವಲ್ಲಿಗೆ ಬಂದು ನಿಂತಿದ್ದೇವೆ ಎಂದು ಮತ್ತೆ ಜ್ಞಾಪಿಸಿಕೊಂಡು ನಿವೇದಿಸಲು ಹೆಮ್ಮೆಯಾಗುತ್ತದೆ. 'ನಮ್ಮ ಕೆಲಸದಲ್ಲಿ ಆಯಾಸಕ್ಕಾಗಲೀ, ನಿರುತ್ಸಾಹಕ್ಕಾಗಲೀ ಎಂದಿಗೂ ಅವಕಾಶವಿಲ್ಲ' ಎಂದು ಮಾನ್ಯ ಜಯದೇವ್ ಅವರು ಹೇಳುತ್ತಿದ್ದ ಕಾರ್ಯಸೂತ್ರ ಈಗ ನಮ್ಮಲ್ಲಿ ರಕ್ತಗತವಾಗಿಬಿಟ್ಟಿದೆ. ಆರಂಭದ ವರ್ಷಗಳಲ್ಲಿ 'ನಮ್ಮದು ದೀರ್ಘಕಾಲದ ನಂತರ ಫಲ ಕೊಡುವ ಕೆಲಸ' ಎಂದು ಹೇಳುತ್ತಿದ್ದೆವು. ಈಗ ಕೆಲಸದ ಸತ್ಫಲವನ್ನು ಕಾಣುವ ಸುಯೋಗ ನಮಗೆಲ್ಲ ಬಂದಿದೆ. ಶಾಲೆ–ಕಾಲೇಜುಗಳಾಗಲಿ, ರಕ್ತ ಕೇಂದ್ರಗಳಾಗಲಿ, ತಪಸ್–ಸಾಧನಾಗಳಾಗಲಿ, ಗೋಶಾಲೆಯಾಗಲಿ, ಶಿಕ್ಷಣದ ಗುಣಮಟ್ಟವನ್ನು ಉನ್ನತೀಕರಿಸಲು ಯತ್ನಿಸುತ್ತಿರುವ 'ಸಂವಿತ್' ಸಂಶೋಧನಾ ಪ್ರತಿಷ್ಠಾನವಾಗಲಿ – ಒಂದೊಂದೂ ಅನನ್ಯ, ಅಸಾಮಾನ್ಯ ರೀತಿಯದಾದದ್ದು ಎಂಬುದು ಧನ್ಯತೆಯನ್ನು ತಂದುಕೊಡುವ ವಿಚಾರ.

ಲೆಕ್ಕಹಾಕಿ ಮಾಡಿ ಪುಟ್ಟಪುಟ್ಟ ಹೆಜ್ಜೆಗಳನ್ನು ಇಡಬೇಕಾಗಿದ್ದ ಸ್ಥಿತಿಯಿಂದ ಮುಂದೆ ಬಂದಿದ್ದು, ಈಗ ಸಮಾಜವೇ ನಮ್ಮ ಮುನ್ನಡೆಯ ವೇಗವನ್ನು ನಿರ್ಧರಿಸುತ್ತಿದೆ ಎಂದು ಹೇಳಬಹುದು. ಉನ್ನತ ಧ್ಯೇಯಕ್ಕೆ ಅಭಿಮುಖವಾದ ನಿರಂತರ ಕಾರ್ಯವಿಸ್ತಾರವನ್ನು ಸಮಾಜ ನಮ್ಮಿಂದ ಅಪೇಕ್ಷಿಸುತ್ತಿದೆ. ಸಮಾಜ ನಮ್ಮಲ್ಲಿ ಇರಿಸಿರುವ ವಿಶ್ವಾಸವೇ ನಮ್ಮ ನಿಜವಾದ ಬಂಡವಾಳವೂ ಆಗಿದೆ. ಅದಕ್ಕೆ ನಾವು ಸ್ಪಂದಿಸಲೇಬೇಕಾಗಿದೆ. ನಮ್ಮ ಗುರಿ ದೊಡ್ಡದಾಗಿರಲಿ. ಅಬ್ದುಲ್ ಕಲಾಂ ಹೇಳುತ್ತಿದ್ದಂತೆ ಯಾವಾಗಲೂ ದೊಡ್ಡ ಕನಸು ನಮ್ಮದಾಗಿರಲಿ. ದೃಢವಾದ ಹೆಜ್ಜೆಗಳನ್ನಿಡುತ್ತ ಪಯಣ ಸಾಗಿಸೋಣ. ಈ ಸಂದರ್ಭದಲ್ಲಿ ಹೇಳುವುದಾದರೆ, "ರಾಷ್ಟ್ರೋತ್ಥಾನ ಪರಿಷತ್ ಎಂದರೆ ಎಲ್ಲ ಕಾರ್ಯಕರ್ತರ, ಹಿತೈಷಿಗಳ ಮತ್ತು ಬೆಂಬಲಿಗರ ಉದ್ದನೆಯ ನೆರಳು".

ರಾಷ್ಟ್ರೋತ್ಥಾನ ಪರಿಷತ್ 2022–23ರ ಆರ್ಥಿಕ ವರ್ಷದಲ್ಲಿ ನಡೆಸಿದ ಪ್ರಮುಖ ಚಟುವಟಿಕೆಗಳ ಒಂದು ಹಿನ್ನೋಟ ಇಲ್ಲಿದೆ. ಈ ಚಟುವಟಿಕೆಗಳ ವರದಿಗಳು 'ಕಿಟಕಿಯ ಮೂಲಕ ಆಕಾಶ ನೋಡಿದ ಹಾಗೆ', ಆಕಾಶ ಎಷ್ಟು ದೊಡ್ಡದು ಅನ್ನುವುದು ಎಲ್ಲರಿಗೂ ಗೊತ್ತಿದೆ. ನಿರಂತರವಾಗಿ ಚಲಿಸುತ್ತಿರುವವನಿಗೇ ಫಲಗಳ–ಹಣ್ಣುಗಳ ರುಚಿಯ ಆನಂದ ಪ್ರಾಪ್ತವಾಗುತ್ತದೆ. ಸೂರ್ಯದೇವನು ಸತತವಾಗಿ ಚಲಿಸುತ್ತಲೇ ಇರುತ್ತಾನೆ. ಕ್ಷಣಕಾಲವೂ ಸಹ ಆಲಸಿಯಾಗಿ ನಿಂತಿರುವುದಿಲ್ಲ. ಸನ್ಮಾರ್ಗದಲ್ಲಿ ಮಾನವನು ಯಾವಾಗಲೂ ಮುನ್ನಡೆಯುತ್ತಿರಬೇಕು. ಚರೈವೇತಿ ಚರೈವೇತಿ – ಇದೇ ಸದಾಚಾರದ ಶಾಶ್ವತ ಸಂದೇಶ. ಆ ಪುರಾತನ – ಚಿರನೂತನ ಸಂದೇಶವನ್ನು ಸದಾ ಮನಸ್ಸಿನಲ್ಲಿ ಧರಿಸಿ ಮುಂದೆ ಸಾಗೋಣ.

**ಬನ್ನಿ! ಜೊತೆಗೂಡಿ ಮುನ್ನಡೆಯೋಣ...**



**ನಾ. ದಿನೇಶ್ ಹೆಗ್ಡೆ**
ಪ್ರಧಾನ ಕಾರ್ಯದರ್ಶಿ
ರಾಷ್ಟ್ರೋತ್ಥಾನ ಪರಿಷತ್

# ರಾಷ್ಟ್ರೋತ್ಥಾನ ಪರಿಷತ್
## 2022–23ರ ವಾರ್ಷಿಕ ವರದಿ: ಪ್ರಕಲ್ಪಶಃ

# ಅನುಕ್ರಮಣಿಕೆ


| | |
|---|---|
| ರಾಷ್ಟ್ರೋತ್ಥಾನ ಯೋಗವಿಜ್ಞಾನ ಮತ್ತು ಸಂಶೋಧನ ಸಂಸ್ಥೆ | 1 |
| ರಾಷ್ಟ್ರೋತ್ಥಾನ ರಕ್ತಕೇಂದ್ರ – ಬೆಂಗಳೂರು | 7 |
| ರಾಷ್ಟ್ರೋತ್ಥಾನ ರಕ್ತಕೇಂದ್ರ – ಹುಬ್ಬಳ್ಳಿ | 11 |
| ಸಂರಕ್ಷಾ: ತಲಸ್ಸೆಮಿಯಾ ಆರೈಕೆ ಕೇಂದ್ರ | 15 |
| ಅಗ್ನಿವೇಶ ಆಯುರ್ವೇದ ಅನುಷ್ಠಾನ | 17 |
| ಸ್ವಾಸ್ಥ್ಯಭಾರತೀ | 21 |
| ಮಾಧವ ಸೃಷ್ಟಿ | 25 |
| ರಾಷ್ಟ್ರೋತ್ಥಾನ ವಿದ್ಯಾಲಯ: ರಾಜ್ಯ ಪಠ್ಯಕ್ರಮ ಶಾಲೆಗಳು | 31 |
| ರಾಷ್ಟ್ರೋತ್ಥಾನ ವಿದ್ಯಾಕೇಂದ್ರ: ಸಿ.ಬಿ.ಎಸ್.ಇ. ಶಾಲೆಗಳು | 41 |
| ಪ್ರಶಿಕ್ಷಣಭಾರತಿ: ಶಿಕ್ಷಕರ ಪ್ರಶಿಕ್ಷಣ ಪ್ರಕಲ್ಪ | 49 |
| ಗುಣಮಟ್ಟ ಮತ್ತು ವ್ಯವಸ್ಥೆ ಪ್ರಕಲ್ಪ | 53 |
| ಜಯದೇವ ಸ್ಮಾರಕ ರಾಷ್ಟ್ರೋತ್ಥಾನ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ | 57 |
| ತಪಸ್ | 63 |
| ಸಾಧನಾ | 67 |
| ಸೇವಾ ವಸತಿ ಪ್ರಕಲ್ಪ | 71 |
| ರಾಷ್ಟ್ರೋತ್ಥಾನ ಸಾಹಿತ್ಯ ಹಾಗೂ ಉತ್ಥಾನ ಮಾಸಪತ್ರಿಕೆ | 81 |
| ಸಂವಿತ್ ರಿಸರ್ಚ್ ಫೌಂಡೇಶನ್ | 89 |

# ರಾಷ್ಟ್ರೋತ್ಥಾನ ಯೋಗವಿಜ್ಞಾನ ಮತ್ತು ಸಂಶೋಧನ ಸಂಸ್ಥೆ

scan/ click for video



ಬೆಂಗಳೂರಿನ ಜಯನಗರದಲ್ಲಿ 8ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಕಾರ್ಯಕ್ರಮ

ರಾಷ್ಟ್ರೋತ್ಥಾನ ಪರಿಷತ್‌ನ "ಸ್ವಸ್ಥ–ಸುಸ್ಥಿರ ಸಮಾಜನಿರ್ಮಾಣ" ಗುರಿಯನ್ನು ಸಾಕಾರಗೊಳಿಸಲು ದಿ. ಶ್ರೀ ಅಜಿತ್ ಕುಮಾರ್‌ರವರ ಪ್ರೇರಣೆಯೊಂದಿಗೆ ಜಯನಗರದಲ್ಲಿರುವ ಅಜಿತಸ್ಮೃತಿಯಲ್ಲಿ ರಾಷ್ಟ್ರೋತ್ಥಾನ ಶಾರೀರಿಕ ಶಿಕ್ಷಾ ಕೇಂದ್ರವನ್ನು ಆರಂಭಿಸಲಾಯಿತು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಚಾರಕರಾಗಿದ್ದ ಅಜಿತ್‌ಕುಮಾರ್ ಅವರು ಪ್ರಯೋಗಶೀಲತೆಯಲ್ಲಿ ಹೆಸರುವಾಸಿಯಾಗಿದ್ದುದಲ್ಲದೇ, ಅಂತಾರಾಷ್ಟ್ರೀಯ ಖ್ಯಾತಿಯ ಯೋಗಾಚಾರ್ಯರಾದ ಮೈಸೂರಿನ ಶ್ರೀ ಪಟ್ಟಾಭಿ ಜೋಯಿಸರು ಹಾಗೂ ಪುಣೆಯಲ್ಲಿನ ಡಾ॥ ಬಿ.ಕೆ.ಎಸ್ ಅಯ್ಯಂಗಾರ್ ಅವರ ಬಳಿ ಯೋಗವನ್ನು ಕಲಿತು, ಸಂಘದ ಚಟುವಟಿಕೆಗಳಲ್ಲಿ ಯೋಗಾಸನವನ್ನು ರೂಢಿಗೆ ತಂದಿದ್ದರು.

ರಾಷ್ಟ್ರೋತ್ಥಾನದ ಈ ಹೊಸ ಯೋಜನೆಗೆ ಅವರೇ ಮಾರ್ಗದರ್ಶಕರಾಗಿ ಮುಂದೆ ನಿಂತರು. ಜಯನಗರದಲ್ಲಿರುವ ರಾಷ್ಟ್ರೋತ್ಥಾನ ಶಿಕ್ಷಾ ಕೇಂದ್ರ "ಅಜಿತರ" ಮೆದುಳಿನ ಶಿಶು ಎಂದರೂ ತಪ್ಪಾಗದು. 1988ರಲ್ಲಿ ಜಯನಗರದ ಶಿಕ್ಷಾಕೇಂದ್ರದಲ್ಲಿ, ದೇಹದಾರ್ಢ್ಯ ವಿಭಾಗದಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ 'ಜಿಮ್' (ಅಂಗಸೌಷ್ಠವ ವಿಭಾಗ) ಸೌಲಭ್ಯವನ್ನು ಆರಂಭಿಸಲಾಯಿತು, ಅದರೊಂದಿಗೆ ತೇ–ಕ್ವಾನ್–ಡೋ (Tae-Kwan-Do) ಎನ್ನುವ ನಿಶ್ಶಸ್ತ್ರ ಹೋರಾಟದ ಕಲೆಯನ್ನು ಕಲಿಸುವ ತರಗತಿಗಳನ್ನೂ ಆರಂಭಿಸಲಾಯಿತು.

ತದನಂತರ 1981ರಲ್ಲಿ 'ಕೇಶವಶಿಲ್ಪ'ದಲ್ಲಿ ಎರಡನೇ ಯೋಗ ಕೇಂದ್ರವು ಆರಂಭಗೊಂಡು. ಪ್ರಸ್ತುತ ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ 19 ಹಾಗೂ ದಾವಣಗೆರೆ ಮತ್ತು ಮೈಸೂರಿನಲ್ಲಿ ತಲಾ ಒಂದು ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

## ಕಾಲದೊಂದಿಗೆ ಹೆಜ್ಜೆ:

ಕಾಲಕ್ರಮದಲ್ಲಿ ಸಮಾಜದ ಅಪೇಕ್ಷೆಯಂತೆ ದೈಹಿಕ ಫಿಟ್ನೆಸ್ ವಿಭಾಗ, ಕರಾಟೆ, ನೃತ್ಯ–ಸಂಗೀತ ತರಬೇತಿ ಕೇಂದ್ರ, ಅಂಗಮರ್ದನ ಚಿಕಿತ್ಸೆ, ಚೆಸ್, ಟೇಬಲ್ ಟೆನಿಸ್, ಅಕ್ಯುಪ್ರೆಷರ್ ಚಿಕಿತ್ಸೆ, ಆಪ್ತ ಸಲಹಾ ಕೇಂದ್ರ, ಈಜುಕೊಳ, ಕಳರಿಪಯಟ್ಟು, ಕಥಕ್ ತರಗತಿಗಳು ಮೊದಲಾದ ಚಟುವಟಿಕೆಗಳನ್ನು ಪ್ರಾರಂಭಿಸಲಾಯಿತು.

ದೈಹಿಕ ಆರೋಗ್ಯದ ಜೊತೆಗೆ ವ್ಯಕ್ತಿಯ ಮಾನಸಿಕ, ಬೌದ್ಧಿಕ, ಭಾವನಾತ್ಮಕ, ಆರೋಗ್ಯದ ಸುಧಾರಣೆಯೊಂದಿಗೆ ವ್ಯಕ್ತಿಯು ಸ್ವಸ್ಥ ಹಾಗೂ ಸದೃಢ ಸಮಾಜಕ್ಕೆ ಹೆಚ್ಚಿನ ಕೊಡುಗೆ ನೀಡಬೇಕೆಂದು ಮತ್ತು ಯೋಗವನ್ನು ಸಂಶೋಧನೆ ಒಳಪಡಿಸಬೇಕೆಂದು 2008ರಲ್ಲಿ ರಾಷ್ಟ್ರೋತ್ಥಾನ ಶಾರೀರಿಕ ಶಿಕ್ಷಾ ಕೇಂದ್ರವನ್ನು ರಾಷ್ಟ್ರೋತ್ಥಾನ ಯೋಗವಿಜ್ಞಾನ ಮತ್ತು ಸಂಶೋಧನ ಸಂಸ್ಥೆ ಎಂದು ಮರು ನಾಮಕರಣ ಮಾಡಲಾಯಿತು.

ಪ್ರಸಕ್ತ ಕರ್ನಾಟಕದ ವಿವಿಧೆಡೆ 21 ಯೋಗ ಕೇಂದ್ರಗಳಲ್ಲದೇ ಬೆಂಗಳೂರಿನಲ್ಲಿ 2 ಫಿಟ್ನೆಸ್ ಕೇಂದ್ರಗಳು, 5 ಕಡೆ ನೃತ್ಯ–ಸಂಗೀತ ಕೇಂದ್ರಗಳು, 4 ಕಡೆ ಕರಾಟೆ ತರಬೇತಿಯನ್ನು ನೀಡುತ್ತಿದೆ.

## ಉದ್ದೇಶ:

- ಯೋಗಾಭ್ಯಾಸಿಗಳಲ್ಲಿ ಸರ್ವತೋಮುಖ ವಿಕಾಸ, ಉತ್ತಮ ಜೀವನಶೈಲಿ ರೂಪಿಸುವುದು, ಸಕಾರಾತ್ಮಕ ಚಿಂತನೆಗೆ ಹಚ್ಚುವುದು.
- ಯೋಗಾಭ್ಯಾಸಿಗಳಲ್ಲಿ ಸಂವೇದನಾಶೀಲತೆ, ಸೇವಾಭಾವನೆ, ದೇಶ ಮೊದಲು ಎನ್ನುವ ಮನೋಭಾವನೆ ಬೆಳೆಸುವುದು.









## 2022–23ರ ಯೋಜನೆ:

- ಕಳೆದ ವರ್ಷದ 15 ಯೋಗ ಕೇಂದ್ರಗಳ ಜೊತೆಗೆ ಇನ್ನು 11 ಹೊಸ ಕೇಂದ್ರಗಳು ಸೇರಿ ಒಟ್ಟು 26 ಕೇಂದ್ರಗಳು, 1 ಫಿಟ್ನೆಸ್, 2 ಕರಾಟೆ ಕೇಂದ್ರಗಳು, 1 ನೃತ್ಯ–ಸಂಗೀತ ಕೇಂದ್ರ, 2 ಯೋಗ ಆಧಾರಿತ ಆಪ್ತ ಸಲಹಾ ಕೇಂದ್ರಗಳನ್ನು ಹೊಸದಾಗಿ ಆರಂಭಿಸಬೇಕೆಂಬ ಯೋಜನೆಯನ್ನು ಹಾಕಿಕೊಳ್ಳಲಾಯಿತು.
- ಪ್ರಸಕ್ತ ಇರುವ 136 ಶಿಕ್ಷಕರ ಜೊತೆಗೆ ಈ ವರ್ಷ 35 ಹಿರಿಯ ಅಭ್ಯಾಸಿಗಳನ್ನು ಆಯ್ಕೆ ಮಾಡಿ, ಶಿಕ್ಷಕರ ತರಬೇತಿ ನೀಡುವುದು.
- ಪ್ರವೇಶ ಹಾಗೂ ಪ್ರಗತ ಪಠ್ಯಕ್ರಮ ರಚನೆ ಹಾಗೂ ಪ್ರಾಯೋಗಿಕ ಕಾರ್ಯಕ್ರಮ.
- ಯೋಗ ತರಗತಿಗಳಲ್ಲಿ ಹಿಂದೂ ಸಾಮ್ರಾಜ್ಯೋತ್ಸವ, ರಾಮನವಮಿ, ಶ್ರೀ ವಿವೇಕಾನಂದ ಜಯಂತಿ, ರಕ್ಷಾಬಂಧನ ಮುಂತಾದ ಉತ್ಸವಗಳ ಆಚರಣೆ.
- ಯೋಗ ಅಭ್ಯಾಸದಿಂದ ವ್ಯಕ್ತಿಯ ದೈಹಿಕ, ಮಾನಸಿಕ, ಭಾವನಾತ್ಮಕ ಸ್ತರಗಳಲ್ಲಿ ಧನಾತ್ಮಕ

ಬದಲಾವಣೆ ಹಾಗೂ ಸೇವಾಭಾವ, ದೇಶ ಮೊದಲು ಎನ್ನುವ ಭಾವನೆ ಬೆಳೆದಿದೆಯೇ ಎನ್ನುವ ಕುರಿತಾಗಿ ಸಂಶೋಧನೆಗೆ ಪ್ರಶ್ನಾವಳಿಗಳನ್ನು ಸಿದ್ಧಪಡಿಸಿ, ಅಭ್ಯಾಸಿಗಳಿಗೆ ನೀಡಿ, ಅವರಲ್ಲಾದ ಬದಲಾವಣೆಯನ್ನು ದಾಖಲಿಸುವುದು.




## ಕಾರ್ಯಕ್ರಮಗಳು:





- **ರಾಷ್ಟ್ರೋತ್ಥಾನ ಯೋಗ ವಿಭಾಗಕ್ಕೆ 50 ವರ್ಷದ ಸುವರ್ಣಮಹೋತ್ಸವದ ನಿಮಿತ್ತ** ಈ ಬಾರಿಯ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಲಾಯಿತು.
    - 'ಸಮರ್ಥ ಭಾರತ ಟ್ರಸ್ಟ್' ಅವರ ಸಹಯೋಗದೊಂದಿಗೆ ಒಂದು ವಾರ ಕಾಲ ಆನ್‌ಲೈನ್-ಲೈವ್ ಉಪನ್ಯಾಸಗಳು
    - ಎಲ್ಲ ಯೋಗಕೇಂದ್ರಗಳಲ್ಲಿ ಅಭ್ಯಾಸಿಗಳಿಂದ ವಾಕಥಾನ್ ಕಾರ್ಯಕ್ರಮ (ಖ್ಯಾತ ಹೃದಯ ರೋಗತಜ್ಞ ಡಾ. ದೇವಿ ಪ್ರಸಾದ್ ಶೆಟ್ಟಿಯವರಿಂದ ಅಂತರಾಷ್ಟ್ರೀಯ ಯೋಗ ದಿನಾಚರಣೆಗೆ ಚಾಲನೆ ನೀಡಿದರು). ಶ್ರೀಮತಿ ಮಾಳವಿಕಾ ಅವಿನಾಶ್, ಜಯದೇವ ಆಸ್ಪತ್ರೆಯ ನಿರ್ದೇಶಕರಾದ ಡಾ|| ಸಿ. ಎನ್. ಮಂಜುನಾಥ್, ಬೆಂಗಳೂರು ವಿಶ್ವವಿದ್ಯಾಲಯದ ಮಾಜಿ ಕುಲಪತಿಗಳಾದ ಶ್ರೀ ಕೆ. ಸಿ. ವೇಣುಗೋಪಾಲ್, ರಾಜ್ಯಸಭಾ ಸದಸ್ಯರಾದ ಶ್ರೀ ಜಗ್ಗೇಶ್ ಅವರು ವಿವಿಧ ಕೇಂದ್ರಗಳಲ್ಲಿ ನಡೆದ ವಾಕಥಾನ್ ಹಾಗೂ ಅಂತರಾಷ್ಟ್ರೀಯ ಯೋಗ ದಿನಾಚರಣೆಯ ದಿನದಂದು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.
- ನವರಾತ್ರಿ ಹಬ್ಬದ ಪ್ರಯುಕ್ತ ಜಯನಗರ ಕೇಂದ್ರದಲ್ಲಿ ಸಾರ್ವಜನಿಕರಿಗಾಗಿ ಪ್ರಸಿದ್ಧ – **ದಾಂಡಿಯಾ ನೃತ್ಯೋತ್ಸವನ್ನು** ಆಯೋಜಿಸಲಾಯಿತು. 250 ಜನರು ಭಾಗವಹಿಸಿದ್ದರು.
- ರಾಷ್ಟ್ರೋತ್ಥಾನ ಕೇಂದ್ರದ ಕರಾಟೆ ವಿದ್ಯಾರ್ಥಿಗಳಿಗಾಗಿ ಡಿಸೆಂಬರ್ 3 ಹಾಗೂ 4ರಂದು ಜಯನಗರ ಕೇಂದ್ರದಲ್ಲಿ ಎರಡು ದಿನಗಳ **ಕಟಾ ಹಾಗೂ ಕುಮುಟೆ ವಿಭಾಗಗಳಲ್ಲಿ ಸ್ಪರ್ಧೆಯನ್ನು** ಏರ್ಪಡಿಸಲಾಗಿತ್ತು. ಕೇಂದ್ರದ 70 ವಿದ್ಯಾರ್ಥಿಗಳು ಪ್ರಶಸ್ತಿಗಳನ್ನು ಪಡೆದರು. ಕಾರ್ಯಕ್ರಮದಲ್ಲಿ ಕರ್ನಲ್ ವಿಜಯಕುಮಾರ್ ರವರು ಅತಿಥಿಗಳಾಗಿ ಆಗಮಿಸಿದ್ದರು.
- ಫಿಟ್‌ನೆಸ್ ಸೆಂಟರ್ ವತಿಯಿಂದ ಬೆಂಗಳೂರಿನಿಂದ **ಮೈಸೂರಿಗೆ ಸೈಕಲ್ ಜಾಥಾವನ್ನು** ಏರ್ಪಡಿಸಲಾಯಿತು. ಸುಮಾರು 40 ಅಭ್ಯಾಸಿಗಳು ಭಾಗವಹಿಸಿದ್ದರು.
- ನೃತ್ಯ ಸಂಗೀತ ಕೇಂದ್ರದ ವತಿಯಿಂದ ಜನವರಿ 19ರಂದು ಕುಂದಲಹಳ್ಳಿ ಯೋಗಕೇಂದ್ರದಲ್ಲಿ **ತ್ಯಾಗರಾಜ ಹಾಗೂ ಪುರಂದರದಾಸರ ಆರಾಧನೆಯನ್ನು** ಏರ್ಪಡಿಸಲಾಯಿತು.
- **ರಕ್ತದಾನ ಶಿಬಿರ:** ಯೋಗ ವಿಭಾಗಕ್ಕೆ 50 ವರ್ಷ ತುಂಬಿರುವ ಪ್ರಯುಕ್ತ, ಪ್ರತಿ ಕೇಂದ್ರದಲ್ಲೂ ರಕ್ತದಾನ ಶಿಬಿರ ಆಯೋಜನೆ ಮಾಡಲಾಗಿ, 550 ಮಂದಿ ರಕ್ತದಾನ ಮಾಡಿದರು.

- **ಪ್ರವಾಸ:** ಯೋಗ ವಿಭಾಗದ ಬಂಧುಗಳಿಗಾಗಿ ಒಂದು ದಿನದ ಪ್ರವಾಸವನ್ನು ತಲಕಾಡು ಹಾಗೂ ಸೋಮನಾಥ ದೇವಾಲಯಗಳಿಗೆ ಹಮ್ಮಿಕೊಳ್ಳಲಾಯಿತು.



## ತರಬೇತಿ ಕಾರ್ಯಾಗಾರಗಳು:

- ಯೋಗ ಶಿಕ್ಷಕರಿಗೆ 2022ರ ಜೂನ್ ಹಾಗೂ ಡಿಸೆಂಬರ್ ತಿಂಗಳಲ್ಲಿ ಒಂದು ದಿನದ ಯೋಗ ಶಿಕ್ಷಕರ ಪ್ರಶಿಕ್ಷಣ ವರ್ಗವನ್ನು ಏರ್ಪಡಿಸಲಾಯಿತು.
- ಶಿಬಿರದಲ್ಲಿ ಜ್ಞಾನಭಾರತಿ ಪ್ರಕಾಶನ ಲಿಮಿಟೆಡ್‌ನ ಅಧ್ಯಕ್ಷರಾದ ಶ್ರೀ ಕಜಂಪಾಡಿ ಸುಬ್ರಮಣ್ಯ ಭಟ್ ಅವರು, ಕರ್ನಾಟಕ ದಕ್ಷಿಣ ಪ್ರಾಂತ ಕಾರ್ಯವಾಹರಾದ ಶ್ರೀ ಜಯಪ್ರಕಾಶ್, ಖ್ಯಾತ ಪೌಷ್ಟಿಕ ತಜ್ಞೆ, ಡಾ॥ ಎಚ್. ಎಸ್ ಪ್ರೇಮಾ ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದರು.
- ಶಿಬಿರದಲ್ಲಿ ಒಟ್ಟು 98 ಪ್ರಶಿಕ್ಷಣಾರ್ಥಿಗಳು ಭಾಗವಹಿಸಿದ್ದರು.





## ಸೇವಾ ಚಟುವಟಿಕೆಗಳು:

- ಯೋಗವಿಭಾಗದ ಹಾಗೂ ಫಿಟ್‌ನೆಸ್ ಸೆಂಟರಿನ ಅಭ್ಯಾಸಿಗಳು ನಿಯಮಿತವಾಗಿ ಪರಿಷತ್ ನಡೆಸುವ ತಲಸ್ಸೆಮಿಯಾ ಡೇ ಕೇರ್ ಸೆಂಟರ್‌ಗೆ ಭೇಟಿ ನೀಡಿ ಅಲ್ಲಿ ಆರೈಕೆಯನ್ನು ಪಡೆಯುವ ಮಕ್ಕಳ ಆರೋಗ್ಯವನ್ನು ವಿಚಾರಿಸುವುದರ ಜೊತೆಗೆ ಅವರ ಪೋಷಕರೊಂದಿಗೆ ಸಮಲೋಚನೆಯನ್ನು ನಡೆಸುತ್ತಿದ್ದಾರೆ.
- ರಾಷ್ಟ್ರೋತ್ಥಾನ ಘಾಟಿ ಗೋಶಾಲೆಗೆ ಭೇಟಿ ನೀಡಿ, ಅಲ್ಲಿ ಗೋಪೂಜೆ ಹಾಗೂ ಸೇವಾ ಕಾರ್ಯಗಳಲ್ಲಿ ಅಭ್ಯಾಸಿಗಳು ನಿಯಮಿತವಾಗಿ ಪಾಲ್ಗೊಳ್ಳುತ್ತಿದ್ದಾರೆ.



- ರಾಷ್ಟ್ರೋತ್ಥಾನ ಆರೋಗ್ಯ ಸಂಕೀರ್ಣ ಕುಂದಲಹಳ್ಳಿಯಲ್ಲಿ ಉಚಿತವಾಗಿ 3 ತಿಂಗಳ ಕನ್ನಡ ಕಲಿಕಾ ತರಗತಿ ಶಿಬಿರವನ್ನು ಹಮ್ಮಿಕೊಳ್ಳಲಾಯಿತು.

## ವರ್ಷದ ಸಾಧನೆ:

- 4 ಹೊಸ ಯೋಗ ಕೇಂದ್ರಗಳ ಪ್ರಾರಂಭ (ಬೆಂಗಳೂರಿನ ಜಯನಗರ 4ನೇ ಬ್ಲಾಕ್‌ನಲ್ಲಿರುವ ಯುವಪಥ, ಶ್ರೀರಾಂಪುರದ ಸಾಂದೀಪನಿ ವಿದ್ಯಾಲಯ, ಎಚ್.ಬಿ.ಆರ್. ಲೇಔಟ್‌ನಲ್ಲಿನ ಅಮೃತ ಶಿಶುನಿವಾಸ, ಮೈಸೂರಿನ ರಾಷ್ಟ್ರೋತ್ಥಾನ ವಿದ್ಯಾಕೇಂದ್ರ–ವಿಜಯನಗರ)

* ರಾಷ್ಟ್ರೋತ್ಥಾನ ಆರೋಗ್ಯ ಸಂಕೀರ್ಣ ಕುಂದಲಹಳ್ಳಿಯಲ್ಲಿ ಮೊದಲ ಅಕ್ವಾಟಿಕ್ ಸೆಂಟರ್ ಆರಂಭ.
* ರಾಷ್ಟ್ರೋತ್ಥಾನ ಆರೋಗ್ಯ ಸಂಕೀರ್ಣ ಕುಂದಲಹಳ್ಳಿಯಲ್ಲಿ ಧ್ಯಾನ ತರಗತಿಗಳು, ನೃತ್ಯ ಸಂಗೀತ, ಚಿತ್ರಕಲೆ, ಕರಾಟೆ, ರಾಷ್ಟ್ರೋತ್ಥಾನ ಸಾಹಿತ್ಯ (ಪುಸ್ತಕ ಮಳಿಗೆ), ಒಳಾಂಗಣ ಕ್ರೀಡೆ, ಚೆಸ್ ಆರಂಭ. 170 ವಿದ್ಯಾರ್ಥಿಗಳ ಸೇರ್ಪಡೆ.

## ಉಲ್ಲೇಖನಿಯ ಸಂತಿಗಳು:

* ಸ್ವಾತಂತ್ರ್ಯ ಬಂದು 75 ವರ್ಷ ಪೂರೈಸಿದ ಸುಸಂದರ್ಭದಲ್ಲಿ ಬೆಂಗಳೂರಿನ ಧಾತು ಬೊಂಬೆಯಾಟ ರಂಗಭೂಮಿಯ ಶ್ರೀಮತಿ ಅನುಪಮ ಹೊಸೆಕರೆಯವರು ಕರ್ನಾಟಕ ಜಲಿಯನ್ ವಾಲಾಬಾಗ್ ಎಂದೇ ಖ್ಯಾತಿಯಾಗಿರುವ ಹಾಗೂ ಬ್ರಿಟಿಷರ ವಿರುದ್ಧ ಹೋರಾಡಿ ಪ್ರಾಣವನ್ನೇ ತ್ಯಾಗ ಮಾಡಿರುವ ಹಲವಾರು ಸ್ವಾತಂತ್ರ್ಯ ಹೋರಾಟಗಾರರ ನೆನಪಿಗಾಗಿ **'ವಿಧುರಾಶ್ವತ್ಥ' ಎನ್ನುವ ಸೂತ್ರದ ಬೊಂಬೆಯಾಟದ ಪ್ರದರ್ಶನವನ್ನು** ನಡೆಸಿಕೊಟ್ಟರು.



* **ಗೋಪೂಜಾ ಉತ್ಸವ:** ಜಯನಗರ ಕೇಂದ್ರದಲ್ಲಿ ಜನವರಿ 8ರಂದು ಗೋಪೂಜಾ ಉತ್ಸವವನ್ನು ಆಚರಿಸಲಾಯಿತು. ಇದರಲ್ಲಿ ಗವ್ಯೋತ್ಪನ್ನಗಳ ಮಾರಾಟ, ಗೋ ಪ್ರದರ್ಶಿನೀ, ಗೋ ಸಂವಾದ ಮುಂತಾದುವುಗಳನ್ನು ಆಯೋಜಿಸಲಾಯಿತು. ಕಾರ್ಯಕ್ರಮದ ಕೊನೆಯಲ್ಲಿ ಭರತನಾಟ್ಯ, ವಿದ್ಯಾರ್ಥಿಗಳ ಪುಣ್ಯಕೋಟಿ ನೃತ್ಯರೂಪಕ, ಭಜನೆಗಳು, ಗೋ ಆರತಿ ಮುಂತಾದುವುಗಳನ್ನು ಆಯೋಜಿಸಲಾಯಿತು.



* ಜಯನಗರ ಹಾಗೂ ಸುಂಕೇನಹಳ್ಳಿ ಯೋಗಕೇಂದ್ರದಲ್ಲಿ ಯೋಗಾಭ್ಯಾಸಕ್ಕೆ ಬರುವ ಮಕ್ಕಳಿಂದ ತಂದೆ-ತಾಯಿಗಳಿಗೆ ಮಾತೃಪೂಜನ ಹಾಗೂ ಮಾತೃವಂದನ ಕಾರ್ಯಕ್ರಮವನ್ನು ಹಮ್ಮಿಕೊಳಲಾಯಿತು. ಸಾಮಾಜಿಕ ಕಾರ್ಯಕರ್ತೆಯಾದ ಶ್ರೀಮತಿ ಪರಿಮಳಾ ಮೂರ್ತಿಯವರು ಮಾತೃ ಪೂಜನ ಕಾರ್ಯಕ್ರಮವನ್ನು ನಡೆಸಿಕೊಟ್ಟರು.



* ಕಲ್ಯಾಣನಗರ, ಕಾಮಾಕ್ಷಿಪಾಳ್ಯ, ಗಾಯಿತ್ರೀನಗರ ಯೋಗಕೇಂದ್ರಗಳಲ್ಲಿ ಯೋಗಾಭ್ಯಾಸಿಗಳು ಹಾಗೂ ಅವರ ಪರಿವಾರದವರಿಗೆ ಕುಟುಂಬಮಿಲನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿ, ಇದರಲ್ಲಿ ಅಭ್ಯಾಸಿಗಳು ಪ್ರತಿಭಾ ಪ್ರದರ್ಶನವನ್ನು ಮಾಡಿದರು.



## ಉಲ್ಲೇಖನಿಯ ಹೇಳಿಕೆಗಳು:

ಬೇರೆಲ್ಲೂ ಈ ರೀತಿಯಾದ ಕಾರ್ಯಕ್ರಮಗಳು ಕಾಣಲೂ ಸಿಗದೇ ಇರುವ ಈ ಸಂದರ್ಭದಲ್ಲಿ, ರಾಷ್ಟ್ರೋತ್ಥಾನ ಯೋಗವಿಭಾಗದ ವತಿಯಿಂದ ನಡೆಸುವ ಈ ತರನಾದ, ಸಮಾಜವನ್ನು ಒಂದು ಗೂಡಿಸುವ ಕಾರ್ಯಕ್ರಮಗಳು ನಿಜಕ್ಕೂ ಶ್ಲಾಘನೀಯ ಹಾಗೂ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಹಮ್ಮಿಕೊಳ್ಳುವಂತಾಗಲಿ.



## ಮುಂದಿನ ಕಾರ್ಯವಿಸ್ತಾರ:

- ಬೆಂಗಳೂರಿನ ಆರ್.ಬಿ.ಐ. ಲೇಔಟ್‌ನಲ್ಲಿ ಹಾಗೂ ವಿಜಯನಗರದಲ್ಲಿ ಹೊಸ ಯೋಗ (ಕೇಂದ್ರ) ಕಟ್ಟಡ ಲೋಕಾರ್ಪಣೆಗೊಳ್ಳಲಿದೆ.
- ಬೆಂಗಳೂರಿನ ಆರ್.ಆರ್. ನಗರದಲ್ಲಿ ಹೊಸ ಯೋಗ ಕಟ್ಟಡ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ.








# ರಾಷ್ಟ್ರೋತ್ಥಾನ ರಕ್ತಕೇಂದ್ರ ಬೆಂಗಳೂರು

scan/ click for video



ರಾಷ್ಟ್ರೋತ್ಥಾನ ರಕ್ತಕೇಂದ್ರವು ರಾಷ್ಟ್ರೋತ್ಥಾನ ಪರಿಷತ್ತಿನ ಒಂದು ಹೆಮ್ಮೆಯ ಯೋಜನೆ. ರಾಷ್ಟ್ರೋತ್ಥಾನ ರಕ್ತಕೇಂದ್ರವು ಸ್ಥಾಪನೆಯಾದದ್ದು 1993ರ ಮೇ 30ರಂದು. ಪ್ರಾರಂಭಿಕ ಆರ್ಥಿಕ ಸಹಕಾರ ನೀಡಿದವರು ಶ್ರೀಮತಿ ಸುಭದ್ರಾಬೆನ್ ಜಯಂತಿಲಾಲ್ ನಗರ್‌ದಾಸ್ ಶಾ (ಜೈನ್) ಅವರು. ಉಪಯೋಗಿಸಿದ ವೈದ್ಯಕೀಯ ಉಪಕರಣಗಳನ್ನು ಅಗತ್ಯವಿರುವವರಿಗೆ ಒದಗಿಸುವ ರುಗ್ಣ ಸೇವಾ ಭಂಡಾರ ಎನ್ನುವ ಹೆಸರಿನಲ್ಲಿ ಸಣ್ಣ ಪ್ರಮಾಣದಲ್ಲಿ ಪ್ರಾರಂಭವಾದ ಸಂಸ್ಥೆಯು ಇಂದು ರಾಜ್ಯದ ಪ್ರತಿಷ್ಠಿತ ರಕ್ತಕೇಂದ್ರಗಳಲ್ಲಿ ಒಂದಾಗಿ ಬೆಳೆದು ನಿಂತು, ಪರಿಷತ್‌ನ ಪ್ರಧಾನ ಧ್ಯೇಯವಾದ ಸ್ವಸ್ಥ-ಸುಸ್ಥಿರ ಸಮಾಜನಿರ್ಮಾಣದ ಆಶಯದ ಸಾಕಾರಕ್ಕೆ ಕೈಜೋಡಿಸುತ್ತಿದೆ.

ರೋಗಿಗಳಿಗೆ ಅಗತ್ಯವಿರುವ ಸುರಕ್ಷಿತವಾದ ರಕ್ತವನ್ನು

### ರಕ್ತಕೇಂದ್ರಕ್ಕೆ ಸಂದ ಪ್ರಶಸ್ತಿ-ಪುರಸ್ಕಾರಗಳು:

- ‘ರಾಷ್ಟ್ರೀಯ ಏಡ್ಸ್ ನಿಯಂತ್ರಣ ಸಂಸ್ಥೆ’ಯಿಂದ ಅನುಮೋದನೆ ಮತ್ತು ನೆರವು.
- ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ 2011-12ನೇ ಸಾಲಿನ ‘ಕರ್ನಾಟಕದ ಅತ್ಯುತ್ತಮ ರಕ್ತ ಬ್ಯಾಂಕ್’ ಗೌರವ.
- ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ ಹಾಗೂ ಕರ್ನಾಟಕ ರಾಜ್ಯ ರಕ್ತ ಚಾಲನಾ ಪರಿಷತ್ ವತಿಯಿಂದ 2020-21ನೇ ಸಾಲಿನಲ್ಲಿ ‘ಅತಿ ಹೆಚ್ಚು ರಕ್ತ ಸಂಗ್ರಹ’ ಮಾಡಿದ್ದಕ್ಕಾಗಿ ಗೌರವ.



ಸಮಯಕ್ಕೆ ಸರಿಯಾಗಿ ಒದಗಿಸುವುದು ರಕ್ತಕೇಂದ್ರದ ಮುಖ್ಯ ಉದ್ದೇಶ. ಯಾವುದೇ ವ್ಯಕ್ತಿ ರಕ್ತ ಸಿಗದೇ ಬರಿಗೈಯಲ್ಲಿ ಹಿಂತಿರುಗಬಾರದು ಎನ್ನುವ ಉನ್ನತ ಧ್ಯೇಯದೊಂದಿಗೆ ರಾಷ್ಟ್ರೋತ್ಥಾನ ರಕ್ತಕೇಂದ್ರ ಕಾರ್ಯನಿರ್ವಹಿಸುತ್ತಿದೆ.

## 2022–23ರ ವಾರ್ಷಿಕ ಕಾರ್ಯಚಟುವಟಿಕೆಯ ವಿವರ:

| | ಏಪ್ರಿಲ್ 2022 – 2023ರ ಮಾರ್ಚ್ 31ರವರೆಗೆ | 1993ರ ಮೇ 30 ರಿಂದ 2023ರ ಮಾರ್ಚ್ 31ರವರೆಗೆ |
|---|---|---|
| ಒಟ್ಟು ಶಿಬಿರಗಳು | 310 | 5,342 |
| ದಾನಿಗಳು | 23,602 | 4,69,184 |
| ರಕ್ತ ಸಂಗ್ರಹ (ಯುನಿಟ್‌ಗಳಲ್ಲಿ) | 51,153 | 9,56,014 |
| ವಿತರಣೆ (ಯುನಿಟ್‌ಗಳಲ್ಲಿ) | 49,522 | 9,22880 |
| ಫಲಾನುಭವಿಗಳು | 17,413 | 3,55,596 |
| ಎಸ್‌ಡಿಪಿ ದಾನಿಗಳು | 172 | 3162 |

## ಈ ವರ್ಷ ಒಟ್ಟು 310 ರಕ್ತದಾನ ಶಿಬಿರಗಳನ್ನು ಆಯೋಜಿಸಲಾಯಿತು.

- ಸ್ವಯಂಸೇವಾ ಸಂಸ್ಥೆಗಳು – 164
- ಸಾಫ್ಟ್‌ವೇರ್ ಕಂಪನಿಗಳು – 35
- ಇತರೇ ಕಂಪನಿಗಳು – 29
- ಶಿಕ್ಷಣ ಸಂಸ್ಥೆಗಳು – 54
- ಇತರೆ – 28




## ಉಲ್ಲೇಖನೀಯ ಸಂಗತಿಗಳು:

- 2022ರ ಸಪ್ಟೆಂಬರ್ 18ರಂದು ಮಾಲೂರಿನಲ್ಲಿ ಬಿಜೆಪಿಯವರು ಆಯೋಜಿಸಿದ ರಕ್ತದಾನ ಶಿಬಿರದಲ್ಲಿ ರಕ್ತದ ಒಟ್ಟು ಸಂಗ್ರಹ – 1200 ಯುನಿಟ್‌ಗಳು
- 2022ರ ಅಕ್ಟೋಬರ್ 8ರಂದು ರಕ್ತಕೇಂದ್ರದ ಸಿಬ್ಬಂದಿ ಹಾಗೂ ಅವರ ಕುಟುಂಬದವರೊಂದಿಗೆ ಕುಟುಂಬಮಿಲನ ಕಾರ್ಯಕ್ರಮ ನಡೆಯಿತು.












THE




RASHTROTTHANA VIDYA KENDRA







scan/ click for video

## ಶಾ ದಾಮಜಿ ಜಾದವಜಿ
## ಛೇಡಾ ಮೆಮೋರಿಯಲ್
# ರಾಷ್ಟ್ರೋತ್ಥಾನ ರಕ್ತಕೇಂದ್ರ
# ಹುಬ್ಬಳ್ಳಿ




ಹುಬ್ಬಳ್ಳಿ ರಕ್ತಕೇಂದ್ರದ ಸಂಚಾರಿ ರಕ್ತ ಸಂಗ್ರಹಣಾ ಬಸ್‌ನ ಲೋಕಾರ್ಪಣೆ

ರಾಷ್ಟ್ರೋತ್ಥಾನ ಪರಿಷತ್, ತನ್ನ ಮೊಟ್ಟಮೊದಲ ರಕ್ತಕೇಂದ್ರವನ್ನು ಬೆಂಗಳೂರಿನಲ್ಲಿ 1993ರಲ್ಲಿ ಪ್ರಾರಂಭಿಸಿತು. ಆ ರಕ್ತಕೇಂದ್ರಕ್ಕೆ ದೊರೆತ ಜನಸ್ಪಂದನೆಯಿಂದ ಪ್ರೇರಣೆಗೊಂಡು, ತನ್ನ ಎರಡನೇ ರಕ್ತಕೇಂದ್ರವನ್ನು ಉತ್ತರ ಕರ್ನಾಟಕ ಭಾಗದ ಜನರಿಗೆ ಸೇವೆ ಸಲ್ಲಿಸುವ ಉದ್ದೇಶದಿಂದ ಹುಬ್ಬಳ್ಳಿಯಲ್ಲಿ 2010ರಲ್ಲಿ ಪ್ರಾರಂಭಿಸಿತು.

ದಾನಿಗಳಾದ 'ಶಾ ದಾಮಜಿ ಜಾದವಜಿ ಛೇಡ' ಅವರ ಕಟ್ಟಡದಲ್ಲಿ ಈ ರಕ್ತಕೇಂದ್ರವನ್ನು ಪ್ರಾರಂಭಿಸಲಾಗಿದೆ. ಅದಕ್ಕೆ ಇನ್ಫೋಸಿಸ್ ಫೌಂಡೇಶನ್‌ನ ಸಹಕಾರವೂ ದೊರೆತಿದೆ.

ಯಾವುದೇ ಜಾತಿ–ಮತ–ಪಂಥ–ಬಡವ–ಶ್ರೀಮಂತ ಎನ್ನುವ ಭೇದವಿಲ್ಲದೇ, ಅಗತ್ಯವಿರುವ ಎಲ್ಲ ರೋಗಿಗಳಿಗೂ ಸುರಕ್ಷಿತವಾದ ಮತ್ತು ಗುಣಮಟ್ಟದ ರಕ್ತವನ್ನು ಸಮಯಕ್ಕೆ ಸರಿಯಾಗಿ ಒದಗಿಸುವುದು ರಕ್ತಕೇಂದ್ರದ ಮುಖ್ಯ ಉದ್ದೇಶ. ಯಾವುದೇ ವ್ಯಕ್ತಿ ರಕ್ತ ಸಿಗದೇ ಬರಿಗೈಯಲ್ಲಿ ಹಿಂತಿರುಗಬಾರದು ಎನ್ನುವ ಉನ್ನತ ಧ್ಯೇಯದೊಂದಿಗೆ ಹುಬ್ಬಳ್ಳಿಯ ರಾಷ್ಟ್ರೋತ್ಥಾನ ರಕ್ತಕೇಂದ್ರ ಕಾರ್ಯನಿರ್ವಹಿಸುತ್ತಿದೆ.



## 2022–23ರ ಕಾರ್ಯಚಟುವಟಿಕೆಯ ವಾರ್ಷಿಕ ವರದಿ:

- ಏಪ್ರಿಲ್ 2022 ರಿಂದ ಮಾರ್ಚ್ 2023ರ ವರೆಗೆ ಒಟ್ಟು 153 ರಕ್ತದಾನ ಶಿಬಿರಗಳ ಆಯೋಜನೆ ಆಗಿದೆ.
- 153 ಶಿಬಿರಗಳು ಮತ್ತು ರಕ್ತಕೇಂದ್ರದಲ್ಲಿ ಎಲ್ಲ ಒಟ್ಟು ಸೇರಿ 8001 ಮಂದಿ ರಕ್ತದಾನ ಮಾಡಿದ್ದಾರೆ.
- ಒಂದು ತಿಂಗಳಲ್ಲಿ ಗರಿಷ್ಠ 25 ಶಿಬಿರಗಳು ಹಾಗೂ ಒಂದು ದಿನದಲ್ಲಿ ಗರಿಷ್ಠ 8 ಶಿಬಿರಗಳನ್ನು ಆಯೋಜಿಸಲಾಗಿತ್ತು.
- ಈ ವರ್ಷದಲ್ಲಿ ಒಟ್ಟು 248 SDP ದಾನಿಗಳು ಹಾಗೂ ಒಂದು ತಿಂಗಳಲ್ಲಿ ಗರಿಷ್ಠ 35 SDP ದಾನಿಗಳು ಆಗಿದ್ದಾರೆ.
- ಈ ವರ್ಷದಲ್ಲಿ ಒಟ್ಟು 7472 ಫಲಾನುಭವಿಗಳಿಗೆ ಒಟ್ಟು 15,438 ಯುನಿಟ್‌ನಷ್ಟು ರಕ್ತದ ಅಂಗಾಂಶವನ್ನು ವಿತರಿಸಲಾಗಿದೆ.
- ಪ್ರತಿ ವರ್ಷ ಸಪ್ಟೆಂಬರ್‌ನಲ್ಲಿ ಶ್ರೀ ನರೇಂದ್ರ ಮೋದಿಜೀಯವರ ಹುಟ್ಟುಹಬ್ಬದ ಅಂಗವಾಗಿ ರಕ್ತದಾನ ಶಿಬಿರವನ್ನು ಆಯೋಜಿಸುತ್ತಿದ್ದು, ಈ ಬಾರಿ, 2022ರ ಸಪ್ಟೆಂಬರ್‌ನಲ್ಲಿ ಕಲ್ಲಿದ್ದಲು ಮತ್ತು ಗಣಿ ಖಾತೆಯ ಕೇಂದ್ರ ಮಂತ್ರಿಗಳಾದ ಶ್ರೀ ಪ್ರಲ್ಹಾದ್ ಜೋಶಿಯವರು ರಕ್ತಕೇಂದ್ರದಲ್ಲಿ ರಕ್ತದಾನ ಮಾಡಿ, ಇತರರಿಗೆ ಪ್ರೇರಣೆ ನೀಡಿದರು.
- ಜನಪ್ರಿಯ ಶಾಸಕರು ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಜಗದೀಶ ಶೆಟ್ಟರ ಅವರ










ಹುಟ್ಟುಹಬ್ಬದ ಅಂಗವಾಗಿ ಪ್ರತಿ ವರ್ಷದಂತೆ ಈ ವರ್ಷವೂ ರಕ್ತದಾನ ಶಿಬಿರ ಆಯೋಜಿಲಾಗಿತ್ತು ಮತ್ತು ಶ್ರೀ ಜಗದೀಶ ಶೆಟ್ಟರ ಅವರು ಖುದ್ದು ಭೇಟಿ ನೀಡಿದ್ದರು.



- ಕುಂದಗೋಳ ಶ್ರೀ ಬಸವಾನಂದ ಸ್ವಾಮಿಗಳ ಪಟ್ಟಾಭಿಷೇಕದ ಕಾರ್ಯಕ್ರಮದಲ್ಲಿ ರಕ್ತದಾನ ಶಿಬಿರವನ್ನು ಆಯೋಜಿಸಿ, ಸಂಗ್ರಹವಾದ ರಕ್ತದಲ್ಲಿ ಸ್ವಾಮಿಗಳ ತುಲಾಭಾರ ಮಾಡಲಾಯಿತು.
- PKS Foundation & Patwa Foundation ಇವರ ವತಿಯಿಂದ 531 ಮತ್ತು ಸಮಸ್ತ ಬ್ರಾಹ್ಮಣ ಸಮಾಜದ ವತಿಯಿಂದ 300 ದಾನಿಗಳಿಂದ ರಕ್ತ ಸಂಗ್ರಹಿಸಲಾಯಿತು. ಅದಲ್ಲದೇ, 2023ರ ಮಾರ್ಚ್ ತಿಂಗಳಲ್ಲಿ ಒಟ್ಟು 1,109 ಯೂನಿಟ್ ರಕ್ತ ಸಂಗ್ರಹಿಸಲಾಯಿತು.



- ರಾಷ್ಟ್ರೋತ್ಥಾನ ರಕ್ತಕೇಂದ್ರದ ಪ್ರಮುಖರಾದ ಶ್ರೀ ದತ್ತಮೂರ್ತಿ ಕುಲಕರ್ಣಿ ಅವರಿಗೆ ಪ್ರತಿಷ್ಠಿತ ಪ್ರೇಮ್ ಜೀ ಅಚೀವರ್ಸ್ ಅವಾರ್ಡ್ – 2022ನ್ನು ನೀಡಿ, ಗೌರವಿಸಲಾಯಿತು.
- ಆಯುರ್ವೇದೀಯ ಮಹಾವಿದ್ಯಾಲಯದ ವಿದ್ಯಾರ್ಥಿಗಳು ರಕ್ತಕೇಂದ್ರಕ್ಕೆ ಭೇಟಿ ನೀಡಿ ಯಂತ್ರೋಪಕರಣಗಳ ಬಗೆಗೆ ಮಾಹಿತಿ ಹಾಗೂ ರಕ್ತಕೇಂದ್ರದ ಕಾರ್ಯವೈಖರಿಯ ಬಗೆಗೆ ಮಾಹಿತಿ ಪಡೆದುಕೊಂಡರು.




- ರಕ್ತದಾನ ಮಾಡಲು ಸ್ಫೂರ್ತಿ ತುಂಬುವ ಸಲುವಾಗಿ ನಿಯಮಿತವಾಗಿ ರಕ್ತದಾನ ಮಾಡುವವರನ್ನು ಗುರುತಿಸಿ, ಸನ್ಮಾನಿಸಲು ಪ್ರಾರಂಭಿಸಲಾಗಿದೆ.




- ಕೊವಿಡ್–19 ಸಂದರ್ಭದಲ್ಲಿ ಪ್ರಾರಂಭಿಸಲಾದ ಆಕ್ಸಿ ಕಾನ್ಸಂಟ್ರೇಟರ ಬ್ಯಾಂಕ್ ಸೇವೆಯನ್ನು ಮುಂದುವರೆಸಿಕೊಂಡು ಹೋಗಲಾಗುತ್ತಿದೆ.
- ಅವಶ್ಯಕತೆ ಇರುವ ವ್ಯಕ್ತಿಗಳಿಗೆ ಉಚಿತವಾಗಿ ವೀಲ್ ಚೇರ ನೀಡುವ ವ್ಯವಸ್ಥೆಯನ್ನು ಸಹ ಈ ವರ್ಷ ಪ್ರಾರಂಭಿಸಲಾಗಿದೆ.
- ಸ್ವಾತಂತ್ರ್ಯ ದಿನಾಚರಣೆಯ ಅಮೃತ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ರಕ್ತದಾನ ಶಿಬಿರ ಯಶಸ್ವಿಯಾಗಲು ನಡೆಸಿದ ಸಭೆಯಲ್ಲಿ ಎಲ್ಲ ಎನ್.ಜಿ.ಓ.ಗಳ ಮುಖ್ಯಸ್ಥರು ಹಾಗೂ ಸದಸ್ಯರಿಗೆ ರಕ್ತದಾನದ ಮಹತ್ವ ಮತ್ತು ಅವಶ್ಯಕತೆ ಬಗೆಗಿನ ಮಾಹಿತಿಯನ್ನು ನೀಡಲಾಯಿತು.
- ಮಾರ್ವೆಲ ಸೆಗ್ಮೆಂಟ್ ಸಂಸ್ಥೆಯ ಕಟ್ಟಡ ಕಾರ್ಮಿಕರಿಗೆ ಸದೃಡ ಆರೋಗ್ಯದ ಕುರಿತು ಮತ್ತು ರಕ್ತದಾನದ ಮಹತ್ವವನ್ನು ರಕ್ತಕೇಂದ್ರದ ವೈಧ್ಯಾಧಿಕಾರಿಗಳಾದ ಡಾ. ಸಂಗೊಳ್ಳಿ ಮತ್ತವರ ತಂಡ ನೀಡಿತು.
- ಮೊಬೈಲ್ ಯುನಿಟ್ ಬಳಸಿಕೊಂಡು ನಗರದ ಪ್ರಮುಖ ಸ್ಥಳಗಳಲ್ಲಿ, ಮಠ–ಮಂದಿರಗಳ ಆವರಣದಲ್ಲಿ ಆಸಕ್ತರಿಗೆ ರಕ್ತದಾನ ಮಾಡಲು ಅನುಕೂಲ ಮಾಡಿಕೊಡಲಾಗುತ್ತಿದೆ.
- ಹುಬ್ಬಳ್ಳಿಯ ರಕ್ತಕೇಂದ್ರದ ಅಭಿವೃದ್ಧಿ ಹಾಗೂ ಹೆಚ್ಚು ರಕ್ತದಾನ ಶಿಬಿರಗಳನ್ನು ಆಯೋಜಿಸುವ ನಿಟ್ಟಿನಲ್ಲಿ ಪ್ರತಿ ತಿಂಗಳು ಡೆವಲಪ್‌ಮೆಂಟ್ ಸೆಲ್‌ನ ಬೈಠಕ್ ಮಾಡಲಾಗುತ್ತಿದ್ದು, ಈ ಸೆಲ್‌ನಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರತಿಷ್ಠಿತ ವ್ಯಾಪಾರಸ್ಥರು, ಉದ್ದಿಮೆದಾರರು, ಸಮಾಜದ ಪ್ರಮುಖರು ಸದಸ್ಯರಾಗಿದ್ದಾರೆ.



# ಸಂರಕ್ಷಾ
# ತಲಸ್ಸೆಮಿಯಾ ಆರೈಕೆ ಕೇಂದ್ರ

scan/ click for video




ತಲಸ್ಸೆಮಿಯಾ ಬಾಧಿತರ ಆರೈಕೆಗಾಗಿ ರಾಷ್ಟ್ರೋತ್ಥಾನ ಪರಿಷತ್ ಮಾನವೀಯ ಕಳಕಳಿಯಿಂದ ರೂಪಿಸಿದ ಯೋಜನೆಯೇ – "ಸಂರಕ್ಷಾ". ದೇಹದಲ್ಲಿ ಹಿಮೋಗ್ಲೋಬಿನ್‌ಯುಕ್ತ ಆರೋಗ್ಯಕರ ಕೆಂಪುರಕ್ತಕಣಗಳು ಉತ್ಪತ್ತಿಯಾಗದಿರುವ ನ್ಯೂನ್ಯತೆಯನ್ನು ತಲಸ್ಸೆಮಿಯಾ ಎಂದು ಕರೆಯುತ್ತಾರೆ. ಇಂತಹವರು ಆರೋಗ್ಯವಾಗಿ ಉಲ್ಲಾಸದಿಂದಿರಲು ನಿರಂತರ ರಕ್ತನೀಡುವುದು ಅನಿವಾರ್ಯ. ಆದರೆ ನಿರಂತರವಾಗಿ ರಕ್ತ ಪಡೆಯುವುದು ಹಲವರಿಗೆ ಆರ್ಥಿವಾಗಿ ಅಸಾಧ್ಯ ಎನ್ನಿಸಬಹುದು. ಇಂತವರ ಸಹಾಯಕ್ಕಾಗಿಯೇ "ಸಂರಕ್ಷಾ" ಸ್ಥಾಪನೆಯಾಗಿದೆ. ರಾಷ್ಟ್ರೋತ್ಥಾನ ರಕ್ತಕೇಂದ್ರದಲ್ಲಿ ಸಂಗ್ರಹಿಸಲಾದ ರಕ್ತವನ್ನು "ಸಂರಕ್ಷಾ" ಯೋಜನೆಯಡಿಯಲ್ಲಿ ತಲಸ್ಸೆಮಿಯಾ ಬಾಧಿತರಿಗೆ ಉಚಿತವಾಗಿ ನೀಡಲಾಗುತ್ತಿದೆ. ಪ್ರಸ್ತುತ ಸಂರಕ್ಷಾದಲ್ಲಿ 400ಕ್ಕೂ ಹೆಚ್ಚು ತಲಸ್ಸೆಮಿಯಾ ಬಾಧಿತರು ಆರೈಕೆ ಪಡೆಯುತ್ತಿದ್ದಾರೆ.

| | |
|---|---|
| ಆರೈಕೆ ಪಡೆಯುತ್ತಿರುವವರು | 423 |
| ಹೊಸದಾಗಿ ನೋಂದಾಯಿಸಿಕೊಂಡವರು | 43 |
| ನೀಡಲಾದ ಒಟ್ಟು ರಕ್ತದ ಪ್ರಮಾಣ (ಯುನಿಟ್‌ಗಳಲ್ಲಿ) | 9057 |



## ತಲಸ್ಸೆಮಿಯಾ ಪೀಡಿತರಿಗೆ ಆಯುರ್ವೇದ ಹಾಗೂ ಆಹಾರ ಪದ್ಧತಿ ಚಿಕಿತ್ಸೆ:

ತಲಸ್ಸೆಮಿಯಾಕ್ಕೆ ಒಂದೇ ಪರಿಹಾರ – ಬೋನ್‌ಮ್ಯಾರೋ ಟ್ರಾನ್ಸ್‌ಪ್ಲಾಂಟೇಶನ್ ಎನ್ನುವುದು ಈಗಿನ ನಂಬಿಕೆ. ಆಯುರ್ವೇದೀಯ ಚಿಕಿತ್ಸೆ ಹಾಗೂ ಆಹಾರ ಪದ್ಧತಿಯ ಮೂಲಕ ಪರಿಹಾರ ಪಡೆಯುವ ನಿಟ್ಟಿನಲ್ಲಿ ಪ್ರಯೋಗ ಪ್ರಾರಂಭಿಸಲಾಗಿದೆ. ಕೆಲವರಲ್ಲಿ ಹಸಿವು ಹೆಚ್ಚಾಗಿರುವುದು, ದೇಹದಲ್ಲಿನ ಕೆಲವು ನೋವುಗಳು ಕಡಿಮೆಯಾಗಿರುವುದು, ಸುಸ್ತು ಕಡಿಮೆಯಾಗಿರುವುದು, ಚುರುಕುತನ ಹೆಚ್ಚಾಗಿರುವುದು ಕಂಡುಬಂದಿದೆ. ಇದರಲ್ಲಿ ದಿವ್ಯಶ್ರೀ ಎನ್ನುವ ಮಗುವಿಗೆ ಬೆನ್ನು ನೋವು ಬಹಳವಾಗಿ ಕಾಡುತ್ತಿದ್ದುದರಿಂದ ಕನಿಷ್ಠ 1 ಗಂಟೆಯೂ ಕುಳಿತುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಈ ಔಷಧೋಪಚಾರ ಪ್ರಾರಂಭಿಸಿದ ಅನಂತರದಲ್ಲಿ ಬೆನ್ನು ನೋವು ಕಾಣಿಸಿಕೊಂಡಿಲ್ಲ ಹಾಗೂ ಬಹಳ ಹೊತ್ತಿನವರೆಗೆ ಕುಳಿತುಕೊಳ್ಳಲು ಸಾಧ್ಯವಾಗುತ್ತಿದೆ. ಸುಸ್ತು ಕಡಿಮೆಯಾಗಿ, ಮೊದಲು ಬಿಳಿಚಿಕೊಂಡಂತಿದ್ದ ಮೈ ಬಣ್ಣ ಸಹ ಬದಲಾಗಿದೆ. ಕೂದಲು ತುಂಬ ಉದ್ದವಾಗಿ ಬೆಳೆದಿದ್ದು, ರಕ್ತಪೂರಣದ ಅವಧಿಯು ಸಲ್ಪ ದೀರ್ಘವಾಗಿದೆ. ಈ ಬೆಳವಣಿಗೆಯ ಬಗ್ಗಾಗಿ ಇವಳ ಪೋಷಕರು ಸಂತೋಷವನ್ನು ವ್ಯಕ್ತಪಡಿಸಿದ್ದಾರೆ.



# ಅಗ್ನಿವೇಶ ಆಯುರ್ವೇದ ಅನುಷ್ಠಾನ

## ರಾಷ್ಟ್ರೋತ್ಥಾನ ಆರೋಗ್ಯ ಸೇವಾ ಕೇಂದ್ರದ ಚಟುವಟಿಕೆ




**31 ಮಾರ್ಚ್ 2022ರಂದು ಸಿ.ಎ.ಎಂ.ಸಿ:**

ಡಾ. ಪುಷ್ಕಲಾ ಬದರಿನಾರಾಯಣ್, ಎಂ.ಎಸ್. (ಆಯುರ್ವೇದ), ಸಹ ಪ್ರಾಧ್ಯಾಪಕರು, ಎಸ್.ಡಿ.ಎಂ. ಆಯುರ್ವೇದ ಮಹಾವಿದ್ಯಾಲಯ, ಇವರಿಂದ ಬಂಜೆತನ ನಿವಾರಣೆಗೆ ಆಯುರ್ವೇದೀಯ ವಿಧಾನ ವಿಷಯವಾಗಿ ಉಪನ್ಯಾಸವಿತ್ತು. ಸುಮಾರು 30 ವೈದ್ಯರು ಭಾಗವಹಿಸಿದ್ದರು.

**28 ಏಪ್ರಿಲ್ 2022ರಂದು ಸಿ.ಎ.ಎಂ.ಸಿ:**

ಡಾ. ಭಾರತಿ ದೇವರಕೊಂಡ, ಮುಖ್ಯ ವೈದ್ಯಾಧಿಕಾರಿ, ಸರ್ಕಾರಿ ಸೆಂಟ್ರಲ್ ಫಾರ್ಮಸಿ, ಬೆಂಗಳೂರು, ಇವರಿಂದ ಆಯುರ್ವೇದ ಅಭ್ಯಾಸದಲ್ಲಿ ವಿವಿಧ ಡೋಸೇಜ್ ರೂಪಗಳ ಉಪಯುಕ್ತತೆಯ ಬಗೆಗೆ ಉಪನ್ಯಾಸವಿತ್ತು. 28 ಹಿರಿಯ ಮತ್ತು ಕಿರಿಯ ವೈದ್ಯರು ಭಾಗವಹಿಸಿದ್ದರು.

**5 ಮೇ 2022ರಂದು** ಚರಕ ಜಯಂತಿಯನ್ನು ಆಚರಿಸಲಾಯಿತು.




### 26 ಜೂನ್ 2022ರಂದು ಸಿ.ಎ.ಎಂ.ಸಿ:

ವೈದ್ಯ ಅಭಿಜೀತ್ ಪ್ರಕಾಶ್ ಶಾಸ್ತ್ರಿ, ಸಂಹಿತಾ ವಿಭಾಗದ ಪ್ರೊಫೆಸರ್, ಎಸ್.ಎಸ್.ಎ.ಎಂ. ಮತ್ತು ಎಚ್, ನಾಸಿಕ್, ಇವರು ಸ್ನೇಹನ, ರೂಕ್ಷಣ ಉಪಕ್ರಮ ವಿಷಯದ ಮೇಲೆ ಉಪನ್ಯಾಸ ನಡೆಸಿಕೊಟ್ಟರು. ಸುಮಾರು 60 ಮಂದಿ ಹಿರಿ–ಕಿರಿ ವೈದ್ಯರು, ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

### 28 ಜುಲೈ 2022ರಂದು ಸಿ.ಎ.ಎಂ.ಸಿ:

ಡಾ. ಅರ್ಚನಾ ಸಿ.ಪಿ, ಕಾಯಚಿಕಿತ್ಸಾ ಪ್ರೊಫೆಸರ್, ಆರ್.ಎ.ಎಂ.ಸಿ.ಎಚ್ ಮತ್ತು ಆರ್.ಸಿ, ಆದ್ಯ ಆಯುರ್ವೇದ ಚಿಕಿತ್ಸಾಲಯ, ನಾಗರಭಾವಿ, ಬೆಂಗಳೂರು, ಇವರು ಓ.ಪಿ.ಡಿ.ಯಲ್ಲಿ ತಮ್ಮ ಕ್ಲಿನಿಕಲ್ ಯಶೋಗಾಥೆಗಳ ಬಗೆಗೆ ಮಾತನಾಡಿದರು. ಸುಮಾರು 30 ಮಂದಿ ಭಾಗವಹಿಸಿದ್ದರು.

### 25 ಆಗಸ್ಟ್ 2022ರಂದು ಸಿ.ಎ.ಎಂ.ಸಿ:

ಡಾ. ಮಳೀಮಠ್, ಬಿಎಎಂ ವಿಜಯಾ ಕ್ಲಿನಿಕ್, ಇವರು ಹೃದ್ರೋಗ ನಿರ್ವಹಣೆಯಲ್ಲಿ ಕ್ಲಿನಿಕಲ್ ವರ್ಗೀಕರಣ ಹಾಗೂ ಪ್ರಾಮಾಣಿಕ ಚರ್ಚೆಯ ಕುರಿತು ಮಾತನಾಡಿದರು. ಸುಮಾರು 43 ಮಂದಿ ವೈದ್ಯರು ಭಾಗವಹಿಸಿದ್ದರು.




### 22 ಸೆಪ್ಟೆಂಬರ್ 2022ರಂದು ಸಿ.ಎ.ಎಂ.ಸಿ:

ಡಾ. ಶುಭಂಕರಿ ಪಿ ರಾವ್, ಹಿರಿಯ ವೈದ್ಯರು, ಶುಭಂಕರಿ ಆಯುರ್ವೇದ ಚಿಕಿತ್ಸಾಲಯ, ಬ್ಯಾಂಕ್ ಕಾಲೋನಿ, ಬೆಂಗಳೂರು, ಇವರು ಗರ್ಭಾಶಯದಲ್ಲಿ ಅತಿಯಾದ ರಕ್ತಸ್ರಾವ ಉಂಟಾಗುವ ಪರಿಸ್ಥಿತಿಯಲ್ಲಿ ಚಿಕಿತ್ಸೆ ಹಾಗೂ ಆಸ್ಪತ್ರೆಗೆ ದಾಖಲಿಸುವ ವಿಚಾರವಾಗಿ ಮಾತನಾಡಿದರು. ಸುಮಾರು 60 ಹಿರಿ–ಕಿರಿ ವೈದ್ಯರು ಪಾಲ್ಗೊಂಡಿದ್ದರು.



### 27 ಅಕ್ಟೋಬರ್ 2022ರಂದು ಸಿ.ಎ.ಎಂ.ಸಿ:

ಡಾ. ಸತೀಶ್ ರಾವ್ ಅವರು ಕ್ಲಿನಿಕಲ್ ಪ್ರಾಕ್ಟೀಸ್‌ನಲ್ಲಿ ಆಸಕ್ತಿದಾಯಕ ಅಂಶಗಳ ಬಗೆಗೆ ಮಾತನಾಡಿದರು. ಸುಮಾರು 40 ಮಂದಿ ಭಾಗವಹಿಸಿದ್ದರು.

### 24 ನವೆಂಬರ್ 2022ರಂದು ಸಿ.ಎ.ಎಂ.ಸಿ:

ಡಾ. ಮಮತಾ ಭಾಗ್ವತ್, ಎಂ.ಡಿ. (ಆಯುರ್ವೇದ), ಇವರು ಚಿಕಿತ್ಸೆಯ ಸಮಗ್ರತೆಯ ಮೇಲೆ ಕ್ಲಿನಿಕಲ್ ಅನುಭವ ಉಂಟುಮಾಡುವ ಪ್ರಭಾವದ ಬಗೆಗೆ ಉಪನ್ಯಾಸ ಮಾಡಿದರು. ಸುಮಾರು 30 ಮಂದಿ ಭಾಗವಹಿಸಿದ್ದರು.

### 4 ಡಿಸೆಂಬರ್ 2022ರಂದು ಧನ್ವಂತರಿ ಜಯಂತಿ ಹಾಗೂ ರಾಜ್ಯಮಟ್ಟದ ಸೆಮಿನಾರ್:

ರಕ್ತವಾಹ ಸ್ರೋತಕ್ಕೆ ಪ್ರಾಯೋಗಿಕ ವಿಧಾನ, ಸೆಮಿನಾರ್‌ನ ವಿಷಯವಾಗಿತ್ತು. ಕೆಂಪೇಗೌಡನಗರದ ಕೇಶವಶಿಲ್ಪದಲ್ಲಿ ಜರುಗಿದ ಈ ಸಮಾರಂಭದಲ್ಲಿ ಡಾ. ಪ್ರಶಾಂತ್ ಎ.ಎಸ್, ಡಾ. ಗುರುರಾಜ್ ಎಂ.ಬಿ, ಡಾ. ವಿ.ಆರ್. ಪದ್ಮನಾಭ ರಾವ್, ಡಾ. ಶ್ರೀನಿವಾಸ್ ಕೆ ಬನ್ನಿಗೋಳ್, ಡಾ. ಗುರುಬಸವರಾಜ ಬಿ, ಶ್ರೀ ಎ.ಆರ್. ದ್ವಾರಕನಾಥ್, ಡಾ. ಗಾಯತ್ರಿ ಭಟ್ ಮೊದಲಾದ ಗಣ್ಯರು ಉಪಸ್ಥಿತರಿದ್ದರು.

### 29 ಜನವರಿ 2023ರಂದು ಸಿ.ಎ.ಎಂ.ಸಿ:

ಡಾ. ಶ್ರೀಜಿತ್ ಶ್ರೀಕುಮಾರ್, ಬಿಎಎಂಎಸ್, ಎಂಡಿ, ನಿರ್ದೇಶಕರು, ಕ್ಲಿನ್‌ಫೌಂಡ್, ಕ್ಲಿನಿಕಲ್ ರಿಸರ್ಚ್ ಸರ್ವಿಸಸ್ ಪ್ರೈ.ಲಿ., ಇವರು ಸಮಕಾಲೀನ ಆಯುರ್ವೇದದಲ್ಲಿ ನಾವೀನ್ಯತೆ ಮತ್ತು ಸಂಶೋಧನೆ: ಜಾಗತಿಕ ವಿಶ್ಲೇಷಣೆ ಈ ವಿಷಯವಾಗಿ ಮಾತನಾಡಿದರು. ಸುಮಾರು 42 ಮಂದಿ ವೈದ್ಯರು ಭಾಗವಹಿಸಿದ್ದರು.





**23 ಫೆಬ್ರವರಿ 2023ರಂದು ಸಿ.ಎ.ಎಂ.ಸಿ:**

ಡಾ. ಯೋಗೇಶ್ ಬೆಂಡಾಲೆ, ಎಂಡಿ ರಸಶಾಸ್ತ್ರ, ಅಧ್ಯಕ್ಷರು, ರಸಾಯು ಕ್ಯಾನ್ಸರ್ ಕ್ಲಿನಿಕ್ಸ್, ಸಿ.ಎಂ.ಓ, ರಸಾಯು ಗ್ರೂಪ್, ಇವರು ಕ್ಯಾನ್ಸರ್ ಹಾಗೂ ಇನ್ನಿತರೇ ಗಂಭೀರ ಅನಾರೋಗ್ಯದ ನಿರ್ವಹಣೆಯಲ್ಲಿ ರಸಾಯನ ಚಿಕಿತ್ಸೆಯ ಕ್ಲಿನಿಕಲ್ ಪ್ರಯೋಗ, ಈ ವಿಷಯವಾಗಿ ಮಾತನಾಡಿದರು. ಸುಮಾರು 90 ಮಂದಿ ವೈದ್ಯರು ಪಾಲ್ಗೊಂಡಿದ್ದರು.

# ಸ್ವಾಸ್ಥ್ಯಭಾರತೀ



ಮನುಷ್ಯನ ಜೀವನದ ಉದ್ದೇಶ ಈಡೇರಬೇಕಾದರೆ ಆತನ ಸ್ವಾಸ್ಥ್ಯ ಮುಖ್ಯವಾಗುತ್ತದೆ. ಸ್ವಾಸ್ಥ್ಯ ಎಂದರೆ ರೋಗ ಇಲ್ಲದೇ ಇರುವುದಲ್ಲ. ವ್ಯಕ್ತಿಯು ದೈಹಿಕ, ಭಾವನಾತ್ಮಕ, ಬೌದ್ಧಿಕ, ಮತ್ತು ಆಧ್ಯಾತ್ಮಿಕ ಸ್ತರಗಳಲ್ಲಿ ನಡೆಯುವ ಎಲ್ಲ ಪ್ರಕ್ರಿಯೆಗಳು ಸಹಜವಾಗಿ ಯಾವುದೇ ಅಡೆತಡೆಗಳಿಲ್ಲದೇ ನಡೆಯುತ್ತಿರಬೇಕು. ಉದಾಹರಣೆಗೆ ಜೀರ್ಣಕ್ರಿಯೆ ಮತ್ತು ಮಲಮೂತ್ರವಿಸರ್ಜನೆ ಸರಿಯಾಗಿ ಆಗುತ್ತಿರಬೇಕು, ಉತ್ತಮ ನಿದ್ರೆ ಸಿಗುತ್ತಿರಬೇಕು, ಮಾನಸಿಕವಾಗಿ ಪ್ರಸನ್ನತೆ ಹೊಂದಿರಬೇಕು, ಇತರರ ಕುರಿತು ಕೃತಜ್ಞತಾ ಭಾವ, ಸ್ನೇಹಪೂರ್ವಕ ನಡವಳಿಕೆ, ಹಿರಿಯರ ಕುರಿತು ಸೇವಾಭಾವ ಮುಂತಾದ ಗುಣಗಳನ್ನು ಹೊಂದಿರಬೇಕು. ಹೀಗಿದ್ದಾಗ ವ್ಯಕ್ತಿಯು ಸ್ವಸ್ಥನಾಗಿದ್ದಾನೆ ಎನ್ನಬಹುದು. ಯಾವಾಗ ಸಮಾಜದ ಎಲ್ಲ ವ್ಯಕ್ತಿಗಳೂ ಸ್ವಸ್ಥರಾಗುತ್ತಾರೋ ಆಗ ಸಮಾಜವು ಸ್ವಸ್ಥಸಮಾಜ ಎನಿಸಿಕೊಳ್ಳುತ್ತದೆ. ಆದ್ದರಿಂದ ಸ್ವಸ್ಥಸಮಾಜ ನಿರ್ಮಾಣದ ಧ್ಯೇಯದೊಂದಿಗೆ ಕಾರ್ಯನಿರ್ವಹಿಸುತ್ತಿರುವ ರಾಷ್ಟ್ರೋತ್ಥಾನ ಪರಿಷತ್‌ನ ಅಂಗವಾಗಿ ಸ್ವಾಸ್ಥ್ಯಭಾರತೀ ಆರಂಭವಾದದ್ದು 2021ರಲ್ಲಿ.

ವ್ಯಕ್ತಿಯು ಸ್ವಸ್ಥನಾಗಬೇಕಾದರೆ ಅದಕ್ಕೆ ಉತ್ತಮ ಜೀವನಕ್ರಮದ ಅಭ್ಯಾಸವನ್ನು ರೂಢಿಸಿಕೊಳ್ಳುವುದು ಅತಿಮುಖ್ಯ. ಆದರೆ ಉತ್ತಮ ಜೀವನಶೈಲಿ ಎಂದರೆ ಏನು ಎಂಬ ಸಮಗ್ರ ಚಿತ್ರಣ ಲಭ್ಯವಿರುವುದು ಕಡಿಮೆಯೇ. ಜೀವನಶೈಲಿ ಎನ್ನುವುದು ವ್ಯಕ್ತಿಯೊಬ್ಬನ ಆಹಾರಕ್ರಮ, ನಿದ್ರೆ, ದೈಹಿಕ ಚಟುವಟಿಕೆ, ದಿನನಿತ್ಯ ಬಳಸುವ ವಸ್ತುಗಳು, ಭಾವನೆಗಳು, ವೃತ್ತಿ, ಹವ್ಯಾಸ, ಸಂಬಂಧಗಳು, ಚಿಂತನಾಕ್ರಮ, ಧಾರ್ಮಿಕ ಆಚರಣೆ, ಮತ್ತು ಆಧ್ಯಾತ್ಮಿಕ ಚಿಂತನೆ ಇವೆಲ್ಲವನ್ನೂ ಒಳಗೊಂಡಿರುತ್ತದೆ. ಅವುಗಳಲ್ಲಿ ನಾವು ಎಲ್ಲೆಲ್ಲಿ ತಪ್ಪುತ್ತೇವೆಯೋ ಅವುಗಳನ್ನು ತಿದ್ದಿ ಉತ್ತಮ ಅಭ್ಯಾಸಗಳನ್ನು

ರೂಢಿಸಿಕೊಳ್ಳುವುದರಿಂದ ರೋಗಗಳನ್ನು ತಡೆಗಟ್ಟಬಹುದು, ಮತ್ತು ಗುಣಪಡಿಸಿಕೊಳ್ಳಬಹುದು. ಅಷ್ಟೇ ಅಲ್ಲದೇ ಬದುಕಿನ ಗುಣಮಟ್ಟವನ್ನೂ ಉತ್ತಮಗೊಳಿಸಿಕೊಳ್ಳಬಹುದು.

ಈ ಉದ್ದೇಶದೊಂದಿಗೆ, ಸ್ವಾಸ್ಥ್ಯಭಾರತೀ ವಿಭಾಗವು ಸಮಾಜದ ಎಲ್ಲ ಸ್ತರದ ಜನರಲ್ಲಿ ಸ್ವಾಸ್ಥ್ಯದ ಕುರಿತು ಅರಿವು ಮೂಡಿಸುವ ಯೋಜನೆಯನ್ನು ಹೊಂದಿದೆ. ಮೊದಲ ಒಂದು ವರ್ಷದ ಅವಧಿಯಲ್ಲಿ ವಿಭಾಗವು ಮುಂದೆ ನಡೆಸಬೇಕಾದ ಕಾರ್ಯಗಳು, ಅದಕ್ಕೆ ಸಂಬಂಧಿಸಿದ ಯೋಜನೆಗಳು, ಮತ್ತು ಮಾಹಿತಿ ಸಂಗ್ರಹದ ಕಾರ್ಯವನ್ನು ನಿರ್ವಹಿಸಿದೆ.

ಮಾಹಿತಿ ಸಂಗ್ರಹ: ಆಯುರ್ವೇದ, ಪಾಕಶಾಸ್ತ್ರಗಳ ಶಾಸ್ತ್ರೀಯ ಗ್ರಂಥಗಳಿಂದ ದಿನಚರ್ಯ, ಋತುಚರ್ಯ, ಆಹಾರ, ವಿರುದ್ಧಾಹಾರ, ವೇಗಧಾರಣ, ಸದಾಚಾರ, ಮೌಲ್ಯಗಳು ಮುಂತಾದ ಜೀವನಶೈಲಿಗೆ ಸಂಬಂಧಿಸಿದ ಎಲ್ಲ ವಿಚಾರಗಳನ್ನು ಸಂಗ್ರಹಿಸಲಾಗಿದೆ. ಇದೇ ವಿಚಾರಗಳಿಗೆ ಸಂಬಂಧಿಸಿದಂತೆ ನಡೆದ ಸಮಕಾಲೀನ ಸಂಶೋಧನೆಗಳನ್ನೂ ಸಂಗ್ರಹಿಸಿ ದಾಖಲಿಸಲಾಗಿದೆ. ಇದು ನಿರಂತರ ಪ್ರಕ್ರಿಯೆ ಆಗಿರುವುದರಿಂದ ಹೆಚ್ಚಿನ ಮಾಹಿತಿಗಳನ್ನು ಬೇರೆ ಬೇರೆ ಆಕರಗಳಿಂದ ನಿರಂತರ ಸಂಗ್ರಹ ಮಾಡಲಾಗುತ್ತದೆ.

## ಉಪನ್ಯಾಸಗಳು:

ಇದಲ್ಲದೇ ರಾಷ್ಟ್ರೋತ್ಥಾನ ಪರಿವಾರದ ಯೋಗಕೇಂದ್ರಗಳು, ಶಿಬಿರಗಳು, ಸೇವಾವಸತಿ, ಹಾಗೂ ಶಾಲೆಗಳಲ್ಲಿ ಉತ್ತಮ ಜೀವನಶೈಲಿಯ ಕುರಿತು ಒಟ್ಟು 24 ಉಪನ್ಯಾಸಗಳನ್ನು ಆಯೋಜಿಸಿ ಉತ್ತಮ ಜೀವನಕ್ರಮದ ಕುರಿತು ಅರಿವು ಮೂಡಿಸುವ ಕಾರ್ಯವನ್ನು ಮಾಡಲಾಗಿದೆ.

| ದಿನಾಂಕ | ವಿಷಯ | ಆಯೋಜಕರು | ಫಲಾನುಭವಿಗಳು |
|---|---|---|---|
| 8 ಏಪ್ರಿಲ್ 2022 | ಮಕ್ಕಳ ಆರೋಗ್ಯಕ್ಕೆ ಆರೋಗ್ಯಕರ ಅಭ್ಯಾಸಗಳು | ಬೇಸಿಗೆ ಶಿಬಿರದ ಮಕ್ಕಳು – ಜಯನಗರ | ಯೋಗ ವಿಭಾಗ |
| 9 ಏಪ್ರಿಲ್ 2022 | ನಮ್ಮ ಆರೋಗ್ಯದ ಮೇಲೆ ಋತುಚರ್ಯದ ಪರಿಣಾಮ | ಪರಿಷತ್ತಿನ HR ಮತ್ತು Finance ವಿಭಾಗಗಳ ಸಿಬ್ಬಂದಿ | ಅಕೌಂಟ್ಸ್ ವಿಭಾಗ |
| 13 ಏಪ್ರಿಲ್ 2022 | ಮಕ್ಕಳ ಆರೋಗ್ಯಕ್ಕೆ ಆರೋಗ್ಯಕರ ಅಭ್ಯಾಸಗಳು | ಬೇಸಿಗೆ ಶಿಬಿರದ ಮಕ್ಕಳು – ಕೇಶವಶಿಲ್ಪ | ಯೋಗ ವಿಭಾಗ |
| 15 ಏಪ್ರಿಲ್ 2022 | ಕುಟುಂಬದ ಸ್ವಾಸ್ಥ್ಯದಲ್ಲಿ ತಾಯಿಯ ಪಾತ್ರ | ತಪಸ್ – ಪೋಷಕರು | ತಪಸ್ ಸಾಧನಾ ವಿಭಾಗ |
| 17 ಏಪ್ರಿಲ್ 2022 | ಮಕ್ಕಳಲ್ಲಿ ಉತ್ತಮ ಜೀವನಕ್ರಮ ಅಳವಡಿಸುವಲ್ಲಿ ಹೆತ್ತವರ ಪಾತ್ರ | ಪೋಷಕರು | ಕೇಶವಶಿಲ್ಪ |
| 17 ಏಪ್ರಿಲ್ 2022 | ಮಕ್ಕಳ ಆರೋಗ್ಯಕ್ಕೆ ಆರೋಗ್ಯಕರ ಅಭ್ಯಾಸಗಳು | ಬೇಸಿಗೆ ಶಿಬಿರದ ಮಕ್ಕಳು – ಜಯನಗರ | ಯೋಗ ವಿಭಾಗ |
| 18 ಏಪ್ರಿಲ್ 2022 | ಮಕ್ಕಳ ಆರೋಗ್ಯಕ್ಕೆ ಆರೋಗ್ಯಕರ ಅಭ್ಯಾಸಗಳು | ಬೇಸಿಗೆ ಶಿಬಿರದ ಮಕ್ಕಳು – ಕುಂದಲಹಳ್ಳಿ | ಯೋಗ ವಿಭಾಗ |
| 30 ಏಪ್ರಿಲ್ 2022 | ಜೀವನಶೈಲಿ – ವಿವಿಧ ಆಯಾಮಗಳು | ಪ್ರಕಲ್ಪ ಪ್ರಮುಖರು | ರಾಷ್ಟ್ರೋತ್ಥಾನ ಪರಿಷತ್ |
| 7 ಮೇ 2022 | ಉತ್ತಮ ಜೀವನಶೈಲಿ | ಸಾರ್ವಜನಿಕರು: ತಲಸ್ಸೆಮಿಯಾ ದಿನದ ಕಾರ್ಯಕ್ರಮ | ರಾ. ರಕ್ತಕೇಂದ್ರ |
| 8 ಮೇ 2022 | ಉತ್ತಮ ಜೀವನಶೈಲಿ | ರಾಜ್ಯಪಠ್ಯಕ್ರಮದ ಶಿಕ್ಷಕರು – ಧಾರವಾಡ | ಪ್ರಶಿಕ್ಷಣ ವಿಭಾಗ |

| ದಿನಾಂಕ | ವಿಷಯ | ಆಯೋಜಕರು | ಫಲಾನುಭವಿಗಳು |
|---|---|---|---|
| 16 ಜೂನ್ 2022 | Importance of moral conduct & healthy living habits to build strong and successful personality. | 11, 12ನೇ ತರಗತಿಯ ತಪಸ್ ವಿದ್ಯಾರ್ಥಿಗಳು | ತಪಸ್ ಸಾಧನಾ ವಿಭಾಗ |
| 26 ಜೂನ್ 2022 | ಆಹಾರ ಮತ್ತು ಬೊಜ್ಜು | ಯೋಗ ಶಿಕ್ಷಕರು, ಬಸವನಗುಡಿ | ಯೋಗ ವಿಭಾಗ |
| 27 ಜೂನ್ 2022 | Importance of Swadhyaya & healthy living habits to build strong and successful personality. + menstrual hygiene. | 11, 12ನೇ ತರಗತಿಯ ಸಾಧನಾ ವಿದ್ಯಾರ್ಥಿಗಳು – ಥಣಿಸಂದ್ರ | ತಪಸ್ ಸಾಧನಾ ವಿಭಾಗ |
| 7 ಆಗಸ್ಟ್ 2022 | ಡಯಾಬಿಟಿಸ್: ಆಹಾರ ಮತ್ತು ಜೀವನಕ್ರಮ | ಸೇವಾವಸತಿಯ ಡಯಾಬಿಟೀಸ್ ಪೀಡಿತರು | ಸೇವಾವಸತಿ |
| 10 ಸೆಪ್ಟೆಂಬರ್ 2022 | ಉತ್ತಮ ಜೀವನಕ್ರಮದ ವಿವಿಧ ಆಯಾಮಗಳು | ಆಯ್ದ ಶಿಕ್ಷಕರು ಮತ್ತು ಆಡಳಿತ ಮಂಡಳಿ ಸದಸ್ಯರು, ರಾ. ರಾಜ್ಯಪಠ್ಯಕ್ರಮದ ಶಾಲೆಗಳು – ಸಂಡೂರು | ವಿದ್ಯಾ ವಿಭಾಗ |
| 10 ಡಿಸೆಂಬರ್ 2022 | ಉತ್ತಮ ಜೀವನಕ್ರಮ ಮತ್ತು ಭಾವನಾತ್ಮಕ ಸ್ವಾಸ್ಥ್ಯ | Non-teaching ±Àtaff, RVK, ಬನಶಂಕರಿ | ರಾ. ವಿದ್ಯಾಕೇಂದ್ರ, ಬನಶಂಕರಿ |
| 17 ಡಿಸೆಂಬರ್ 2022 | ವಿವೇಕಪೂರ್ಣವಾಗದ ಬದುಕು | ಪೋಷಕರು | ಪೂರ್ಣಪ್ರಮತಿ ಶಾಲೆ, ಜೆಪಿನಗರ |
| 21 ಜನವರಿ 2023 | ಮಕ್ಕಳಿಗೆ ಕಥೆ ಹೇಳುವುದರ ಮಹತ್ತ್ವ | ಶಿಕ್ಷಕರು, ಪೋಷಕರು | RVK ಥಣಿಸಂದ್ರ |
| 5 ಫೆಬ್ರವರಿ 2023 | ಋತುಚಕ್ರ ಸ್ವಾಸ್ಥ್ಯ ಮತ್ತು ಮಹಿಳೆ, ಕುಟುಂಬ, ಮತ್ತು ಸಮಾಜದ ಮೇಲೆ ಅದರ ಪರಿಣಾಮಗಳು | ಸೇವಾವಸತಿಯ ಶಿಕ್ಷಕಿಯರು | ಸೇವಾವಸತಿ |
| 18 ಮಾರ್ಚ್ 2023 | ಉತ್ತಮ ಜೀವನಕ್ರಮ – ಪರಿಚಯ | ಸಾರ್ವಜನಿಕರು: OFYT ಕಾರ್ಯಾಗಾರ | JMRH |

### ಸೇವಾವಸತಿ:

ಸೇವಾವಸತಿಯ ಮಧುಮೇಹಿಗಳಿಗೆ ಉತ್ತಮ ದಿನಚರಿಯ ಅನುಸರಣೆಗೆ ಅನುಕೂಲ ಆಗಲೆಂದು ದಿನಚರಿಯನ್ನು ನಮೂದಿಸಲು ದಿನಚರಿ ಪುಸ್ತಕವನ್ನು ತಯಾರಿಸಲಾಗಿದೆ. ಇದರಿಂದ ಅವರ ದಿನಚರಿ, ಆರೋಗ್ಯ ಸುಧಾರಣೆಗಳನ್ನು ಗಮನಿಸಲು ಸುಲಭವಾಗುತ್ತದೆ.

## ಜಯದೇವ ಸ್ಮಾರಕ ರಾಷ್ಟ್ರೋತ್ಥಾನ ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರದಲ್ಲಿ ಜೀವನಶೈಲಿ ಕ್ಲಿನಿಕ್:

ಇತರ ಚಿಕಿತ್ಸೆಗಳೊಂದಿಗೆ ಜನರ ಜೀವನಕ್ರಮವನ್ನು ಸರಿಪಡಿಸಿಕೊಂಡು ಅನಾರೋಗ್ಯವನ್ನು ತಡೆಗಟ್ಟಲು, ಸಮಸ್ಯೆಯ ತೀವ್ರತೆಯನ್ನು ಕಡಿಮೆಗೊಳಿಸಲು, ಹಾಗೂ ಜೀವನದ ಗುಣಮಟ್ಟವನ್ನು ಹೆಚ್ಚಿಸುವ ಸಲುವಾಗಿ ಉಚಿತ 'ಲೈಫ್ ಸ್ಟೈಲ್ ಕ್ಲಿನಿಕ್' ಆರಂಭಿಸಲಾಗಿದೆ. ಹೊರರೋಗಿಗಳಿಗೆ, ಒಳರೋಗಿಗಳಿಗೆ, ಮತ್ತು ಆರೋಗ್ಯ ತಪಾಸಣೆಗೆ ಬರುವವರಿಗೆ ಜೀವನಶೈಲಿಯ ಕನ್ಸಲ್ಟೇಷನ್ ನಡೆಸಿ, ಅವರಿಗೆ ಸಲಹೆ ನೀಡಲಾಗುತ್ತಿದೆ. ಈ ವರೆಗೆ ಸುಮಾರು ನೂರಕ್ಕೂ ಹೆಚ್ಚು



ಜನರು ಜೀವನಶೈಲಿ ಮಾರ್ಗದರ್ಶನದ ಪ್ರಯೋಜನ ಪಡೆದಿದ್ದಾರೆ. ಇದರೊಂದಿಗೆ ಆಸ್ಪತ್ರೆಗೆ ಬರುವ ಎಲ್ಲರಿಗೂ ಉತ್ತಮ ಜೀವನಕ್ರಮದ ಕುರಿತು ಸಾಮಾನ್ಯ ಮಾಹಿತಿಗಳನ್ನೊಳಗೊಂಡ 'ಸ್ವಾಸ್ಥ್ಯ ಕೈಪಿಡಿ'ಯನ್ನು ಇಂಗ್ಲಿಷ್ ಭಾಷೆಯಲ್ಲಿ ಸಿದ್ಧಪಡಿಸಿ, ಉಚಿತವಾಗಿ ನೀಡಲಾಗುತ್ತಿದೆ. ಕನ್ನಡದಲ್ಲಿಯೂ ಕೈಪಿಡಿ ಸಿದ್ಧಗೊಂಡಿದ್ದು ಕೊನೆಯ ಹಂತದ ಕಾರ್ಯಗಳು ನಡೆಯಬೇಕಿವೆ.

ಮುಂದಿನ ವರ್ಷಗಳಲ್ಲಿ ನಡೆಸುವ ಕಾರ್ಯಾಗಾರ, ಉಪನ್ಯಾಸ, ತರಬೇತಿ, ಶಾಲೆಗಳಲ್ಲಿ ನಡೆಸುವ ಪಠ್ಯಕ್ರಮದ ಕುರಿತು ಯೋಜನೆಗಳನ್ನು ಸಿದ್ಧಪಡಿಸಲಾಗಿದೆ. ಯೋಜನೆಯಂತೆ ಮುಂದಿನ ವರ್ಷ ರಾಷ್ಟ್ರೋತ್ಥಾನ ಶಾಲೆಗಳಲ್ಲಿ, ಯೋಗಕೇಂದ್ರಗಳಲ್ಲಿ, ಸೇವಾವಸತಿಗಳಲ್ಲಿ, ಇತರ ಸಂಸ್ಥೆಗಳಲ್ಲಿಯೂ ಹಲವಾರು ಕಾರ್ಯಾಗಾರಗಳು ನಡೆಯಲಿವೆ.

## ಮುಂದಿನ ಯೋಜನೆಗಳು:

1. ಸೇವಾವಸತಿ: ಮುಂದಿನ ವರ್ಷದಲ್ಲಿ 20 ಸೇವಾವಸತಿಗಳಲ್ಲಿ ಮೂರು ತಿಂಗಳಿಗೊಂದು ಅವಧಿ, ಉತ್ತಮ ಜೀವನಕ್ರಮದ ಕುರಿತು ಉಪನ್ಯಾಸ, ಸಂವಾದ, ಮತ್ತು ಮಾರ್ಗದರ್ಶನ.
2. ಶಾಲೆಗಳು: ಬೆಂಗಳೂರಿನ ರಾಷ್ಟ್ರೋತ್ಥಾನ ವಿದ್ಯಾಕೇಂದ್ರಗಳಲ್ಲಿ ಮೊದಲಿಗೆ, ಅನಂತರ ರಾಜ್ಯದ ಇತರ ಭಾಗಗಳಲ್ಲಿರುವ ಶಾಲೆಗಳಲ್ಲಿ ಶಿಕ್ಷಕರಿಗೆ ಉಪನ್ಯಾಸ ಸರಣಿ. ಅನಂತರ ವಿದ್ಯಾರ್ಥಿಗಳಿಗೆ ವಯಸ್ಸಿಗೆ ಅನುಗುಣವಾಗಿ ಪಠ್ಯ ರಚನೆ ಮತ್ತು ಪಾಠ ಮಾಡುವ ಯೋಜನೆ.
3. ಕಾರ್ಯಾಗಾರಗಳು: ರಾಷ್ಟ್ರೋತ್ಥಾನ ರಕ್ತಕೇಂದ್ರದ ಸಹಯೋಗದಲ್ಲಿ, ವಿವಿಧ ಕಾಲೇಜು ಹಾಗೂ ಸಂಘಸಂಸ್ಥೆಗಳಲ್ಲಿ ವರ್ಷದಲ್ಲಿ 5 ಜೀವನಶೈಲಿ ಕುರಿತಾದ ಕಾರ್ಯಾಗಾರಗಳನ್ನು ಯೋಜಿಸಿದೆ.

# ಮಾಧವ ಸೃಷ್ಟಿ

scan/ click for video



ಇದು ರಾಷ್ಟ್ರೋತ್ಥಾನ ಪರಿಷತ್ತಿನ ಒಂದು ಕನಸಿನ ಯೋಜನೆ. ದೊಡ್ಡಬಳ್ಳಾಪುರ ಸಮೀಪದ ಪ್ರಸಿದ್ಧ ಶ್ರೀ ಘಾಟಿಸುಬ್ರಹ್ಮಣ್ಯ ಕ್ಷೇತ್ರದ ತಪ್ಪಲಿನಲ್ಲಿ, 110 ಎಕರೆ ಪ್ರದೇಶದಲ್ಲಿ ಈ ಯೋಜನೆಯನ್ನು ರೂಪಿಸಲಾಗಿದೆ. ಈ ಯೋಜನೆಯ ಪ್ರದೇಶ ಒಂಬತ್ತು ಬೆಟ್ಟಗಳಿಂದ ಕೂಡಿದ್ದು, ಪ್ರತಿ ಬೆಟ್ಟದಲ್ಲೂ ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಸಾಂಪ್ರದಾಯಿಕ ವಿಧಾನಗಳ ಮೂಲಕ ಸಮಗ್ರ ಗ್ರಾಮೀಣಾಭಿವೃದ್ಧಿಯ ಕಲ್ಪನೆಯೊಂದಿಗೆ ರೂಪಿಸಲಾದ ಈ ಯೋಜನೆಗೆ 'ಮಾಧವ ಸೃಷ್ಟಿ' ಎಂದು ನಾಮಕರಣ ಮಾಡಲಾಗಿದೆ.

2007ರಲ್ಲಿ ಪ್ರಾರಂಭವಾದ 'ಮಾಧವ ಸೃಷ್ಟಿ'ಯಲ್ಲಿ ಪ್ರಮುಖ ಆಕರ್ಷಣೆ ಎಂದರೆ ಗೋಶಾಲೆ. ಗೋಪಾಲನೆಗೆ ಯೋಗ್ಯವಾದ ಈ ಪರಿಸರದಲ್ಲಿ, ದೇಶೀ ತಳಿಗಳ ಸಂರಕ್ಷಣೆ, ಸಂವರ್ಧನೆ ಮತ್ತು ಸಂಶೋಧನೆಗಾಗಿ ಗೋಶಾಲೆಯನ್ನು ನಿರ್ಮಿಸಲಾಗಿದ್ದು, ಪ್ರಸ್ತುತ ಸುಮಾರು 600 ಗೋವುಗಳನ್ನು ಸಂರಕ್ಷಣೆ ಮಾಡಲಾಗುತ್ತಿದೆ. ಗೀರ್, ಸಾಹಿವಾಲ್, ಕಾಂಕ್ರೇಜ್, ಥಾರ್ ಪಾರ್ಕರ್, ದೇವನಿ, ಹಳ್ಳಿಕಾರ್, ಮಲೆನಾಡುಗಿಡ್ಡ, ಓಂಗೋಲ್, ಅಮೃತಮಹಲ್ – ಹೀಗೆ ಒಂಬತ್ತು ಪ್ರಕಾರದ ಭಾರತೀಯ ಗೋತಳಿಗಳನ್ನು ಇಲ್ಲಿ ಸಂಗೋಪನೆ ಮಾಡಿ, ತಳಿಗಳ ಅಭಿವೃದ್ಧಿಗೆ ವಿಶೇಷ ಮಹತ್ವ ನೀಡಲಾಗುತ್ತಿದೆ. ಎತ್ತು, ಹೋರಿ, ದನ ಹಾಗೂ ಕರುಗಳು ಸೇರಿದಂತೆ ಸುಮಾರು 700ಕ್ಕೂ ಅಧಿಕ ಜಾನುವಾರುಗಳಿಗೆ ಇಲ್ಲಿ ಆಶ್ರಯ ನೀಡಲಾಗಿದೆ. ಗೋ ಆಹಾರಕ್ಕಾಗಿ ಸುಮಾರು 25 ಎಕರೆ ಪ್ರದೇಶದಲ್ಲಿ ಹುಲ್ಲು ಬೆಳೆಸಲಾಗುತ್ತಿದೆ. ಸುಮಾರು 60 ಜನ ಸ್ಥಳೀಯರಿಗೆ ಉದ್ಯೋಗಾವಕಾಶ ಒದಗಿಸಲಾಗಿದೆ. ಹಸುವನ್ನು ಕೇವಲ ಹಾಲಿನ ಮೂಲವೆಂದು ಪರಿಗಣಿಸಬಾರದು ಎನ್ನುವುದು ರಾಷ್ಟ್ರೋತ್ಥಾನ ಗೋಶಾಲೆಯ ಸಮಗ್ರ ಕಲ್ಪನೆ.



### ಯೋಜನೆಯ ಉದ್ದೇಶ:

- ಗೋ ಸಂರಕ್ಷಣೆಯ ಮಾದರಿ ಯೋಜನೆಯ ನಿರ್ಮಾಣ
- ಉತ್ಕೃಷ್ಟವಾದ ದೇಗೋ ತಳಿಗಳ ಅಭಿವೃದ್ಧಿ.
- ಗೋ ವಿಜ್ಞಾನ ಅನುಸಂಧಾನ ಕೇಂದ್ರ ಪ್ರಾರಂಭಿಸುವುದು.
- ಗೋ ಆಧಾರಿತ ಕೃಷಿ ಅನುಸಂಧಾನ ಕೇಂದ್ರ ಪ್ರಾರಂಭಿಸುವುದು.
- ಆಯುರ್ವೇದ ಔಷಧಿ ಸಸ್ಯಗಳ ಅಭಿವೃದ್ಧಿ ಕೇಂದ್ರ ಪ್ರಾರಂಭಿಸುವುದು.

### ಕ್ರಮಿಸಿರುವ ಮೈಲುಗಲ್ಲುಗಳು:

- ಕರ್ನಾಟಕ ರಾಜ್ಯ ಸರ್ಕಾರದ ಪಶುವೈದ್ಯಕೀಯ ಇಲಾಖೆಯ ಚಟುವಟಿಕೆಗಳಿಗೆ ರಾಷ್ಟ್ರೋತ್ಥಾನ ಗೋಶಾಲೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.





- ರಾಷ್ಟ್ರೀಯ ಸ್ವಯಂಸೇವಕ ಸಂಘದ ರಾಷ್ಟ್ರೀಯ ಗೋಸೇವಾ ಗತಿವಿಧಿಯಿಂದ ರಾಷ್ಟ್ರೋತ್ಥಾನ ಗೋಶಾಲೆಯನ್ನು ಗೋ ವಿಜ್ಞಾನ ಅನುಸಂಧಾನ ಕೇಂದ್ರ ಎಂದು ಗುರುತಿಸಲಾಗಿದೆ.
- 2007ರಲ್ಲಿ 5 ಎಕರೆಯಲ್ಲಿ ಪ್ರಾರಂಭವಾದ ಗೋಆಧಾರಿತ ಕೃಷಿ ಅರಣ್ಯ ಯೋಜನೆ, ಬೃಂದಾವನ ಎಂಬ ಯೋಜನೆ ಪ್ರಸ್ತುತ 35 ಎಕರೆ ಪ್ರದೇಶಕ್ಕೆ ವಿಸ್ತರಿಸಿಕೊಂಡಿದೆ.
- ಗೋಶಾಲೆಯಿಂದ ಸುಮಾರು 500 ರೈತ ಕುಟುಂಬಗಳಿಗೆ ಎತ್ತು, ಹೋರಿಗಳನ್ನು ಉಚಿತವಾಗಿ ನೀಡಿ, ರೈತರಿಗೆ ದೇಶೀಯ ತಳಿಗಳನ್ನು ಸಾಕಣೆಗೆ ಉತ್ತೇಜನ ನೀಡಲಾಗುತ್ತಿದೆ.
- ಗೋಶಾಲೆಯಲ್ಲಿ ಗವ್ಯೋತ್ಪನ್ನಗಳನ್ನು ತಯಾರಿಸಿ ಹಲವು ಕಾಯಿಲೆಗಳನ್ನು ಉಪಚರಿಸುವ ಹಂತಕ್ಕೆ ತಲುಪಿಕೊಳ್ಳಲಾಗಿದೆ.





## ಪ್ರಸ್ತುತ ವರ್ಷಕ್ಕಾಗಿ ಮಾಡಿಕೊಂಡಿದ್ದ ಯೋಜನೆ ಹಾಗೂ ಆದ ಅನುಷ್ಠಾನ:

- ಗೋಶಾಲೆಗೆ ಶಾಶ್ವತವಾದ ಸೇತುವೆ ಮತ್ತು ರಸ್ತೆ ನಿರ್ಮಾಣ ಯೋಜನೆ ಹಾಗೂ ಅನುಷ್ಠಾನ
- ಬೃಂದಾವನ ಅರಣ್ಯ ಕೃಷಿಯಲ್ಲಿ 1000 ಗಿಡಗಳನ್ನು ನೆಡಲಾಯಿತು.
- ಮೇವು ಸಂಗ್ರಹಿಸಲು ಮೇವು ಉಗ್ರಾಣದ ಯೋಜನೆ ತಯಾರಿ.











- ತರಬೇತಿ ಕೇಂದ್ರದ ಯೋಜನೆ.
- ಹೆಚ್ಚುವರಿ ಗೋ ಉತ್ಪನ್ನಗಳನ್ನು ತಯಾರಿಸಿ, ಮಾರಾಟ ಮಾಡುವುದು.
- ಕಾಮಧೇನು ನಿಲಯದ ಜೀರ್ಣೋದ್ಧಾರ.
- ಗೋವುಗಳಿಗಾಗಿ ಹಸಿರು ಮೇವನ್ನು ಹೆಚ್ಚಾಗಿ ಬೆಳೆಯುವುದು.

## ಈ ವರ್ಷದಲ್ಲಿ ಜರುಗಿದ ಪ್ರಮುಖ ಕಾರ್ಯಕ್ರಮಗಳು:

- ಕರ್ನಾಟಕ ರಾಜ್ಯದ ಪಶುಸಂಗೋಪನಾ ಸಚಿವರಾಗಿದ್ದ ಶ್ರೀ ಪ್ರಭು ಚೌಹಾಣ್‌ರವರು ಗಿಡ ನೆಡುವುದರೊಂದಿಗೆ ವನಮಹೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.
- ಗೌರಿ ಗಣೇಶ ಹಬ್ಬವನ್ನು ಗೋಮಯ ಗಣಪತಿಯನ್ನು ಪ್ರತಿಷ್ಠಾಪಿಸಿ ಆಚರಿಸಲಾಯಿತು.
- ಕಾರ್ಮಿಕರನ್ನೆಲ್ಲ ಒಟ್ಟುಗೂಡಿಸಿ ದಸರಾ ಹಬ್ಬದ ಆಚರಣೆ.
- ಗೋಪೂಜೆ ಮಾಡಿ, ಗೋಮಯದ ಹಣತೆಗಳನ್ನು ಹಚ್ಚಿ ದೀಪಾವಳಿಯ ಆಚರಣೆ
- ಸಂಕ್ರಾಂತಿಯಂದು ಗೋಶಾಲೆಯ ಅಷ್ಟೂ ಗೋವುಗಳ ಪೂಜೆ.



## ಉಲ್ಲೇಖನೀಯ ಸಂಗತಿಗಳು:

- ಗೋಶಾಲೆಯಲ್ಲಿ ಸಂಪೂರ್ಣ ಗೋ ಆಧಾರಿತ ಕೃಷಿಯನ್ನು ಪ್ರಾರಂಭಿಸಿದ್ದು, ಇದು ಸುತ್ತಮುತ್ತಲಿನ ರೈತರಿಗೆ ಸ್ಫೂರ್ತಿಯಾಗಿದೆ.
- ಗೋನಂದಾಜಲವನ್ನು ಪ್ರಾಯೋಗಿಕವಾಗಿ ರೈತರಿಗೆ ಉಚಿತವಾಗಿ ನೀಡಲಾಗಿ, ಅದು ಉತ್ತಮ ಫಲಿತಾಂಶ ನೀಡುತ್ತಲಿದ್ದು, ಪ್ರಸ್ತುತ ಸುತ್ತಮುತ್ತಲಿನ ರೈತರು ಸ್ವಯಂಪ್ರೇರಿತವಾಗಿ ಗೋನಂದಾಜಲವನ್ನು ತೆಗೆದುಕೊಂಡು ಹೋಗುತ್ತಿದ್ದಾರೆ.
- ಮನೆಗೊಂದು ಗೋವು ಎಂಬ ಪರಿಕಲ್ಪನೆಯನ್ನು ಗೋಶಾಲೆಗೆ ಬಂದವರಿಗೆ ಮೂಡಿಸಿರುವುದರ ಫಲವಾಗಿ ದೇಸೀ ಗೋವುಗಳ ಸಾಕಣೆಯನ್ನು ಕೆಲವರು ತಮ್ಮ ಮನೆಗಳಲ್ಲಿ ಪ್ರಾರಂಭಿಸಿದ್ದಾರೆ.






## ಸೇವಾ ಚಟುವಟಿಕೆಗಳು:

- ರಾಷ್ಟ್ರೋತ್ಥಾನ ಗೋಶಾಲೆಯು ರಾ.ಸ್ವ. ಸಂಘದ ಗೋಸೇವಾ ವಿಭಾಗದ ಮೂಲಕ ಇತರೇ ಗೋಶಾಲೆಗಳಿಗೆ ಗೋ ಆಧಾರಿತ ಕೃಷಿಯ ಬಗೆಗೆ ಉತ್ತೇಜನ ನೀಡುತ್ತದೆ.
- ಹೊರಗಿನಿಂದ ಬರುವ ಶಾಲೆಯ ಮಕ್ಕಳಿಗೆ, ಕಾಲೇಜು ವಿದ್ಯಾರ್ಥಿಗಳಿಗೆ, ದೇಸೀ ಗೋತಳಿಗಳ ಬಗೆಗೆ ಅರಿವು ಮೂಡಿಸುವುದು.
- ಕೃಷಿ ಅರಣ್ಯ ಯೋಜನೆಯ ಅವಶ್ಯಕತೆಯ ಬಗೆಗೆ ಮಾಹಿತಿ ನೀಡುವುದು.



### ಆಯೋಜಿಸಲಾಗುವ ತರಬೇತಿ ಕಾರ್ಯಾಗಾರಗಳು:

- ಹೊಸದಾಗಿ ಗೋಶಾಲೆಯನ್ನು ಪ್ರಾರಂಭ ಮಾಡುವವರಿಗಾಗಿ ಉತ್ತಮ ತಳಿಯ ಗೋವುಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಗವ್ಯೋತ್ಪನ್ನಗಳನ್ನು ತಯಾರಿಸುವುದರ ಬಗೆಗೆ ತರಬೇತಿ.
- ಹೊಸದಾಗಿ ಗೋ ಆಧಾರಿತ ಕೃಷಿಯನ್ನು ಮಾಡುವಂತಹ ರೈತರಿಗೆ ತರಬೇತಿಯನ್ನು ನೀಡುವುದು.

### ಉಲ್ಲೇಖನೀಯ ಹೇಳಿಕೆಗಳು:

ಚಿಕ್ಕತುಮಕೂರು ವಾಸಿಯಾದ ಶ್ರೀ ಪ್ರಸಾದ್ ಆದ ನಾನು ಗೋಶಾಲೆಗೆ ಭೇಟಿ ನೀಡಿದ್ದು, ಒಂದು ಮಲೆನಾಡು ಗಿಡ್ಡ ಹಸು ತೆಗೆದುಕೊಂಡು ಹೋಗಿದ್ದೆ. ಕೊರೋನಾ ಸಮಯದಲ್ಲಿ ನಮ್ಮ ತಂದೆಯವರು ಕೊನೆಯ ಹಂತಕ್ಕೆ ತಲುಪಿದ್ದಾಗ ಬೇರೆ ಯಾವುದೇ ಔಷಧಿಗಳನ್ನು ತೆಗೆದುಕೊಳ್ಳದೇ, ಗೋವಿನ ಒಡನಾಟದಲ್ಲಿದ್ದುಕೊಂಡು ಆರೋಗ್ಯದಲ್ಲಿ ಚೇತರಿಕೆ ಹೊಂದಿ, ಸದ್ಯ ಸಾಮಾನ್ಯ ಜೀವನವನ್ನು ನಡೆಸುತ್ತಿದ್ದಾರೆ.

# ರಾಷ್ಟ್ರೋತ್ಥಾನ ವಿದ್ಯಾಲಯ
## ರಾಜ್ಯ ಪಠ್ಯಕ್ರಮ ಶಾಲೆಗಳು

scan/ click for video




ಗ್ರಾಮೀಣ ಮತ್ತು ನಗರ ಪ್ರದೇಶಗಳ ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಉಚಿತ ಅಥವಾ ಕೈಗೆಟಕುವ ಶಿಕ್ಷಣ ಒದಗಿಸುವ ಉದ್ದೇಶದಿಂದ, ರಾಷ್ಟ್ರೋತ್ಥಾನ ಪರಿಷತ್ ರಾಜ್ಯ ಪಠ್ಯಕ್ರಮದ ಹಲವು ಶಾಲೆಗಳನ್ನು ನಡೆಸುತ್ತಿದೆ. ಆರಂಭಿಕ ಶಾಲಾ ಶಿಕ್ಷಣಕ್ಕೆ ಆದ್ಯತೆ ನೀಡುವ ಮೂಲಕ ಎಲ್ಲರಿಗೂ ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದು ಮುಖ್ಯ ಗುರಿಯಾಗಿದೆ. ಮಕ್ಕಳ ಸಂಪೂರ್ಣ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲು ಪೂರ್ವ ಪ್ರಾಥಮಿಕದಿಂದ 10ನೇ ತರಗತಿಯವರೆಗೆ ಗುಣಮಟ್ಟದ ಮತ್ತು ಪರಿಣಾಮಕಾರಿ ಶಿಕ್ಷಣವನ್ನು ನೀಡಲಾಗುತ್ತಿದೆ.

| ಶಾಲೆಗಳು | 2022–23 ಮಕ್ಕಳ ಸಂಖ್ಯೆ | ಬೋಧಕ ಬೋಧಕೇತರ ಸಿಬ್ಬಂದಿ | | |
|---|---|---|---|---|
| | | ಬೋಧಕ ಸಿಬ್ಬಂದಿ | ಬೋಧಕೇತರ ಸಿಬ್ಬಂದಿ | ಒಟ್ಟು |
| 18 | 6721 | 296 | 88 | 384 |




**2022–23ರಲ್ಲಿ 11 ಶಾಲೆಗಳಲ್ಲಿ ನಡೆಯುತ್ತಿರುವ ಸೇವಾ ಚಟುವಟಿಕೆಗಳು**

| ಬಾಲಗೋಕುಲ | ಮಾತೃಮಂದಿರ | ಯೋಗಕೇಂದ್ರ | ಭಜನಾ ಕೇಂದ್ರ | ಒಟ್ಟು |
|---|---|---|---|---|
| 14 | 16 | 3 | 9 | 42 |

## 2022–23ರಲ್ಲಿ ರಾಷ್ಟ್ರೋತ್ಥಾನ ವಿದ್ಯಾಲಯಗಳಲ್ಲಿ ನಡೆದ ವಿಶೇಷ ಕಾರ್ಯಕ್ರಮಗಳು

### ರಾಷ್ಟ್ರೋತ್ಥಾನ ವಿದ್ಯಾಲಯ

ಹಗರಿಬೊಮ್ಮನಹಳ್ಳಿ, ವಿಜಯನಗರ ಜಿಲ್ಲೆ

**'ಸೇನೆಗೆ ಸೇರಿ'**
**(Join Indian Army) ಶಿಬಿರ:**

- 16.07.2022ರಂದು ರಾಷ್ಟ್ರೋತ್ಥಾನ ವಿದ್ಯಾಲಯದಲ್ಲಿ **'ಸೇನೆಗೆ ಸೇರಿ ಶಿಬಿರ'** ಆಯೋಜಿಸಲಾಯಿತು.
- ಹಗರಿಬೊಮ್ಮನಹಳ್ಳಿಯ ವಿವಿಧ ಕಾಲೇಜುಗಳ 900ಕ್ಕೂ ಅಧಿಕ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಭಾಗವಹಿಸಿದ್ದರು.
- ಕೂಡ್ಲಿಗಿಯ ಡಿ.ವೈ.ಎಸ್.ಪಿ.ಯಾದ ಶ್ರೀ ಹರೀಶ್, ನಿವೃತ್ತ ಸೇನಾಧಿಕಾರಿಗಳಾದ ಶ್ರೀ ಮಲ್ಲಿಕಾರ್ಜುನ ಮಡಿವಾಳ ಮತ್ತು ಶ್ರೀ ಅಂಬಾರಾಯ ಜಿ. ಎಳಸಂಗಿರವರು ವಿದ್ಯಾರ್ಥಿಗಳಿಗೆ ಸೇನೆಯ ವಿವಿಧ ವಿಭಾಗಗಳು, ವಿವಿಧ ಹುದ್ದೆಗಳು ಸೇರಿದಂತೆ






ಭಾರತೀಯ ಸೇನೆಯ ಕುರಿತು ಮಾಹಿತಿ ನೀಡಿ, ಸೇನೆಗೆ ಸೇರುವಂತೆ ವಿದ್ಯಾರ್ಥಿಗಳಿಗೆ ಸ್ಫೂರ್ತಿ ತುಂಬಿದರು.



### ಆಜಾದಿ ಕಾ ಅಮೃತ್ ಮಹೋತ್ಸವ ನಿಮಿತ್ತ ಉಪನ್ಯಾಸ ಸರಣಿ:

- ಭಾರತದ ಸ್ವಾತಂತ್ರ್ಯದ 75ನೇ ವರ್ಷದ ಆಜಾದಿ ಕಾ ಅಮೃತ್ ಮಹೋತ್ಸವದ ನಿಮಿತ್ತ ದಿನಾಂಕ: 13, 14 ಮತ್ತು 15ನೇ ಆಗಸ್ಟ್ 2022ರವರೆಗೆ, 3 ದಿನಗಳ ಕಾಲ ಉಪನ್ಯಾಸ ನಡೆಯಿತು.



- ರಾ. ಸ್ವ. ಸಂಘದ ಕರ್ನಾಟಕ ಉತ್ತರ ಪ್ರಾಂತ ಪ್ರಚಾರಕರಾದ ಶ್ರೀ ನರೇಂದ್ರ ಜೀರವರು "ಪ್ರಾಚೀನ ಭಾರತದ ಸಾಧನೆ", ರಾ. ಸ್ವ. ಸಂಘದ ಜ್ಯೇಷ್ಠ ಪ್ರಚಾರಕರಾದ ಶ್ರೀ ಸು. ರಾಮಣ್ಣನವರು "ಸ್ವಾತಂತ್ರ್ಯ ಹೋರಾಟದ ವೀರಗಾಥೆ", ಸಾಮಾಜಿಕ ಕಾರ್ಯಕರ್ತರಾದ ಬೆಂಗಳೂರಿನ ಶ್ರೀ ರೋಹಿತ್ ಚಕ್ರತೀರ್ಥರವರು "ಭವಿಷ್ಯದ ಭಾರತ" ಕುರಿತು ಮಾತನಾಡಿದರು.



### ಅಂತರಾಷ್ಟ್ರೀಯ ಮಟ್ಟದ ಜಾಂಬೋರೇಟ್ಸ್:

ಮೂಡಬಿದಿರೆಯಲ್ಲಿ ದಿನಾಂಕ: 21.12.2022 ರಿಂದ 27.12.2022ರ ವರೆಗೆ ನಡೆದ 50 ಸಾವಿರ ಮಕ್ಕಳ ಅಂತರಾಷ್ಟ್ರೀಯ ಮಟ್ಟದ ಜಾಂಬೋರೇಟ್ಸ್‌ನಲ್ಲಿ ಭಾಗವಹಿಸಿದ ರಾಷ್ಟ್ರೋತ್ಥಾನ ಹಿರಿಯ ಪ್ರಾಥಮಿಕ ಶಾಲೆ ಮಕ್ಕಳು ನವದುರ್ಗೆಯರ ಛದ್ಮವೇಷಭೂಷಣದಲ್ಲಿ ಪ್ರದರ್ಶನ ನೀಡಿದರು.



### ವಿವೇಕ ಸ್ಮರಣೆ:

- ಪ್ರತಿವರ್ಷದಂತೆ ಈ ವರ್ಷವೂ ವಿವೇಕ ಸ್ಮರಣೆ ಕಾರ್ಯಕ್ರಮವನ್ನು 10, 11 ಮತ್ತು 12 ಜನವರಿ 2023ರಂದು, 3 ದಿನಗಳ ಕಾಲ ನಡೆಯಿತು.
- 3 ದಿನಗಳಲ್ಲಿ ಪ್ರತಿನಿತ್ಯ ಬೆಳಿಗ್ಗೆ 6 ರಿಂದ 6.45ರವರೆಗೆ 10 ನಿಮಿಷ ಧ್ಯಾನ, 15 ನಿಮಿಷ ಚಾಗಿಯ ಹಾಡಿನ ಪಠಣ ಮತ್ತು 20 ನಿಮಿಷ ಅಂದಿನ ಅತಿಥಿಗಳಿಂದ ವಿವೇಕಾನಂದರ ಚಿಂತನೆ ನಡೆಯಿತು.



- ಮೊದಲ ದಿನ ಬೆಳಗಾವಿಯ ಎಂ.ಎಲ್.ಸಿ., ಶ್ರೀ ಸಾಬಣ್ಣ ತಳವಾರ್, 2ನೇ ದಿನ ಕೊಟ್ಟೂರಿನ ಕಟ್ಟೆಮನೆ ಹಿರೇಮಠದ ಶ್ರೀ ಶ್ರೀ ಯೋಗಿ ರಾಜೇಂದ್ರ ಶಿವಾಚಾರ್ಯ ಸ್ವಾಮಿಗಳು ಮತ್ತು 3ನೇ ದಿನ ಧಾರವಾಡದ ನಿವಾಸಿಗಳಾದ ಶ್ರೀ ಶ್ರೀಧರ ನಾಡಿಗೇರ್, ಪ್ರಾಂತ ಕಾರ್ಯಕಾರಿಣಿ ಸದಸ್ಯರು,

ರಾ. ಸ್ವ. ಸಂಘ ಇವರು ವಿಷಯ ಮಂಡನೆ ಮಾಡಿದರು.

- ಪ್ರತಿದಿನ 150 ಜನ ಸಜ್ಜನ ಬಂಧುಗಳು, ಮಾತಾ ಭಗಿನಿಯರು ಶ್ರದ್ಧೆಯಿಂದ ಶುಭ್ರವೇಷಧಾರಿಗಳಾಗಿ ಸಮಯಕ್ಕೆ ಸರಿಯಾಗಿ ಭಾಗವಹಿಸಿದ್ದರು.

**ಹಿರಿಯ ವಿದ್ಯಾರ್ಥಿಗಳ ಸಮಾವೇಶ:**

ಹಗರಿಬೊಮ್ಮನಹಳ್ಳಿಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರಕ್ಕೆ 50 ವರ್ಷಗಳು ಸಂದ ನಿಮಿತ್ತ ಹಿರಿಯ ವಿದ್ಯಾರ್ಥಿಗಳ ಸಮಾವೇಶ – ಸುವರ್ಣ ಸಂಭ್ರಮ ಕಾರ್ಯಕ್ರಮವನ್ನು 25.12.2022ರಂದು ಹಮ್ಮಿಕೊಳ್ಳಲಾಗಿತ್ತು. ದಿಕ್ಸೂಚಿ ನುಡಿಯಲ್ಲಿ ರಾಷ್ಟ್ರೋತ್ಥಾನ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ನಾ. ದಿನೇಶ ಹೆಗ್ಡೆಯವರು ಮಾತನಾಡಿ ರಾಷ್ಟ್ರೋತ್ಥಾನ ಪರಿಷತ್‌ನ ಕಾರ್ಯವ್ಯಾಪ್ತಿ ಕುರಿತು ತಿಳಿಸಿದರು. ಕುಟುಂಬ ಮತ್ತು ರಾಷ್ಟ್ರದ ಕುರಿತು ರಾಷ್ಟ್ರೋತ್ಥಾನದ ವಿದ್ಯಾರ್ಥಿಗಳಿಗೆ ಇರಬೇಕಾದ ಪರಿಕಲ್ಪನೆಯನ್ನು ತಿಳಿಸಿದರು. ವಕ್ತಾರರಾಗಿ ಭಾಗವಹಿಸಿದ್ದ ಡಾ. ಪ್ರಭಾಕರ ಭಟ್ ಕಲ್ಲಡ್ಕ ಅವರು ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ವಿದ್ಯಾರ್ಥಿ ಜೀವನದಲ್ಲಿ ದೊರೆತ ಸಂಸ್ಕಾರದ ಪರಿಣಾಮದಿಂದಾಗಿ ವೈಯಕ್ತಿಕ ಮತ್ತು ಕೌಟುಂಬಿಕ ಜೀವನವು ಸಮಾಜಮುಖಿ ಕಾರ್ಯಗಳಿಗೆ ತೊಡಗಿಸಿಕೊಂಡು ವೈಭವಶಾಲಿ ರಾಷ್ಟ್ರ ನಿರ್ಮಾಣಕ್ಕೆ ಹೆಗಲು ನೀಡಬೇಕೆಂದು ಕರೆ ನೀಡಿದರು.

**ಪಠ್ಯಾಧಾರಿತ ವಸ್ತು ಪ್ರದರ್ಶನ:**

- ಶಾರದಾ ವಿದ್ಯಾಮಂದಿರದಲ್ಲಿ ಮಕ್ಕಳ ಕಲಿಕೆಗೆ ಪೂರಕವಾಗಿ 30, 31 ಡಿಸೆಂಬರ್ 2022ರಂದು, ಎರಡು ದಿನಗಳ ಕಾಲ ಶಿಶುಮಂದಿರದಿಂದ 10ನೇ ತರಗತಿಯವರೆಗಿನ 'ಪಠ್ಯಾಧಾರಿತ ವಸ್ತು ಪ್ರದರ್ಶನ'ವನ್ನು ನಡೆಸಲಾಯಿತು. 983 ಮಕ್ಕಳಲ್ಲಿ 900 ಮಕ್ಕಳು ಭಾಗವಹಿಸಿದ್ದರು.
- ಎರಡು ದಿನಗಳಲ್ಲಿ ತಾಲೂಕಿನ 11 ಶಾಲೆಗಳ ಮಕ್ಕಳು, ಶಿಕ್ಷಕರು ಮತ್ತು ನಗರದ ಪಾಲಕರು, ಸಾರ್ವಜನಿಕರು ಪ್ರದರ್ಶನಿಯನ್ನು ವೀಕ್ಷಿಸಿದರು.

**ಭಾರತ ಮಾತಾ ಪೂಜನ ಕಾರ್ಯಕ್ರಮ:**

- ರಾಷ್ಟ್ರೀಯ ಭಾವನೆಯ ಜಾಗೃತಿಗಾಗಿ ಪ್ರತಿ ವರ್ಷದಂತೆ ಈ ವರ್ಷವೂ ಪಾಲಕರ ಹಾಗೂ ಹಿತೈಷಿಗಳ ಮನೆಗಳಲ್ಲಿ, ಸರ್ಕಾರಿ ಹಾಸ್ಟೆಲ್‌ಗಳಲ್ಲಿ, ವಿವಿಧ ಗ್ರಾಮಗಳಲ್ಲಿ ಭಾರತ ಮಾತಾ ಪೂಜನ











ಕಾರ್ಯಕ್ರಮಗಳನ್ನು ಮಾಡಲಾಯಿತು.

- ವಿದ್ಯಾಕೇಂದ್ರದ ಎಲ್ಲ ವಿಭಾಗಗಳಿಂದ 1 ನಗರ, 28 ಹಳ್ಳಿಗಳ 171 ಮನೆಗಳಲ್ಲಿ, 9 ಬಾಲಗೋಕುಲ ಮತ್ತು ಸರ್ಕಾರಿ ವಿದ್ಯಾರ್ಥಿ ನಿಲಯಗಳು ಸೇರಿದಂತೆ ಒಟ್ಟು 180 ಕಾರ್ಯಕ್ರಮಗಳನ್ನು ನಡೆಸಲಾಯಿತು.
- ಕಾರ್ಯಕ್ರಮಗಳಲ್ಲಿ ಮಹಿಳೆಯರು, ಪುರುಷರು ಮತ್ತು ಮಕ್ಕಳು ಸೇರಿದಂತೆ 2 ಸಾವಿರಕ್ಕೂ ಅಧಿಕ ಜನರು ಭಾಗವಹಿಸಿದ್ದರು.
- ಶಿಕ್ಷಕರು ಮತ್ತು ಮಕ್ಕಳು ಭಾರತ ಮಾತಾ ಪೂಜನದ ಮಹತ್ವ ಕುರಿತು ಮಾತನಾಡಿದರು.



**ಚಿಣ್ಣರ ರಥೋತ್ಸವ:**

09.02.2023ರಂದು ಶಾಲಾ ಆವರಣದಲ್ಲಿರುವ ಶ್ರೀ ವಿದ್ಯಾಗಣಪತಿ ದೇವಸ್ಥಾನದ ಚಿಣ್ಣರ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.



--

## ರಾಷ್ಟ್ರೋತ್ಥಾನ ವಿದ್ಯಾಲಯ
ಹೊಳೆಹೊನ್ನೂರು, ಶಿವಮೊಗ್ಗ ಜಿಲ್ಲೆ

**ಕಾರ್ಯವ್ಯಾಪ್ತಿ:**

- ಭದ್ರಾವತಿ ತಾಲೂಕಿನ ಹೊಳೆಹೊನ್ನೂರು, ಸನ್ಯಾಸಿಕೋಡಮಗ್ಗಿ, ಆನವೇರಿ, ಮಲ್ಲಾಪುರ, ಕೆರೆಬೀರನಹಳ್ಳಿ,
- ಹೊಸನಗರ ತಾಲೂಕಿನ ರಿಪ್ಪನ್‌ಪೇಟೆ



**ಕ್ರಮಿಸಿರುವ ಮೈಲುಗಲ್ಲುಗಳು:**

- 1987ರಿಂದ ರಾಷ್ಟ್ರೋತ್ಥಾನ ಬಳಗದಿಂದ ಪ್ರಾರಂಭಗೊಂಡು 11 ಚಟುವಟಿಕೆಗಳು ನಡೆಯುತ್ತಿವೆ.
- ಹೊಳೆಹೊನ್ನೂರು ಮತ್ತು ಸುತ್ತಮುತ್ತಲಿನ 38 ಗ್ರಾಮಗಳಿಂದ ಮಕ್ಕಳು ಶಾಲೆಗೆ ಬರುತ್ತಿದ್ದಾರೆ.
- ಬಾಡಿಗೆಯ ಒಂದು ಕೊಠಡಿಯಿಂದ ಪ್ರಾರಂಭಗೊಂಡು ಇಂದು ನಾಲ್ಕು ಎಕರೆಯ ವಿಶಾಲ ಜಾಗದಲ್ಲಿ ಸ್ವಂತ ಕಟ್ಟಡ ಹೊಂದಿದೆ.
- ಪ್ರಾರಂಭದಲ್ಲಿ 30 ವಿದ್ಯಾರ್ಥಿಗಳಿಂದ 535 ವಿದ್ಯಾರ್ಥಿಗಳವರೆಗೆ ವಿಸ್ತರಿಸಿದೆ.





**ಈ ಸಾಲಿನಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮಗಳು:**

- ಸಾಮೂಹಿಕ ಸತ್ಯನಾರಾಯಣ ಪೂಜೆ, ವಿದ್ಯಾರಂಭ ಕಾರ್ಯಕ್ರಮ, ಮಹಾ ಶಿವರಾತ್ರಿ, ಶಿಶುಸಂಗಮ, ಮಾತೃಸಂಗಮ, ದೇಶಭಕ್ತಿಗೀತೆಗಳ ಅಭ್ಯಾಸವರ್ಗ, ಬೆಳದಿಂಗಳ ಕಾರ್ಯಕ್ರಮ
- ಗೀತಾ ಜಯಂತಿ – ಕೃಷ್ಣನ ಕುರಿತಾದ ಹಾಡುಗಳು, ನೃತ್ಯಗಳು, ನಾಟಕಗಳು, ಕೃಷ್ಣನ ಜೀವನದ ವಿವಿಧ ಪ್ರಸಂಗಗಳು ಮತ್ತು ಶ್ಲೋಕಗಳು (300ಕ್ಕಿಂತ ಅಧಿಕ ವಿದ್ಯಾರ್ಥಿಗಳು ಭಾಗವಹಿಸಿದ್ದರು)
- ದಸರಾ ಸಂದರ್ಭದಲ್ಲಿ 5 ದಿನಗಳ ಕಾಲ ಅಲಂಕಾರಿಕ ಗೊಂಬೆಗಳ ಉತ್ಸವ

**ಕೈಗೊಂಡ ಸೇವಾ ಚಟುವಟಿಕೆಗಳು:**

- ಮಾತೃಮಂದಿರ–ವಾರಕ್ಕೊಮ್ಮೆ (ಹೊಳೆಹೊನ್ನೂರು, ಸನ್ಯಾಸಿಕೋಡಮಗ್ಗಿ, ಆನವೇರಿ, ಮಲ್ಲಾಪುರ, ಕೆರೆಬೀರನಹಳ್ಳಿ)
- ಬಾಲಗೋಕುಲ – (ಸನ್ಯಾಸಿಕೋಡಮಗ್ಗಿ, ಆನವೇರಿ, ಮಲ್ಲಾಪುರ, ಕೆರೆಬೀರನಹಳ್ಳಿ, ರಿಪ್ಪನ್ ಪೇಟೆ)
- ಭಜನಾಕೇಂದ್ರ – (ಹೊಳೆಹೊನ್ನೂರು, ಮಲ್ಲಾಪುರ)

**ಪ್ರಸಕ್ತ ಸಾಲಿನ ಸಾಧನೆ:**

- ಮೂರರಿಂದ ಹತ್ತನೇ ತರಗತಿಯ ಎಲ್ಲ ಮಕ್ಕಳಿಗೂ ಕಂಪ್ಯೂಟರ್ ಶಿಕ್ಷಣ
- ವಿಜ್ಞಾನ ಪ್ರಯೋಗಾಲಯದ ವ್ಯವಸ್ಥಿತ ಜೋಡಣೆ









- ಪ್ರತಿ ಶುಕ್ರವಾರ ಶಾಲೆಯ ಎಲ್ಲ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ಪೋಷಕರ ಸಹಯೋಗದೊಂದಿಗೆ ಮಧ್ಯಾಹ್ನದ ಭೋಜನ ವ್ಯವಸ್ಥೆ.

**ಉಲ್ಲೇಖನೀಯ ಸಂಗತಿಗಳು:**

- ಶಾಲೆಯ ಎಲ್ಲ ವಿದ್ಯಾರ್ಥಿಗಳಲ್ಲಿ ಉತ್ತಮ ದಿನಚರಿಯ ಯೋಜನೆ ಮತ್ತು ಅನುಷ್ಠಾನ (ಸೂರ್ಯೋದಯಕ್ಕಿಂತ ಮೊದಲು ಏಳುವುದು, ಭೂಮಿ ವಂದನೆ – ಕರಾಗ್ರೆ ವಸತೆ ಲಕ್ಷ್ಮಿ ಶ್ಲೋಕ, ನಿತ್ಯಸ್ನಾನ, ಒಂಬತ್ತು ಶ್ಲೋಕಗಳೊಂದಿಗೆ ದೇವರಿಗೆ ನಮಸ್ಕಾರ, ಮನೆಯ ಹಿರಿಯರೆಲ್ಲರಿಗೂ ನಮಸ್ಕಾರ, ಮನೆಗೆಲಸಗಳಲ್ಲಿ ತಂದೆ–ತಾಯಂದಿರಿಗೆ ಸಹಾಯ, ಪ್ರತಿನಿತ್ಯ ದೇವಸ್ಥಾನಕ್ಕೆ ಹೋಗಿಬರುವುದು ಇತ್ಯಾದಿ)
- ಶಾಲಾ ಪೋಷಕರಿಂದ ಸ್ವಪ್ರೇರಣೆಯಿಂದ ಶಾಲಾ ಹೊರ ಆವರಣದ ಸ್ವಚ್ಛತೆ.
- ಸಮಾಜದ ಎಲ್ಲ ಸ್ತರದ ಪೋಷಕರಿಂದಲೇ ಮಧ್ಯಾಹ್ನದ ಭೋಜನದ ತಯಾರಿ ಮತ್ತು ವಿತರಣೆ.
- ಹಿರಿಯ ವಿದ್ಯಾರ್ಥಿಯಾದ ನಿಖಿಲ್ ಕೆ.ಸಿ. ಉತ್ತರಪ್ರದೇಶದ ಬರೇಲಿ ವಿಶ್ವವಿದ್ಯಾಲಯದಲ್ಲಿ ಎಂ.ವಿ.ಎಸ್ಸಿ.ಯಲ್ಲಿ ಪಿ.ಎಚ್.ಡಿ. ಪದವಿಯನ್ನು ಪಡೆದಿರುತ್ತಾನೆ.
- ವರ್ಷಪೂರ್ಣ ಪ್ರತಿದಿನ ಒಂದು ಅವಧಿ ಶಾರೀರಿಕ ಶಿಕ್ಷಣಕ್ಕೆ ಮೀಸಲಿಟ್ಟು ಅನುಷ್ಠಾನಗೊಳಿಸಿದೆ.









## ಉಲ್ಲೇಖನೀಯ ಹೇಳಿಕೆಗಳು:

ಮಕ್ಕಳನ್ನು ಸುಸಂಸ್ಕೃತರನ್ನಾಗಿ ಮಾಡುವ ಕಾರ್ಯದಲ್ಲಿ ರಾಷ್ಟ್ರೋತ್ಥಾನ ಶಾಲೆ ತೊಡಗಿಕೊಂಡಿರುವುದು ನಿಮ್ಮೆಲ್ಲರ (ಪೋಷಕರನ್ನು ಉದ್ದೇಶಿಸಿ) ಅದೃಷ್ಟವೇ ಸರಿ.

**– ಪೂಜ್ಯಶ್ರೀ ವಿನಯಾನಂದ ಸ್ವಾಮೀಜಿ**

ಹೊಳೆಹೊನ್ನೂರಿನ ರಾಷ್ಟ್ರೋತ್ಥಾನ ಶಿಶುಮಂದಿರದಲ್ಲಿ ಮನೋವೈಜ್ಞಾನಿಕ ರೀತ್ಯಾ ಶಿಕ್ಷಣವನ್ನು ಕ್ರಮಬದ್ಧವಾಗಿ ನೀಡಲಾಗುತ್ತಿದೆ ಹಾಗಾಗಿ ಇಲ್ಲಿ ಬೆಳೆದ ವಿದ್ಯಾರ್ಥಿಗಳು ಸಮಗ್ರ ವಿಕಾಸವನ್ನು ಹೊಂದುತ್ತಾರೆ ಎಂಬ ವಿಶ್ವಾಸ ನನಗಿದೆ.

**– ಶ್ರೀಮತಿ ಅನ್ನಪೂರ್ಣಕ್ಕ,** ಶಿಕ್ಷಣ ತಜ್ಞೆ

ಶಾಲಾ ಕಟ್ಟಡದ ಪ್ರವೇಶವಾದೊಡನೆಯೇ ಒಂದು ರೀತಿಯ ಸಕಾರಾತ್ಮಕ ಕಂಪನ ಉಂಟಾಗುತ್ತದೆ

**– ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್,** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳು





## ಮುಂದಿನ ಕಾರ್ಯವಿಸ್ತಾರ:

ಭದ್ರಾವತಿ ಹಾಗೂ ಶಿವಮೊಗ್ಗ ತಾಲೂಕಿನ 15 ಗ್ರಾಮಗಳಲ್ಲಿ ಸೇವಾ ಚಟುವಟಿಕೆಗಳನ್ನು ಪ್ರಾರಂಭಿಸುವುದು.

––





## ಲಯನ್ಸ್ ಸೇವಾಭಾರತಿ ವಿದ್ಯಾಲಯ

ಉಲ್ಲಾಳು–ಉಪನಗರ, ಬೆಂಗಳೂರು



ಧರ್ಮ, ಜಾತಿ, ಮತ, ಲಿಂಗ ಇತ್ಯಾದಿಗಳನ್ನು ಲೆಕ್ಕಿಸದೇ ಪ್ರತಿಯೊಬ್ಬರಿಗೂ ಸಮಾನತೆಯನ್ನು ಸೂಚಿಸುವ 70ನೇ ಗಣರಾಜ್ಯೋತ್ಸವವನ್ನು ದಿನಾಂಕ: 26.01.2023ರ ಶನಿವಾರದಂದು ವಿಜೃಂಭಣೆಯಿಂದ ಆಚರಿಸಲಾಯಿತು.

--

## ಜಯಗೋಪಾಲ್ ಗರೋಡಿಯಾ ರಾಷ್ಟ್ರೋತ್ಥಾನ ವಿದ್ಯಾಲಯ (ಜೆ.ಜಿ.ಆರ್.ವಿ.)

ಕಲ್ಯಾಣ ನಗರ, ಬೆಂಗಳೂರು



- **3ನೇ ಕ್ಲಾಸಿನ ಮಕ್ಕಳಿಗೆ ಉಚಿತ ಹಲ್ಲಿನ ತಪಾಸಣೆ** ಹಾಗೂ ಸೋಂಕಿತ ವಿದ್ಯಾರ್ಥಿಗಳಿಗೆ ಉಚಿತ ಚಿಕಿತ್ಸೆ ನೀಡಲಾಯಿತು.
- 9ನೇ ತರಗತಿಯ **ದಿಲೀಪ್** ವಿದ್ಯಾಭಾರತಿಯವರು ಉದಯಪುರದಲ್ಲಿ ಆಯೋಜಿಸಿದ್ದ **ರಾಷ್ಟ್ರೀಯ ಯೋಗಾಸನ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ** ಪಡೆದಿರುತ್ತಾನೆ.
- 10ನೇ ತರಗತಿಯ ವಿದ್ಯಾರ್ಥಿಗಳು **ಎನ್.ಎ.ಎಲ್.ಗೆ ಭೇಟಿ** ನೀಡಿದರು ಹಾಗೂ **ಉತ್ತರ ಕೊಪ್ಪದ ಆದಿವಾಸಿಗಳ ಹಳ್ಳಿಯಲ್ಲಿ 4 ದಿನಗಳ ಪ್ರವಾಸ** ಮಾಡಿದರು. ಮಕ್ಕಳು ಈ ಪ್ರವಾಸದಲ್ಲಿ ಆದಿವಾಸಿಗಳ ಸಂಸ್ಕೃತಿ, ಜೈವಿಕ ಕೃಷಿ, ಗವ್ಯೋತ್ಪನ್ನಗಳ ಪರಿಚಯ ಮಾಡಿಕೊಂಡರು ಮತ್ತು ಜೀವನ ಕೌಶಲ್ಯಗಳನ್ನು ಅನುಭವಕ್ಕೆ ತಂದುಕೊಂಡರು.

## ರಾಷ್ಟ್ರೋತ್ಥಾನ ವಿದ್ಯಾಲಯ
ದಾವಣಗೆರೆ

ಸಾರ್ವಜನಿಕರಿಗಾಗಿ ರಾಷ್ಟ್ರೋತ್ಥಾನ ಯೋಗಕೇಂದ್ರವನ್ನು ಪ್ರಾರಂಭಿಸಲಾಯಿತು.

--

## ರಾಷ್ಟ್ರೋತ್ಥಾನ ವಿದ್ಯಾಲಯ
ಧಾರವಾಡ

- ಸಮಾಜದ ಎಲ್ಲಾ ವರ್ಗದ ಜನರಲ್ಲಿ ಸಾಮಾಜಿಕ ಸಾಮರಸ್ಯ ಮತ್ತು ಆಧ್ಯಾತ್ಮಿಕ ಮನೋಭಾವನೆಯ ವಿಕಾಸಕ್ಕಾಗಿ ದಿನಾಂಕ 06-01-2023ರಂದು ವಿದ್ಯಾಲಯದಲ್ಲಿ ಶ್ರೀ ಸಾಮೂಹಿಕ ಸತ್ಯನಾರಾಯಣ ಪೂಜಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.
- ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನೊಳಗೊಂಡಂತೆ 3000 ಜನ ಪಾಲ್ಗೊಂಡಿದ್ದು ಎಲ್ಲರಿಗೂ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.
- ಪರಮಪೂಜ್ಯ ಡಾ॥ ಕೊಟ್ಟೂರು ಬಸವೇಶ್ವರ ಶಿವಾಚಾರ್ಯ ಸ್ವಾಮೀಜಿ, ಜುಕ್ತಿಮಠ ಇವರು ಆಶೀರ್ವಚನ ನೀಡಿದರು.

--

## ಜ್ಞಾನಭಾರತಿ ವಿದ್ಯಾಮಂದಿರ
ಚಿತ್ರದುರ್ಗ

- 30.01.2023ರಂದು ಖ್ಯಾತ ಚಲನಚಿತ್ರ ನಿರ್ದೇಶಕರಾದ **ಶ್ರೀ ಟಿ.ಎಸ್. ನಾಗಾಭರಣ** ಅವರು ಶಾಲೆಗೆ ಭೇಟಿ ನೀಡಿ, **ವಿದ್ಯಾರ್ಥಿಗಳೊಂದಿಗೆ ಸಂವಾದ** ಕಾರ್ಯಕ್ರಮ ನಡೆಸಿಕೊಟ್ಟರು. ವಿದ್ಯಾರ್ಥಿಗಳಿಗೆ ಮೊಬೈಲ್ ಬಳಸುವುದು ಜ್ಞಾನಾರ್ಜನೆಗೆ ಪೂರಕವಾಗಿರಬೇಕೇ ಹೊರತು ಅದೊಂದು ಗೀಳಾಗಬಾರದು. ವಿದ್ಯಾರ್ಥಿ ದೆಸೆಯಲ್ಲಿಯೇ ನಟನೆ, ಸಾಹಿತ್ಯ, ಸಂಗೀತದಂತಹ ಸೃಜನಶೀಲ ಕಲೆಗಳನ್ನು ಮೈಗೂಡಿಸಿಕೊಳ್ಳಬೇಕು. ಇಂದಿನ ಶಿಕ್ಷಣದ ಜೊತೆಗೆ ನೈತಿಕ ಶಿಕ್ಷಣವು ದೊರೆತಾಗ ವಿದ್ಯಾರ್ಥಿಗಳ ಸೃಜನಶೀಲತೆ ಮತ್ತು ಮನೋಬಲ ಗಟ್ಟಿಯಾಗಲು ಸಾಧ್ಯ ಎಂದು ಹೇಳಿದರು.
- 22.10.2022ರಂದು ಜ್ಞಾನಭಾರತಿ ವಿದ್ಯಾಮಂದಿರದಲ್ಲಿ **ಕಿಚನೋ ಮಿಕ್ಸ್ 2022 ದೇಸೀಯ ಆಹಾರ ಸ್ಪರ್ಧೆಯನ್ನು** ಆಯೋಜಿಸಲಾಗಿತ್ತು. ವಿದ್ಯಾರ್ಥಿಗಳು ಬೆಂಕಿಯನ್ನು ಉಪಯೋಗಿಸದೇ ತಯಾರಿಸಿದ ಆಹಾರ ಪದಾರ್ಥಗಳು ಎಲ್ಲರ ಮೆಚ್ಚುಗೆ ಗಳಿಸಿದವು. ಆಹಾರ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.



# ರಾಷ್ಟ್ರೋತ್ಥಾನ ವಿದ್ಯಾಕೇಂದ್ರ

## ಸಿ.ಬಿ.ಎಸ್.ಇ. ಶಾಲೆಗಳು

scan/ click for video



'ಆಧುನಿಕ ಶಿಕ್ಷಣದ ನೆಪದಲ್ಲಿ ವಿದ್ಯಾರ್ಥಿಗಳು ಭಾರತೀಯತೆಯಿಂದ ದೂರವಾಗಬಾರದು' ಇದು ರಾಷ್ಟ್ರೋತ್ಥಾನ ಪರಿಷತ್‌ನ ಕಳಕಳಿ. ಈ ಹಿನ್ನೆಲೆಯಲ್ಲಿಯೇ ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಸಿ.ಬಿ.ಎಸ್.ಇ. ಪಠ್ಯಕ್ರಮದ ಶಾಲೆಗಳನ್ನು ನಿರ್ಮಿಸುವ ಯೋಜನೆಯನ್ನು ಹಮ್ಮಿಕೊಂಡಿದ್ದು, ವಿದ್ಯಾರ್ಥಿಗಳಿಗೆ ಇಂದಿನ ಕಾಲಮಾನಕ್ಕೆ ತಕ್ಕಂತೆ ಆಧುನಿಕ ಕಲಿಕಾ ಪರಿಸರವನ್ನು ಸೃಷ್ಟಿಸಿ, ಅಲ್ಲಿ ಭಾರತೀಯ ಆಚಾರ, ವಿಚಾರ, ಸಂಸ್ಕೃತಿಯೊಂದಿಗೆ ಶಿಕ್ಷಣ ನೀಡುವ ಧ್ಯೇಯದೊಡನೆ ಕಳೆದ ಕೆಲವು ದಶಕಗಳಿಂದ ಕಾರ್ಯನಿರ್ವಹಿಸುತ್ತಿವೆ.

ಪ್ರಸ್ತುತ ಒಟ್ಟು 8 ಸಿ.ಬಿ.ಎಸ್.ಇ. ಶಾಲೆಗಳನ್ನು ಬೆಂಗಳೂರು, ದಾವಣಗೆರೆ, ಹಗರಿಬೊಮ್ಮನಹಳ್ಳಿ, ಧಾರವಾಡ ಹಾಗೂ ಮೈಸೂರಿನಲ್ಲಿ ತೆರೆದಿದ್ದು, ಈ ಎಲ್ಲ ಶಾಲೆಗಳಲ್ಲಿ ಸುಮಾರು 15 ಸಾವಿರಕ್ಕಿಂತ ಹೆಚ್ಚಿನ ಮಕ್ಕಳು ಶಿಕ್ಷಣವನ್ನು ಪಡೆಯುತ್ತಿದ್ದಾರೆ.

### ಪಂಚಮುಖಿ ಶಿಕ್ಷಣ:

ರಾಷ್ಟ್ರೋತ್ಥಾನದ ಎಲ್ಲ ಶಾಲೆಗಳಲ್ಲಿ ಕಲಿಯುವ ವಿದ್ಯಾರ್ಥಿಗಳ ಸರ್ವತೋಮುಖ ವಿಕಾಸವಾಗಬೇಕೆಂಬ ಆಶಯದೊಂದಿಗೆ, ಸಮಾಜದಲ್ಲಿ ಅವರ ಸ್ಥಾನ, ಜವಾಬ್ದಾರಿ, ತಮ್ಮನ್ನು ತಾವು ನಿಯಂತ್ರಿಸಿಕೊಳ್ಳುವ ಕಲೆ, ಸಮಾಜದಲ್ಲಿ ಇತರರೊಂದಿಗೆ ಬೆರೆತು ನಡೆಯುವ ಶಕ್ತಿ ಹಾಗು ರಾಷ್ಟ್ರನಿಷ್ಠ, ಸಮಾಜಹಿತ ಗುಣಗಳನ್ನು ಪಂಚಮುಖಿ ಶಿಕ್ಷಣದ ಮೂಲಕ ನೀಡಿ ವಿದ್ಯಾರ್ಥಿಗಳನ್ನು ಸುಸಂಸ್ಕೃತರನ್ನಾಗಿಸುವ ಗುರಿಯನ್ನು ಇಟ್ಟುಕೊಳ್ಳಲಾಗಿದೆ.


RASHTROTTHANA VIDYA KENDRA
(To be affiliated to CBSE)
Open


Registrations Open 2023-2024
Class-Pre KG to X Std
Contact: School Office
MANGALORE ONE


BANGALORE SAHODAYA SCHOOLS
COMPLEX ASSOCIATION
change the world."


RYAN
EduSports




RASHTROTTHANA VIDYA KENDRA
6th Stage 8th Block Banashankari Bengaluru-60.






## ಪ್ರಸಕ್ತ ಸಾಲಿನ ಕಾರ್ಯಚಟುವಟಿಕೆ ಹಾಗೂ ವರದಿ:

- ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಸಮೂಹದ ಎಲ್ಲ ಶಾಲೆಗಳು ಶೈಕ್ಷಣಿಕ ವರ್ಷ 2021–22ರಲ್ಲಿ ಶೇಕಡ 100ರಷ್ಟು ಫಲಿತಾಂಶವನ್ನು ಪಡೆದಿವೆ. ಕಳೆದ ಸಾಲಿನ 10ನೇ ತರಗತಿ ಪರೀಕ್ಷೆಯಲ್ಲಿ ಅನೇಕ ವಿದ್ಯಾರ್ಥಿಗಳು ವೈಯ್ಯಕ್ತಿಕವಾಗಿ ಹಲವಾರು ವಿಷಯಗಳಲ್ಲಿ 100ಕ್ಕೆ 100 ಅಂಕಗಳನ್ನು ಪಡೆದಿದ್ದಾರೆ. ಅನೇಕ ವಿದ್ಯಾರ್ಥಿಗಳು ಜಿಲ್ಲೆ ಹಾಗು ತಾಲ್ಲೂಕಿಗೆ ಮೊದಲಿಗರಾಗಿ ಓದಿದ ಶಾಲೆಗೆ ಕೀರ್ತಿಯನ್ನು ತಂದಿದ್ದಾರೆ.



- ವಿದ್ಯಾಕೇಂದ್ರಗಳಲ್ಲಿ ಭಾರತೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಹಬ್ಬಗಳನ್ನು ಆಚರಿಸಲಾಗುತ್ತದೆ. ಶಾಲೆಯಲ್ಲಿ ಬೆಳಗ್ಗೆ ಶಾಲಾ ಪ್ರಾರ್ಥನೆಯು ಸುಮಾರು 30 ನಿಮಿಷಗಳ ಕಾಲ ನಡೆಯುತ್ತದೆ. ಅದರಲ್ಲಿ ಮಕ್ಕಳಿಗೆ ನಿತ್ಯ ಪಂಚಾಂಗ ಶ್ರವಣ, ಧ್ಯಾನ, ಆಯ್ದ ಶ್ಲೋಕಗಳ ಪಠಣವಿರುತ್ತದೆ. ಶಾಲೆಯ ಎಲ್ಲ ಶಿಕ್ಷಕರು, ವಿದ್ಯಾರ್ಥಿಗಳು, ಬೋಧಕೇತರ ಸಿಬ್ಬಂದಿಗಳು ಸರಸ್ವತಿ ವಂದನದಲ್ಲಿ ಭಾಗವಹಿಸುತ್ತಾರೆ.



- ಮಕ್ಕಳ ಹುಟ್ಟುಹಬ್ಬವನ್ನು ಆಶೀರ್ವಚನದ ಮೂಲಕ ಶಾಲೆಯ ಪ್ರಾರ್ಥನೆಯ ಸಂದರ್ಭದಲ್ಲಿ ಆಚರಿಸಲಾಗುತ್ತದೆ.















- ಅದಲ್ಲದೇ, ಮಹಾಪುರುಷರ ಜಯಂತಿ ನಿಮಿತ್ತವಾಗಿ ಅವರ ಪ್ರೇರಣದಾಯಕ ಸಂಗತಿಗಳನ್ನು ತಿಳಿಸಲಾಗುತ್ತದೆ.
- ಆಜಾದಿಕಾ ಅಮೃತ ಮಹೋತ್ಸವವನ್ನು ಎಲ್ಲ ವಿದ್ಯಾಕೇಂದ್ರಗಳಲ್ಲಿ ಆಚರಿಸಲಾಗಿದ್ದು, ಇದರ ಅಂಗವಾಗಿ ಭಾರತ ಅಂದು, ಇಂದು, ಮುಂದು ಎಂಬ ವಿಷಯಗಳ ಬಗ್ಗೆ ಮಕ್ಕಳಿಗೆ ತಿಳಿಸಿ ಹೇಳಲಾಯಿತು. ದೇಶಭಕ್ತಿಗೀತ ಗಾಯನ, ಸ್ವದೇಶಿ ವಸ್ತುಗಳ ಬಳಕೆ ಹಾಗು ಇತರೇ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.
- ಇವುಗಳಲ್ಲದೇ ಗಣಿತ, ವಿಜ್ಞಾನ ಹಾಗು ಕನ್ನಡ ಸಪ್ತಾಹಗಳನ್ನು ಸಹ ಆಚರಿಸಲಾಗಿದೆ.

- ವಿದ್ಯಾಕೇಂದ್ರಗಳಲ್ಲಿ ಮಕ್ಕಳಿಗೆ ಪಠ್ಯಪೂರಕ ಹಾಗು ಪಠ್ಯೇತರ ಚಟುವಟಿಕೆಗಳಿಗೆ ತಕ್ಕಂತೆ ಅನೇಕ ಸ್ಪರ್ಧೆಗಳನ್ನು ಮಾಡಲಾಯಿತು. ಭಗವದ್ಗೀತೆ ಪಠಣ ಸ್ಪರ್ಧೆ, ಶ್ಲೋಕ ಪಠಣ ಸ್ಪರ್ಧೆ, ಕ್ರೀಡಾ ಸ್ಪರ್ಧೆಗಳು, ಸಂಗೀತ ಹಾಗೂ ಚಿತ್ರಕಲೆ, ನಾಟಕ, ಅಭಿನಯ ಹಾಗೂ ಛದ್ಮವೇಷದಂತಹ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.
- ಶಾಲೆಗಳಲ್ಲಿ 11 ವಿಷಯಗಳನ್ನು ಕುರಿತು ಮಾಡ್ಯೂಲ್‌ಗಳನ್ನು ರಚಿಸಲಾಗಿದೆ. ಅದರಲ್ಲಿ ದೈಹಿಕ ಸಧೃಡತೆ, ಆರೋಗ್ಯಕರ ದಿನಚರಿ, ಮೌಲ್ಯವರ್ಧನ, ಭಾಷಾ ಕೌಶಲ್ಯಗಳು, ಗಣಿತ ಹಾಗು ವೈಜ್ಞಾನಿಕ ಕೌಶಲಗಳು, ಸಂಗೀತ, ಚಿತ್ರಕಲೆ, ಸ್ವಾಧ್ಯಾಯ, ಭಾರತೀಯ ಜ್ಞಾನ ಪರಂಪರೆ, ಜೀವನ ಕೌಶಲ್ಯಗಳು, ಶಾಲಾ ಫಲಿತಾಂಶ ಎಂಬ ಒಟ್ಟು 11 ವಿಷಯಗಳ ಮಾಹಿತಿಯನ್ನು ಪ್ರತಿ ತಿಂಗಳೂ 11 ಶಿಕ್ಷಕರ ಮೇಲುಸ್ತುವಾರಿಯಲ್ಲಿ ತೆಗೆದುಕೊಳ್ಳಲಾಗಿದೆ.

## ಸಮಾಜಮುಖಿ ಕಾರ್ಯಾಗಾರಗಳು ಹಾಗೂ ಸೇವಾ ಚಟುವಟಿಕೆಗಳು:

- ವಿದ್ಯಾಕೇಂದ್ರಗಳ ಹತ್ತಿರದ ಶಾಲೆಗಳ ಮಕ್ಕಳಿಗೆ ಉಚಿತವಾಗಿ ಯೋಗ ತರಬೇತಿಯನ್ನು ಪ್ರತಿ ಶನಿವಾರ ನೀಡಲಾಗುತ್ತಿದೆ.
- ವಿಶ್ವಭ್ರಾತೃತ್ವದ ಮಹಿಮೆಯನ್ನು ಸಾರುವ ಸಲುವಾಗಿ ಪ್ರತಿವರ್ಷ ರಕ್ಷಾಬಂಧನದಂದು ನಗರದ ಎಲ್ಲ ಮನೆಗಳಿಗೆ ಹಾಗೂ ಸರ್ಕಾರಿ ಕಚೇರಿಗಳಿಗೆ ವಿದ್ಯಾರ್ಥಿಗಳು ಶಿಕ್ಷಕರೊಂದಿಗೆ ತೆರಳಿ ಸುಮಾರು 10 ಸಾವಿರ ಮಂದಿಗೆ ರಕ್ಷೆ ಕಟ್ಟಿದ್ದಾರೆ.

















## ವಿದ್ಯಾಕೇಂದ್ರಗಳಿಗೆ ಗಣ್ಯ, ಮಾನ್ಯರ ಭೇಟಿ:

ವಿದ್ಯಾಕೇಂದ್ರಗಳಲ್ಲಿ ಹಲವು ಕಾರ್ಯಕ್ರಮಗಳು ಹಾಗೂ ಸಂವಾದಗಳನ್ನು ಏರ್ಪಡಿಸಲಾಗುತ್ತದೆ. ಈ ಸಂದರ್ಭಗಳಲ್ಲಿ ಖ್ಯಾತ ವಿಜ್ಞಾನಿಗಳು, ವೈದ್ಯರು, ಸ್ವಾಮೀಜಿಗಳು, ಸಂತರು, ಕ್ರೀಡಾಪಟುಗಳು, ಇತಿಹಾಸಕಾರರು, ರಾ.ಸ್ವಂ. ಸಂಘದ ಹಿರಿಯರು, ಯೋಗ ತಜ್ಞರು, ಸಾಧಕರು, ಮಿಲಿಟರಿಯಲ್ಲಿ ರಾಷ್ಟ್ರಸೇವೆಗೈದ ಸೈನಿಕರು ಹಾಗು ಅಧಿಕಾರಿಗಳು, ಸರ್ಕಾರದ ಉನ್ನತ ಅಧಿಕಾರಿಗಳು, ಪೋಲಿಸ್ ಅಧಿಕಾರಿಗಳು, ನ್ಯಾಯಾಧೀಶರು, ವಕೀಲರು ಹಾಗು ಇನ್ನೂ ಅನೇಕ ಗಣ್ಯಮಾನ್ಯರ ಜೊತೆಯಲ್ಲಿ ಮಕ್ಕಳಿಗೆ ಸಂವಾದ ಏರ್ಪಡಿಸಿ ಅವರ ಜ್ಞಾನವಿಕಾಸಕ್ಕಾಗಿ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು.








## ಶಿಕ್ಷಕರಿಗೆ ತರಬೇತಿ ಕಾರ್ಯಾಗಾರಗಳು:

- 2022–23ನೇ ಶೈಕ್ಷಣಿಕ ವರ್ಷದ ಆರಂಭದಲ್ಲಿ ಮೇ ತಿಂಗಳ ದಿನಾಂಕ 16, 17 ಹಾಗು 18ರ ಮೂರು ದಿನಗಳ ಕಾಲ ಉತ್ತರವಲಯದ ಧಾರವಾಡ, ಹಗರಿಬೊಮ್ಮನಹಳ್ಳಿ, ದಾವಣಗೆರೆ ವಿದ್ಯಾಲಯಗಳ ಶಿಕ್ಷಕರಿಗೆ, ಶಿಕ್ಷಕರ ಪ್ರಶಿಕ್ಷಣ ವರ್ಗವನ್ನು ದಾವಣಗೆರೆಯಲ್ಲಿ ಆಯೋಜಿಸಲಾಗಿತ್ತು.
- ವಿದ್ಯಾಕೇಂದ್ರಗಳ ಆಯ್ದ ಶಿಕ್ಷಕರಿಗೆ ಚಿಂತನ ಬೈಠಕನ್ನು ಬಿಳಿಗಿರಿರಂಗನ ಬೆಟ್ಟದಲ್ಲಿ 2022ರ ಜುಲೈ ತಿಂಗಳನಲ್ಲಿ ಆಯೋಜಿಸಲಾಗಿತ್ತು.
- 2022ರ ಸಪ್ಟೆಂಬರ್ 9, 10 ಹಾಗು 11ರಂದು ಧಾರವಾಡದಲ್ಲಿ ಎಲ್ಲ 6 ವಿದ್ಯಾಕೇಂದ್ರಗಳ ಭೂಗೋಳ ಶಿಕ್ಷಕರ ತರಬೇತಿ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.




- 2022ರ ಅಕ್ಟೋಬರ್ 7 ಹಾಗೂ 8ರಂದು ಸಂಸ್ಥೆಯ ಎಲ್ಲ ಶಿಕ್ಷಕರಿಗೆ ವಿಷಯಾಧಾರಿತವಾಗಿ ತರಬೇತಿಯನ್ನು ಬೆಂಗಳೂರಿನಲ್ಲಿರುವ ವಿವಿಧ ಪ್ರಕಲ್ಪಗಳಲ್ಲಿ ಆಯೋಜಿಸಲಾಗಿತ್ತು.
- 2023 ಜನವರಿ ತಿಂಗಳ 8, 9ನೇ ದಿನಾಂಕದ ಎರಡು ದಿನಗಳ ಕಾಲ ಸಿ.ಬಿ.ಎಸ್.ಇ. ಬೋರ್ಡ್ ವತಿಯಿಂದ ಉತ್ತರವಲಯದ ಆಯ್ದ ಶಿಕ್ಷಕರಿಗೆ ದಾವಣಗೆರೆಯಲ್ಲಿ ಅನುಭವಾತ್ಮಕ ಕಲಿಕೆಯ ವಿಷಯದ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.




## ಮಕ್ಕಳಿಗಾಗಿ ನಡೆದ ಕಾರ್ಯಾಗಾರಗಳು:

- ವಿದ್ಯಾಕೇಂದ್ರಗಳ ಆಯ್ದ ವಿದ್ಯಾರ್ಥಿಗಳಿಗೆ ವ್ಯಕ್ತಿತ್ವ ವಿಕಸನ ತರಬೇತಿ ಶಿಬಿರಗಳನ್ನು ಮೂರು ಬಾರಿ ನಡೆಸಲಾಯಿತು. ಆ ಶಿಬಿರಗಳಲ್ಲಿ ಮಕ್ಕಳಿಗೆ ನಾಯಕತ್ವ ಗುಣಗಳ ಕಲಿಕೆ, ಉತ್ತಮ ಸಂಸ್ಕಾರ, ದೈನಂದಿನ ಆರೋಗ್ಯ, ಸ್ಥಳೀಯ ಐತಿಹಾಸ ಸ್ಥಳಗಳ ಭೇಟಿ, ಸಂಘಟನೆಯ ಜವಾಬ್ದಾರಿ, ಸಾಮಾಜಿಕ ಹೊಂದಾಣಿಕೆ ಹಾಗೂ ಇನ್ನಿತರ ಗುಣಗಳು ಬೆಳವಣಿಗೆಯಾಗುವಂತೆ ತರಬೇತಿ ನೀಡಲಾಯಿತು.



- ಎಂಟನೇ ತರಗತಿಯ ವಿದ್ಯಾರ್ಥಿಗಳಿಗಾಗಿಯೇ ಎನ್.ಸಿ.ಸಿ. ಘಟಕಗಳನ್ನು ಧಾರವಾಡ ಹಾಗೂ ಬೆಂಗಳೂರಿನ ಬನಶಂಕರಿ ವಿದ್ಯಾಕೇಂದ್ರಗಳಲ್ಲಿ ಪ್ರಾರಂಭಿಸಲಾಯಿತು.
- 2022ರ ಅಕ್ಟೋಬರ್ 13 ರಿಂದ 15ರ ವರೆಗೆ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕಾಗಿ ಸೃಷ್ಟಿ ಶಿಬಿರವನ್ನು ಆಯೋಜಿಸಲಾಗಿತ್ತು. ಈ ಶಿಬಿರದಲ್ಲಿ ಆರು ಸಿಬಿಎಸ್ಇ ಶಾಲೆಗಳ ಎಂಟನೇ ತರಗತಿಯ






ಒಟ್ಟು 120 ಆಯ್ದ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

- ಸ್ವಾತಂತ್ರ ಅಮೃತ ಮಹೋತ್ಸವದ ಪ್ರಯುಕ್ತ ಹರ್ ಘರ್ ತಿರಂಗಾ ಕಾರ್ಯಕ್ರಮವನ್ನು ವಿದ್ಯಾರ್ಥಿಗಳು ತಮ್ಮ ತಮ್ಮ ಮನೆಗಳ ಮೇಲೆ ಧ್ವಜವನ್ನ ಹಾರಿಸುವುದರ ಮೂಲಕ ಆಚರಿಸಿ, ರಾಷ್ಟ್ರ ಭಕ್ತಿಯನ್ನು ಮೆರೆಸಿದರು.
- ಮಕ್ಕಳ ವ್ಯಕ್ತಿತ್ವ ವಿಕಸನಕ್ಕಾಗಿ ಎಂಟನೇ ತರಗತಿಯ ವಿದ್ಯಾರ್ಥಿಗಳಿಗೆ ಎರಡನೇ ಹಂತದ ಸೃಷ್ಟಿ ಶಿಬಿರಗಳನ್ನು ಉತ್ತರ ಮತ್ತು ದಕ್ಷಿಣ ವಲಯಗಳಲ್ಲಿ ಆಯೋಜಿಸಲಾಗಿತ್ತು.

## ಮಕ್ಕಳ ಪಾಲಕ–ಪೋಷಕರಿಗಾಗಿ ತರಬೇತಿ ಕಾರ್ಯಾಗಾರಗಳು:

ವಿದ್ಯಾಕೇಂದ್ರಗಳಲ್ಲಿ ಪಾಲಕ–ಪೋಷಕರಿಗೆ ತರಬೇತಿ ಕಾರ್ಯಾಗಾರಗಳನ್ನು ಆಯೋಜಿಸಲಾಯಿತು. ವಿವಿಧ ವಯಸ್ಸಿನ ಮಕ್ಕಳ ಜೊತೆ ಪೋಷಕರ ನಡವಳಿಕೆಗಳು, ಮಕ್ಕಳನ್ನು ನಿಭಾಯಿಸುವ ಕಲೆ, ಅವರ ಭವಿಷ್ಯದ ಬಗ್ಗೆ ಪಾಲಕರು ವಹಿಸಬೇಕಾದ ಕಾಳಜಿ, ಮನೆಯ ಪದ್ಧತಿ, ಆಚಾರ ವಿಚಾರಗಳು, ಮಕ್ಕಳ ಮುಂದೆ ಪಾಲಕರ ನಡವಳಿಕೆಗಳು, ಮಕ್ಕಳಿಗೆ ಪಾಲಕರು ಕೊಡಲೇಬೇಕಾದ ಸಂಸ್ಕಾರಗಳ ಬಗ್ಗೆ ಮಾಹಿತಿ, ಆಹಾರ ಪದ್ಧತಿಗಳು ಹಾಗೂ ಪರೀಕ್ಷೆಯ ಸಂದರ್ಭದಲ್ಲಿ ಪಾಲಕರು ನಿರ್ವಹಿಸಬೇಕಾದ ಪಾತ್ರಗಳ ಕುರಿತಾಗಿ ತರಬೇತಿಯನ್ನು ಕಾರ್ಯಾಗಾರಗಳಲ್ಲಿ ನೀಡಲಾಯಿತು. ಪಾಲಕರಿಗಾಗಿ ಕುಟುಂಬ ಪ್ರಬೋಧನ ಕಾರ್ಯಕ್ರಮವನ್ನು ಸಹ ಆಯೋಜಿಸಲಾಗಿತ್ತು.

# ಪ್ರಶಿಕ್ಷಣಭಾರತಿ
# ಶಿಕ್ಷಕರ ಪ್ರಶಿಕ್ಷಣ ಪ್ರಕಲ್ಪ




### ಉದ್ದೇಶ:

- ಭಾರತೀಯ ಶಿಕ್ಷಣ, ಸಂಸ್ಕೃತಿ ಹಾಗೂ ಜ್ಞಾನ ಪರಂಪರೆಯ ದೃಷ್ಟಿಕೋನವು ಶಿಕ್ಷಕರಲ್ಲಿ ವಿಕಸಿತವಾಗುವಂತೆ ಮಾಡುವುದು. ಆ ಮೂಲಕ ವಿದ್ಯಾರ್ಥಿಗಳ ಸಮಗ್ರ ವ್ಯಕ್ತಿತ್ವ ರೂಪಿಸುವುದು.
- ಧ್ಯೇಯದ ಸಾಕಾರಕ್ಕಾಗಿ ರಾಜ್ಯದ ಪ್ರತಿ ಜಿಲ್ಲೆ ಹಾಗೂ ತಾಲೂಕಿನ ವಿವಿಧ ಹಂತಗಳ ಎಲ್ಲ ಶಿಕ್ಷಕರಿಗೆ ಪ್ರಶಿಕ್ಷಣ ವರ್ಗಗಳನ್ನು ಏರ್ಪಡಿಸುವುದು.
- ಶಿಕ್ಷಕರ ಸಾಮರ್ಥ್ಯವನ್ನು ವೃದ್ಧಿಸಿ ಸಂಪನ್ಮೂಲ ವ್ಯಕ್ತಿಗಳನ್ನಾಗಿ ಮಾಡುವುದು.
- ಭಾರತೀಯ ಚಿಂತನೆಯ 5,000 ಶಿಕ್ಷಕರ ಜಾಲ ನಿರ್ಮಾಣ.

### ಕ್ರಮಿಸಿರುವ ಮೈಲುಗಲ್ಲುಗಳು:

- 43 ನಿರಂತರ ಪ್ರಶಿಕ್ಷಣವರ್ಗಗಳು
- 39 ಸಾಮಾನ್ಯ ವರ್ಗಗಳು
- 3510 ಶಿಕ್ಷಕರಿಗೆ ತರಬೇತಿ






## ಪ್ರಸ್ತುತ ವರ್ಷ, 2022–23ಕ್ಕೆ ಮಾಡಿಕೊಂಡಿದ್ದ ಯೋಜನೆ:

- ಕಿರುಹೊತ್ತಿಗೆ ಪ್ರಕಟಣೆ
- ಕಾರ್ಯಾಗಾರಗಳ ಪಠ್ಯಕ್ರಮ ವಿನ್ಯಾಸ
- 5 ಜನ ತರಬೇತುದಾರರ ತಯಾರಿ
- 15 ಜಿಲ್ಲೆಗಳಲ್ಲಿ ತರಬೇತಿ
- 75 ತರಬೇತಿ ಕಾರ್ಯಕ್ರಮಗಳು
- 10 ಶಾಲೆಗಳಲ್ಲಿ ಪರಿಣಾಮದ ವಿಶ್ಲೇಷಣೆ




## ತರಬೇತಿ ಕಾರ್ಯಾಗಾರಗಳು:

- ಸಂಪನ್ಮೂಲ ವ್ಯಕ್ತಿಗಳಿಗೆ
- ಜಿಲ್ಲಾ ಸಂಯೋಜಕರಿಗೆ
- ಗಣಿತ, ವಿಜ್ಞಾನ ಶಿಕ್ಷಕರಿಗೆ
- ಜಿಲ್ಲಾ ಸಂಚಾಲಕರಿಗೆ
- ಶಿಕ್ಷಕರ ತರಬೇತಿಗಾಗಿ



## ವರ್ಷದ ಸಾಧನೆ:

- 15 ವಿಷಯಗಳಿಗೆ ಪಠ್ಯಕ್ರಮ ರಚನೆ.
- 100 ಮಂದಿ ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳ ಜೋಡಣೆ.
- 15 ಜಿಲ್ಲೆಗಳಲ್ಲಿ ಚಟುವಟಿಕೆಗಳು
- 82 ತರಬೇತಿ ಕಾರ್ಯಾಗಾರಗಳು





## ಉಲ್ಲೇಖನೀಯ ಸಂಗತಿಗಳು:

- NEP – 2020 ಸ್ವರೂಪ ಮತ್ತು ಅನುಷ್ಠಾನ ಕುರಿತು ಮಾರ್ಗದರ್ಶನ.
- ಸ್ವರಾಜ್ಯ @ 75 ಕುರಿತಂತೆ ಭಾರತೀಯರ ನಿರಂತರ ಹೋರಾಟ, ಸ್ವಾಭಿಮಾನ ತಿಳಿಸುವ ಮೂಲಕ ನೈಜ ಸ್ವಾತಂತ್ರ್ಯ ಹೋರಾಟದ ಮಾಹಿತಿ.
- ಸಂಸ್ಕಾರ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಪ್ರಾರ್ಥನಾ ಕ್ರಮ, ಬೋಧನಾ ಪದ್ಧತಿ, ಕಾರ್ಯಕ್ರಮ ನಿರ್ವಹಣೆ ಕುರಿತು ಅಭ್ಯಾಸ.



## ಉಲ್ಲೇಖನೀಯ ಹೇಳಿಕೆಗಳು:

"ನಮ್ಮಷ್ಟಕ್ಕೆ ನಾವು ತರಗತಿ ಕೋಣೆಗಳಲ್ಲಿ ನಾವು ಮಾಡುತ್ತಿರುವುದೇ ಸರಿ ಎಂದು ಪಾಠ ಮಾಡುತ್ತಿದ್ದ ನಮಗೆ, ಕಾರ್ಯಾಗಾರಗಳಲ್ಲಿ ದೊರೆತ ತರಬೇತಿಯಿಂದ ನಮ್ಮನ್ನು ನಾವು ಅವಲೋಕನ ಮಾಡಿಕೊಳ್ಳುವಂತಾಗಿದೆ"

**ಶ್ರೀಮತಿ ರಮ್ಯಾ**
ಯಾಜ್ಞವಲ್ಕ್ಯ ಪಬ್ಲಿಕ್ ಶಾಲೆ ಸಿ.ಬಿ.ಎಸ್.ಇ,
ಹಿರಿಯೂರು








"ಇಂದಿನ ಯಾಂತ್ರಿಕ ಶಿಕ್ಷಣ ಪದ್ಧತಿಯ ಸುಳಿಯಿಂದ ಹೊರಬರಬೇಕಾದರೆ ಪಂಚಮುಖಿ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಬೇಕು. ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾದ ಚಟುವಟಿಕೆಗಳನ್ನು ಜೋಡಿಸಿಕೊಳ್ಳುವ ಕುರಿತು ಕಾರ್ಯಾಗಾರ ಉತ್ತಮ ಮಾರ್ಗದರ್ಶನ ನೀಡಿದೆ"

**ಶ್ರೀ ವೀರಪ್ಪ ದೇಸಾಯಿ**
ಬಸವರೆಡ್ಡಿ ಶಿಕ್ಷಣ ಸಂಸ್ಥೆ, ಧಾರವಾಡ

"ಈ ರೀತಿಯ ಕಾರ್ಯಾಗಾರಗಳು ಹೆಚ್ಚೆಚ್ಚು ಆಗಬೇಕು. ಎಲ್ಲ ಶಾಲೆಗಳಲ್ಲೂ ನಡೆಯುವಂತಾಗಬೇಕು. ಅದಕ್ಕೆ ಅಗತ್ಯ ಸಹಕಾರ ನಮ್ಮಿಂದ ಸದಾ ಇರುತ್ತದೆ".

**ಶ್ರೀ ಅರವಿಂದ ದೇಶಪಾಂಡೆ**
ಉತ್ತರ ಪ್ರಾಂತ ಸಹ ಸಂಘಚಾಲಕರು, ರಾಷ್ಟ್ರೀಯ ಸ್ವಯಂಸೇವಕ ಸಂಘ

## ಮುಂದಿನ ಕಾರ್ಯವಿಸ್ತಾರ:

- 10 ಜನ ತರಬೇತುದಾರರ ತಯಾರಿ
- 20 ಜಿಲ್ಲೆಗಳಲ್ಲಿ ತರಬೇತಿ
- 100 ತರಬೇತಿ ಕಾರ್ಯಕ್ರಮಗಳು
- 25 ಶಾಲೆಗಳಲ್ಲಿ ಪರಿಣಾಮದ ವಿಶ್ಲೇಷಣೆ
- 125 ಜನ ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳ ಜೋಡಣೆ

# ಗುಣಮಟ್ಟ ಮತ್ತು ವ್ಯವಸ್ಥೆ ಪ್ರಕಲ್ಪ




ರಾಷ್ಟ್ರೋತ್ಥಾನ ಸಂಸ್ಥೆಯ ಎಲ್ಲ ಚಟುವಟಿಕೆಗಳು ವ್ಯವಸ್ಥಿತವಾಗಿ ನಡೆಯುತ್ತ ಸಮಾಜ ಪರಿವರ್ತನೆಯಲ್ಲಿ ಬಹುಮುಖ್ಯ ಪಾತ್ರ ವಹಿಸಿದೆ. ಸಂಸ್ಥೆಯ ಮುಂದಿನ ಯೋಜನೆಗಳು, ಹೊಸ ಚಟುವಟಿಕೆಗಳು, ಸಮಾಜದ ಆಶಯಗಳು ಹಾಗು ಸಂಸ್ಥೆಯ ವಿಸ್ತಾರದ ವೇಗದ ಪರಿಣಾಮವಾಗಿ ಬರುವ ಸವಾಲು ಮತ್ತು ಅಪಾಯಗಳನ್ನು ಯಶಸ್ವಿಯಾಗಿ ಎದರಿಸುವ ನಿಟ್ಟಿನಲ್ಲಿ ಸಂಸ್ಥೆಯ ಎಲ್ಲ ಕಾರ್ಯವಿಧಾನಗಳ ನಿರಂತರ ಸುಧಾರಣೆ ಆಗಬೇಕು ಹಾಗು ಸಂಸ್ಥೆಯ ಕಾರ್ಯವೈಖರಿ ವೃತ್ತಿಪರತೆಯತ್ತ ಸಾಗಬೇಕಾದ ಅವಶ್ಯಕತೆಯನ್ನು ಗಮನಿಸಿ 2021 ಮಾರ್ಚ್ ತಿಂಗಳಿನಲ್ಲಿ, ಗುಣಮಟ್ಟ ಮತ್ತು ವ್ಯವಸ್ಥೆ ಪ್ರಕಲ್ಪವನ್ನು ಅಧಿಕೃತವಾಗಿ ಪ್ರಾರಂಭಿಸಲಾಗಿದೆ.

ಗುಣಮಟ್ಟ ಮತ್ತು ವ್ಯವಸ್ಥೆ ಪ್ರಕಲ್ಪದ ಮೂಲ ಉದ್ದೇಶ ಸಂಸ್ಥೆಯ ಕಾರ್ಯಕರ್ತರಿಗೆ ಸಂಸ್ಥೆ ಹಾಗು ಪ್ರಕಲ್ಪ ವ್ಯವಸ್ಥೆಯ ನಿರಂತರ ಸುಧಾರಣೆ ವಿಷಯದಲ್ಲಿ ಬೆಂಬಲ ಹಾಗು ಮಾರ್ಗದರ್ಶನ ಕೊಡುವುದು.

**ಗುಣಮಟ್ಟ ಮತ್ತು ವ್ಯವಸ್ಥೆ ಪ್ರಕಲ್ಪದ ಕಾರ್ಯವ್ಯಾಪ್ತಿ:** ರಾಷ್ಟ್ರೋತ್ಥಾನ ಪರಿಷತ್ ಹಾಗೂ ಅದರ ಎಲ್ಲ ಅಂಗ ಸಂಸ್ಥೆಗಳು, ಪ್ರಕಲ್ಪಗಳು ಮತ್ತು ಶಾಲೆಗಳು.

**ರಾಷ್ಟ್ರೋತ್ಥಾನ ಪರಿಷತ್‌ನ ಲಕ್ಷ್ಯ:** ಸ್ವಸ್ಥ–ಸುಸ್ಥಿರ ಸಮಾಜನಿರ್ಮಾಣ, ಇದಕ್ಕೆ ಪೂರಕವಾಗಿ ಸಂಸ್ಥೆ ಹಲವಾರು ಧ್ಯೇಯ ಹಾಗು ಗುರಿಗಳನ್ನು ಗುರಿತಿಸಿಕೊಂಡಿದೆ. ಸಂಸ್ಥೆಯ ಗುರಿಗಳನ್ನು ಸಾಧಿಸಲು ಅನುವು ಮಾಡಿಕೊಡುವ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಬೇಕಾಗುವ ಸಮರ್ಥ, ಪಾರದರ್ಶಕ Standard Operating Procedures (ಕಾರ್ಯ ವಿಧಾನ ದಾಖಲಾತಿ) ಸಿದ್ಧಪಡಿಸುವುದು, ಕಾರ್ಯಚಟುವಟಿಕೆಗಳ ಗುಣಮಟ್ಟದ ಅರಿವು ಹಾಗೂ ಅಭಿವೃದ್ಧಿ,



ಫಲಾನುಭವಿಗಳ ಸಂತೃಪ್ತಿ, ಸೇವಾ ಚಟುವಟಿಕೆಗಳಿಂದ ಸಮಾಜದಲ್ಲಿ ಆಗಿರುವ ಪರಿವರ್ತನೆಯ ವಿಶ್ಲೇಷಣೆ ಮತ್ತು ಸಂಸ್ಥೆಯ ವ್ಯವಸ್ಥೆಯ ಪರಿಪಕ್ವತೆ (Systems Maturity) ಈ ವಿಷಯಗಳಿಗೆ ಸಂಬಂಧಪಟ್ಟ ಯೋಜನೆಗಳನ್ನು ಗುಣಮಟ್ಟ ಮತ್ತು ವ್ಯವಸ್ಥೆ ಪ್ರಕಲ್ಪ ಹಮ್ಮಿಕೊಂಡಿದೆ.

## ಗುಣಮಟ್ಟ ಮತ್ತು ವ್ಯವಸ್ಥೆ ಪ್ರಕಲ್ಪದ ಪ್ರಮುಖ ಚಟುವಟಿಕೆಗಳು:

- Organization Structure, ಪಾತ್ರ ಹಾಗು ಜವಾಬ್ದಾರಿಗಳ ದಾಖಲಾತಿ
- ಕಾರ್ಯವಿಧಾನ ಚಟುವಟಿಕೆಗಳ ದಾಖಲೆ ಸಿದ್ಧಪಡಿಸುವುದು (Standard Operating Procedures)
- ಎಲ್ಲ ಪ್ರಕಲ್ಪ ಚಟುವಟಿಕೆಗಳ ಆಂತರಿಕ ತಪಾಸಣೆ ಹಾಗೂ ಕಾರ್ಯವಿಧಾನಗಳ ಮೌಲ್ಯಮಾಪನ (Internal Process Audits and Assessments)
- ದಾಖಲೆಗಳ ನಿಯಂತ್ರಣ ಹಾಗು ಭಂಡಾರ ರಚನೆ (Document Repository)
- ಕಾರ್ಯಕರ್ತರಲ್ಲಿ ಗುಣಮಟ್ಟದ ಅರಿವು ಹೆಚ್ಚಿಸುವುದು
- ಗುಣಮಟ್ಟಕ್ಕೆ ಸಂಬಂಧಿಸಿದ ಮಾಪನಗಳನ್ನು ಗುರುತಿಸುವುದು
- ವ್ಯವಸ್ಥೆ ಅನುಷ್ಠಾನ ಹಾಗು ಅಭಿವೃದ್ಧಿಗೆ ಸಂಬಂಧಿಸಿದ ತರಬೇತಿ







- ರಾಷ್ಟ್ರೋತ್ಥಾನ ವಿದ್ಯಾಸಂಸ್ಥೆಗಳ ಕಾರ್ಯಾಭಿವೃದ್ಧಿ
- ಫಲಾನುಭವಿಗಳ ಸಮೀಕ್ಷೆ
- ಪರಿವರ್ತನೆಯ ವಿಶ್ಲೇಷಣೆ
- Process Automation

## ಪ್ರಸ್ತುತ ವರ್ಷ 2022–2023ಕ್ಕೆ ಮಾಡಿದ ಯೋಜನೆ ಹಾಗು ಕಾರ್ಯಸಾಫಲ್ಯ:

| ಚಟುವಟಿಕೆಗಳು | ಗುರಿ | ಕಾರ್ಯ ಸಾಫಲ್ಯ |
|---|---|---|
| ಸಂಸ್ಥೆಯ ಮಟ್ಟದ ಹಾಗೂ ಗುರುತಿಸಿರುವ ಪ್ರಕಲ್ಪಗಳ SOPಗಳನ್ನು ಸಿದ್ಧಪಡಿಸುವುದು | 11 ಪ್ರಕಲ್ಪಗಳು | 13 ಪ್ರಕಲ್ಪಗಳು |
| ಉನ್ನತಿ – ಶಾಲೆಗಳ ಪ್ರಕ್ರಿಯೆ ಸುಧಾರಣೆ ಯೋಜನೆ (ಕಾರ್ಯ ವಿಧಾನಗಳ ಮೌಲ್ಯ ಮಾಪನ) | 9 ಆಂತರಿಕ | 9 ಆಂತರಿಕ<br>5 ಬಾಹ್ಯ |
| ಫಲಾನುಭವಿಗಳ ಸಂತೃಪ್ತಿ ಸಮೀಕ್ಷೆ | 3 ಪ್ರಕಲ್ಪಗಳು | 5 ಪ್ರಕಲ್ಪಗಳು |
| ದಾಖಲೆಗಳ ನಿಯಂತ್ರಣ ಹಾಗೂ ಭಂಡಾರ ರಚನೆ | 100 % | 100 % |
| ಪ್ರಕಲ್ಪ ವ್ಯವಸ್ಥೆ ಆಡಿಟ್ ಮಾಡುವುದು (Process Audits) | 10 Internal Audits | 10 Internal Audits<br>12 SESQ Assessments |
| ಗುಣಮಟ್ಟಕ್ಕೆ ಸಂಬಂಧಿಸಿದ ಮಾಪನಗಳನ್ನು ಗುರುತಿಸುವುದು | 6 | 3 |
| ಪ್ರೋಸೆಸ್ ಆಟೋಮೇಷನ್ (Process Automation) | 3 ಪ್ರಕ್ರಿಯೆಗಳು | 3 ಪ್ರಕ್ರಿಯೆಗಳು |

## ಪ್ರಸ್ತುತ ವರ್ಷ 2022–2023ರಲ್ಲಿ ಆಯೋಜಿಸಲಾದ ಪ್ರಮುಖ ತರಬೇತಿ ಕಾರ್ಯಾಗಾರಗಳು:

- Internal Auditors Training: ವಿವಿಧ ಪ್ರಕಲ್ಪಗಳಿಂದ ಆಯ್ದ 15 ಕಾರ್ಯಕರ್ತರಿಗೆ ಇಂಟರ್ನಲ್ ಆಡಿಟರ್ ತರಬೇತಿ ನೀಡಲಾಗಿದೆ.



- School Quality Assessors Training (SMF- SESQ): ವಿವಿಧ ರಾಷ್ಟ್ರೋತ್ಥಾನ ವಿದ್ಯಾಸಂಸ್ಥೆಗಳಿಂದ ಆಯ್ದ 25 ಕಾರ್ಯಕರ್ತರಿಗೆ ವಿದ್ಯಾಭಾರತಿ ಮಾನಕ ಪರಿಷದ್ ವತಿಯಿಂದ 8 ದಿನಗಳ ಕಾರ್ಯಾಗಾರ ಬೆಂಗಳೂರಿನಲ್ಲಿ ಆಯೋಜಿಸಲಾಗಿತ್ತು.
- Employee Performance Management Training: ವಿವಿಧ ರಾಷ್ಟ್ರೋತ್ಥಾನ ಪ್ರಕಲ್ಪ ಗಳಲ್ಲಿ performance management ಕಾರ್ಯಾಗಾರ ಆಯೋಜಿಸಲಾಗಿತ್ತು, 150 ಹಿರಿಯ ಕಾರ್ಯಕರ್ತರಿಗೆ ಸಿಬ್ಬಂದಿ ಮೌಲ್ಯಮಾಪನದ ಮಹತ್ವ ಮತ್ತು ಕಾರ್ಯವಿಧಾನದ ಬಗ್ಗೆ ತರಬೇತಿ ನೀಡಲಾಯಿತು.
- ಪರಿವರ್ತನಾ ಕೇಂದ್ರಿತ ಯೋಜನೆ (Result Based Management): ರಾಷ್ಟ್ರೋತ್ಥಾನ ಪರಿಷತ್‌ನ ವಿವಿಧ ಸೇವಾಧಾರಿತ ಪ್ರಕಲ್ಪಗಳ ಕಾರ್ಯಕರ್ತರಿಗೆ ಪರಿಣಾಮ ಮತ್ತು ಪರಿವರ್ತನೆ ವಿಶ್ಲೇಷಣೆ ಮಹತ್ವದ ಬಗ್ಗೆ ಕಾರ್ಯಾಗಾರಗಳನ್ನು ಆಯೋಜಿಸಲಾಗಿತ್ತು.

## ಪ್ರಸ್ತುತ ವರ್ಷ 2022–2023ರಲ್ಲಿ ಸಾಧಿಸಿದ ಕೆಲವು ಉಲ್ಲೇಖನೀಯ ಸಂಗತಿಗಳು:

- **ಮುಗಿಲು (Mugilu) - ರಾಷ್ಟ್ರೋತ್ಥಾನ ಪರಿಷತ್ Intranet Website ಚಾಲನೆ:** ಎಲ್ಲ ಪ್ರಕಲ್ಪಗಳ SOPs, Knowledge Base (Training Materials, ಉಪಯುಕ್ತ Reference ಮೆಟೀರಿಯಲ್ಸ್) ಮತ್ತು ಇತರೇ ಆಂತರಿಕ ವಿಷಯಗಳ ಭಂಡಾರ
- **Regular Internal Process Audits:** ತರಬೇತಿ ಪಡೆದ ಕಾರ್ಯಕರ್ತರಿಂದ ಬೆಂಗಳೂರು ವ್ಯಾಪ್ತಿಯ ಸೇವಾ ಪ್ರಕಲ್ಪ ಹಾಗು ಶಾಲೆಯ ವ್ಯವಸ್ಥೆ ಮತ್ತು ಕಾರ್ಯವಿಧಾನಗಳ ನಿಯಮಿತ ವೇಳಾಪಟ್ಟಿಯಂತೆ Internal Audits ಆಯೋಜನೆ



- **ಫಲಾನುಭವಿಗಳ ಸಮೀಕ್ಷೆ:** ಆಯ್ದ ಸೇವಾವಸತಿ ಹಾಗು ಯೋಗ ಕೇಂದ್ರಗಳ್ಳಲ್ಲಿ Feedback Survey ಮಾಡಲಾಗಿದೆ
- **ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಪೋಷಕರ ಸರ್ವೆ:** ಬೆಂಗಳೂರು ವ್ಯಾಪ್ತಿಯ ರಾಷ್ಟ್ರೋತ್ಥಾನ CBSE ಶಾಲೆಗಳ Parent Survey ಗೂಗಲ್ ಫಾರ್ಮ್ಸ್ (Google Forms) ಸಹಾಯದಿಂದ ಸ್ವತಂತ್ರವಾಗಿ ಮಾಡಲಾಯಿತು.



- SESQ (System for Enrichment of School Quality) Assessments: ವಿದ್ಯಾಭಾರತಿ ಮಾನಕ ಪರಿಷತ್ SESQ ಸ್ಟ್ಯಾಂಡರ್ಡ್ಸ್‌ಗೆ ಅನುಗುಣವಾಗಿ ರಾಷ್ಟ್ರೋತ್ಥಾನ ವಿದ್ಯಾ ಸಂಸ್ಥೆಯ ಕಾರ್ಯಕರ್ತರಿಗೆ ತರಬೇತಿ ಹಾಗು ಆಯ್ದ ಶಾಲೆಗಳ ವ್ಯವಸ್ಥೆಯ ಸ್ವಯಂ ಮೌಲ್ಯಮಾಪನ ಮತ್ತು ಬಾಹ್ಯ ಮೌಲ್ಯಮಾಪನ.
- School Process Assessment Report (SESQ): 5 ರಾಷ್ಟ್ರೋತ್ಥಾನ ವಿದ್ಯಾಸಂಸ್ಥೆಗಳ ಬಾಹ್ಯ ಮೌಲ್ಯಮಾಪನ ಆಗಿದೆ. 4 ರಾಷ್ಟ್ರೋತ್ಥಾನ ವಿದ್ಯಾಸಂಸ್ಥೆಗೆ Process Assessment Grade A ಹಾಗು 1 ರಾಷ್ಟ್ರೋತ್ಥಾನ ವಿದ್ಯಾಸಂಸ್ಥೆಗೆ Grade B+ ನೀಡಲಾಗಿದೆ.



सर्वे सन्तु निरामयाः
Jayadev Memorial
Rashtrotthana Hospital
&
Research Centre

# ಜಯದೇವ ಸ್ಮಾರಕ ರಾಷ್ಟ್ರೋತ್ಥಾನ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ

## ರಾಜರಾಜೇಶ್ವರೀ ನಗರ, ಬೆಂಗಳೂರು

scan/ click for video



ಡಿಸೆಂಬರ್, 2022: ರಾಷ್ಟ್ರೋತ್ಥಾನ ಆಸ್ಪತ್ರೆಯ ಲೋಕಾರ್ಪಣೆ



2022ರ ಡಿಸೆಂಬರ್ 5ರಂದು ಆಸ್ಪತ್ರೆಯ ಆವರಣದಲ್ಲಿ ನಡೆದ ಭವ್ಯ ಸಮಾರಂಭದಲ್ಲಿ ಜಯದೇವ ಸ್ಮಾರಕ ರಾಷ್ಟ್ರೋತ್ಥಾನ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರವು ಉದ್ಘಾಟನೆಗೊಂಡಿತು.

ಉದ್ಘಾಟನಾ ಸಮಾರಂಭದಲ್ಲಿ ಮೈಸೂರಿನ ಸುತ್ತೂರು ಮಠದ ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಇನ್ಫೋಸಿಸ್ ಫೌಂಡೇಷನ್ ಸ್ಥಾಪಕರು ಹಾಗೂ ಮೂರ್ತಿ ಫೌಂಡೇಷನ್ ಅಧ್ಯಕ್ಷರು, ಶ್ರೀಮತಿ ಸುಧಾಮೂರ್ತಿ, ನಾರಾಯಣ ಹೆಲ್ತ್‌ನ ಸ್ಥಾಪಕರು ಹಾಗೂ ಅಧ್ಯಕ್ಷರಾದ ಡಾ. ದೇವಿ ಪ್ರಸಾದ್ ಶೆಟ್ಟಿ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹರಾದ ಶ್ರೀ ದತ್ತಾತ್ರೇಯ ಹೊಸಬಾಳೆ, ಮೊದಲಾದ ಗಣ್ಯರು ಉಪಸ್ಥಿತರಿದ್ದರು.

ಸರ್ವೇ ಸಂತು ನಿರಾಮಯಾಃ ಎಂಬ ಧ್ಯೇಯವಾಕ್ಯದೊಡನೆ ಪ್ರಾರಂಭವಾಗಿರುವ 162 ಹಾಸಿಗೆಗಳ ರಾಷ್ಟ್ರೋತ್ಥಾನ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯು ಅತ್ಯಾಧುನಿಕ ಮೂಲಸೌಕರ್ಯಗಳೊಂದಿಗೆ ಮಾನವೀಯ ಕಳಕಳಿಯನ್ನಿಟ್ಟುಕೊಂಡು ಕೈಗೆಟುಕುವ ದರದಲ್ಲಿ ಗುಣಮಟ್ಟದ ಸಮಗ್ರ ಚಿಕಿತ್ಸಾ ಸೇವೆಯನ್ನು ಒದಗಿಸಲು ಪ್ರಾರಂಭಿಸಿದೆ.




## ಆಸ್ಪತ್ರೆಯಲ್ಲಿರುವ ವೈದ್ಯಕೀಯ ಸೌಲಭ್ಯಗಳು:

- ಜನರಲ್ ಮೆಡಿಸಿನ್
- ಜನರಲ್ ಸರ್ಜರಿ
- ಗ್ಯಾಸ್ಟ್ರೋ ವಿಜ್ಞಾನಗಳು
- ಪ್ರಸೂತಿ ಮತ್ತು ಸ್ತ್ರೀರೋಗಶಾಸ್ತ್ರ
- ಪೀಡಿಯಾಟ್ರಿಕ್ಸ್ ಮತ್ತು ನಿಯೋನಾಟಾಲಜಿ
- ಮನೋವೈದ್ಯಶಾಸ್ತ್ರ
- ಆರ್ಥೋಪೆಡಿಕ್
- ನರ ವಿಜ್ಞಾನಗಳು
- ಕಾರ್ಡಿಯಾಕ್ ವಿಜ್ಞಾನಗಳು
- ಶ್ವಾಸಕೋಶಶಾಸ್ತ್ರ
- ಎಂಡೋಕ್ರಿನಾಲಜಿ
- ಆಂಕಾಲಜಿ
- ನೇತ್ರವಿಜ್ಞಾನ
- ಡೆಂಟಲ್ ವಿಜ್ಞಾನಗಳು
- ಆಯುರ್ವೇದ
- ಹೋಮಿಯೋಪತಿ
- ಯೋಗ ಮತ್ತು ಪ್ರಕೃತಿ ಚಿಕಿತ್ಸೆ















ಕೇಂದ್ರ ಮಂತ್ರಿ ಶ್ರೀ ಧರ್ಮೇಂದ್ರ ಪ್ರಧಾನ ಅವರಿಂದ ಡಯಾಲಿಸಿಸ್ ಕೇಂದ್ರದ ಲೋಕಾರ್ಪಣೆ

## ಆಸ್ಪತ್ರೆಯು ಕೊಡಮಾಡುತ್ತಿರುವ ವ್ಯವಸ್ಥೆಗಳು:

- ದಿನದ 24 ಗಂಟೆ ಹಾಗೂ ವಾರದ 7 ದಿನವೂ ತುರ್ತು ಮತ್ತು ಅಪಘಾತ ಸೇವೆ
- ಡಯಾಲಿಸಿಸ್
- ಓಟಿ ಮತ್ತು ಐಸಿಯು
- ಇಮೇಜ್ ಡಯಾಗ್ನೋಸ್ಟಿಕ್ ಸೇವೆ
- ಫಿಸಿಯೋಥೆರಪಿ




## ಆಸ್ಪತ್ರೆಯೊಂದಿಗೆ ಜೋಡಿಸಿಕೊಂಡಿರುವ ವೃತ್ತಿಪರ ವೈದ್ಯರುಗಳು:

- **ಡಾ. ಬಿ ಆರ್ ರಾಮಕೃಷ್ಣ,** ಮಾನ್ಯ ಕುಲಪತಿಗಳು, ಎಸ್–ವ್ಯಾಸ
- **ಡಾ. ನರೇಶ್ ಭಟ್,** ಗ್ಯಾಸ್ಟ್ರೋಎಂಟರಾಲಜಿಸ್ಟ್
- **ಡಾ. ಲತಾ ವೆಂಕಟರಾಮನ್,** ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞೆ
- **ಡಾ. ಸ್ವರ್ಣ ರೇಖಾ ಭಟ್,** ನವಜಾತ ಶಾಸ್ತ್ರಜ್ಞೆ
- **ಡಾ. ಲಕ್ಷ್ಮಣ್,** ಜನರಲ್ ಸರ್ಜನ್
- **ಡಾ. ಶೇಖರ್ ಪಾಟೀಲ್,** ವೈದ್ಯಕೀಯ ಆಂಕಾಲಾಜಿಸ್ಟ್
- **ಡಾ. ಎ ನಾಗರಾಜ ರಾವ್,** ಮೂತ್ರಶಾಸ್ತ್ರಜ್ಞ
- **ಡಾ. ಸುಬ್ರಮಣ್ಯ ರಾವ್,** ಇ.ಎನ್.ಟಿ. ತಜ್ಞ






ಕೇಂದ್ರ ಆರೋಗ್ಯ ಮಂತ್ರಿ ಡಾ. ಮನಸುಖ್ ಮಾಂಡವೀಯ ಅವರಿಂದ ಸ್ತ್ರೀರೋಗ ಹಾಗೂ ಪ್ರಸೂತಿ ವಿಭಾಗದ ಲೋಕಾರ್ಪಣೆ

## ಆಸ್ಪತ್ರೆಯ ನಿರ್ಮಾಣದ ವಿವಿಧ ಹಂತಗಳು:

- ಮೇ, 2021 – ಪರಿಕಲ್ಪನೆ
- ಜೂನ್, 2021 – ಭೂಸ್ವಾಧೀನ
- ನವೆಂಬರ್, 2021 – ಕಟ್ಟಡ ನಿರ್ಮಾಣ ಪ್ರಾರಂಭ
- ಅಕ್ಟೋಬರ್, 2022 – ಕಟ್ಟಡ ನಿರ್ಮಾಣ ಪೂರ್ಣ
- 5 ಡಿಸೆಂಬರ್ 2022 – ಉದ್ಘಾಟನೆ, 50 ಹಾಸಿಗೆಗಳೊಂದಿಗೆ
- ಆಗಸ್ಟ್, 2023 – 2ನೇ ಹಂತ, 110 ಹಾಸಿಗೆಗಳು
- ಆಗಸ್ಟ್, 2024 – 3ನೇ ಹಂತ, 162 ಹಾಸಿಗೆಗಳು

## ಆಸ್ಪತ್ರೆಗೆ ಭೇಟಿಕೊಟ್ಟ ರೋಗಿಗಳು:

- ಹೊರರೋಗಿಗಳು – 6152
- ಒಳರೋಗಿಗಳು – 389
- ಡಿಸ್ಚಾರ್ಜ್ ಆದ ಒಳರೋಗಿಗಳು – 378

## ಆಸ್ಪತ್ರೆ ಉದ್ಘಾಟನೆಯಾದ ಅನಂತರದಲ್ಲಿನ 5–6 ತಿಂಗಳ ಸಾಧನೆಗಳು:

- ಉದ್ಘಾಟನೆಗೊಂಡ ಮೊದಲ ತಿಂಗಳಿನಲ್ಲೇ 2500+ ರೋಗಿಗಳಿಗೆ ವೈದ್ಯಕೀಯ ಸೇವೆ ನೀಡಲಾಯಿತು.
- ಒಳರೋಗಿಗಳ ವಿಭಾಗವನ್ನು ಜನವರಿ, 2023ರಿಂದ ಪ್ರಾರಂಭಿಸಲಾಯಿತು. ಆರಂಭದ ಒಂದು ತಿಂಗಳಿನಲ್ಲಿಯೇ 100+ ಒಳರೋಗಿಗಳ ದಾಖಲಾತಿ ಮಾಡಿಕೊಳ್ಳಲಾಯಿತು.
- ಇಲ್ಲಿಯವರೆಗೆ ದೊಡ್ಡ ಹಾಗೂ ಚಿಕ್ಕ, ಒಟ್ಟು 31 ಶಸ್ತ್ರಚಿಕಿತ್ಸೆಗಳನ್ನು ಮಾಡಲಾಗಿದೆ.
- ಸಾಮಾಜಿಕ ಜವಾಬ್ದಾರಿಯ ಭಾಗವಾಗಿ ಆಸ್ಪತ್ರೆಯು ಬೇರೆಬೇರೆ ಪ್ರದೇಶಗಳಲ್ಲಿ ಉಚಿತ ಆರೋಗ್ಯ ತಪಾಸಣಾ



ಸಂಚಾರಿ ಕ್ಲಿನಿಕ್ ಲೋಕಾರ್ಪಣೆ

ಶಿಬಿರಗಳನ್ನು ನಿರಂತರವಾಗಿ ನಡೆಸಿಕೊಂಡುಬರುತ್ತಿದೆ. 33 ದಿನಗಳಲ್ಲಿ 27 ಸ್ಥಳಗಳಲ್ಲಿನ ಅನಾಥಾಲಯ, ವೃದ್ಧಾಶ್ರಮ ಹಾಗೂ ಶಾಲೆಗಳ ಸುಮಾರು 5 ಸಾವಿರ ಜನರು ಈ ಸೇವೆಯ ಪ್ರಯೋಜನ ಪಡೆದಿದ್ದಾರೆ.

- ಉದ್ಯೋಗಿಗಳ ಅನುಕೂಲಕ್ಕಾಗಿ ಎಲ್ಲ ಓಪಿಡಿಗಳು ಸಂಜೆಯೂ ಕಾರ್ಯನಿರ್ವಹಿಸಲು ಪ್ರಾರಂಭಿಸಿವೆ. ಜನರಲ್ ಮೆಡಿಸಿನ್, ಡರ್ಮಟಾಲಜಿ, ಪಲ್ಮನಾಲಜಿ, ಆರ್ಥೋಪೆಡಿಕ್, ಕಾರ್ಡಿಯಾಲಜಿ, ಪೀಡಿಯಾಟ್ರಿಕ್ಸ್, ಗೈನಕಾಲಜಿ ಹಾಗೂ ಆಬ್ಸ್ಟೆಟ್ರಿಕ್ಸ್, ಸೈಕಿಯಾಟ್ರಿ ಓಪಿಡಿಗಳು ಕಾರ್ಯನಿರ್ವಹಿಸುತ್ತಿವೆ.

## ಸಮಗ್ರ ಚಿಕಿತ್ಸೆಗೆ (ಇಂಟಿಗ್ರೇಟಿವ್ ಮೆಡಿಸಿನ್) ಮಾರ್ಗಸೂಚಿ:

ಯಾವುದೇ ರೋಗವನ್ನು ಹೊಂದಿರುವ ವ್ಯಕ್ತಿಗೆ/ ರೋಗಿಗೆ ಸಮಗ್ರ ಚಿಕಿತ್ಸಾ ವಿಧಾನದಲ್ಲಿ ಚಿಕಿತ್ಸೆ ನೀಡುವಾಗ ವ್ಯಕ್ತಿಯ/ ರೋಗಿಯ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಒಟ್ಟಾರೆಯಾಗಿ ಅನುಕೂಲವಾಗುವಂತೆ ಚಿಕಿತ್ಸೆಯನ್ನು ನೀಡಲಾಗುತ್ತದೆ. ಆಧುನಿಕ ವೈದ್ಯ ಪದ್ಧತಿ, ಆಯುರ್ವೇದ, ಯೋಗ ಮತ್ತು ಪ್ರಕೃತಿ ಚಿಕಿತ್ಸೆ ಹಾಗೂ ಹೋಮಿಯೋಪತಿ ಈ ರೀತಿಯ ಬೇರೆಬೇರೆ ಚಿಕಿತ್ಸಾ ವಿಧಾನಗಳನ್ನು ಸಂಯೋಜಿಸಿ ರೋಗಗಳಿಗೆ ಚಿಕಿತ್ಸೆ ನೀಡುವುದು ಸಮಗ್ರ ಚಿಕಿತ್ಸಾ ಪದ್ಧತಿಯ ಕ್ರಮವಾಗಿದೆ.




## ಸಂಚಾರಿ ಕ್ಲಿನಿಕ್ ಕ್ಯಾಂಪ್‌ಗಳು:

- ದಿನಕ್ಕೆ – 3
- ವಾರಕ್ಕೆ – 18
- ತಿಂಗಳಿಗೆ – 72
- ವರ್ಷಕ್ಕೆ – 864






## ಜೀವನಶೈಲಿ ಕ್ಲಿನಿಕ್:

ಸರ್ವೇಸಂತು ನಿರಾಮಯಾಃ – ಚಿಕಿತ್ಸೆಗಿಂತ ರೋಗ ತಡೆಗಟ್ಟುವಿಕೆಯ ಸಿದ್ಧಾಂತಕ್ಕೆ ಅನುಗುಣವಾಗಿ, ಕೈಗೆಟುಕುವ ದರದಲ್ಲಿ ಗುಣಮಟ್ಟದ ಆರೈಕೆಯನ್ನು ನೀಡುವುದು ಮಾತ್ರವಲ್ಲದೇ, ಆಸ್ಪತ್ರೆಗೆ ಭೇಟಿ ನೀಡುವ ಎಲ್ಲ ರೋಗಿಗಳು ಮತ್ತು ಅವರ ಕಾಳಜಿ ಮಾಡುವವರಿಗೆ ಉಚಿತ ಜೀವನಶೈಲಿ ಸಮಾಲೋಚನೆ ಒದಗಿಸಿ, ಸ್ವಸ್ಥ–ಸುಸ್ಥಿರ ಸಮಾಜನಿರ್ಮಾಣದ ಕನಸಿನ ಸಾಕಾರಕ್ಕೆ ಪ್ರಯತ್ನಿಸುತ್ತಿದ್ದೇವೆ.

## ಮುಂದಿನ 3 ತಿಂಗಳಿಗೆ ಯೋಜನೆ:

- ಹೆಚ್ಚು ಅಪಾಯವಿರುವ ಪ್ರಕರಣಗಳನ್ನು ನಿಭಾಯಿಸಲು ಸುಸಜ್ಜಿತ ಎನ್.ಐ.ಸಿ.ಯು. ಹಾಗೂ ಪಿ.ಐ.ಸಿ.ಯು. ಕಾರ್ಯಾಚರಣೆ
- ಹೆಚ್ಚಿನ ಅಪಾಯದ ಗರ್ಭಧಾರಣೆಯ ಸಂಪೂರ್ಣ ಆರೈಕೆ ಮತ್ತು ಬೆಂಬಲ
- ಸ್ಥಳೀಯ ವೈದ್ಯಕೀಯ ಸಮುದಾಯವನ್ನು ತಲುಪಲು ಸಿ.ಎಂ.ಇ.ಗಳು
- ಒಂದು ತಿಂಗಳೊಳಗೆ ವಿಮಾ ಎಂಪ್ಯಾನಲ್‌ಮೆಂಟ್
- ವಾರಕ್ಕೊಮ್ಮೆ ಅನೋ–ರೆಕ್ಟಲ್, ಹರ್ನಿಯಾ ಮತ್ತು ಲಿವರ್ ಕ್ಲಿನಿಕ್‌ಗಳನ್ನು ನಡೆಸುವುದು.
- ಸ್ವರ್ಣ ಬಿಂದು ಪ್ರಾಶನ ಮತ್ತು ಸುಸಜ್ಜಿತ ಆಯುರ್ವೇದ ವಿಭಾಗ.
- ವಯಸ್ಕರಿಗೆ ವ್ಯಾಕ್ಸಿನೇಷನ್ ಕಾರ್ಯಕ್ರಮಗಳು.
- ಎನ್.ಎ.ಬಿ.ಎಚ್. ಪ್ರವೇಶ ಮಟ್ಟದ ಮಾನ್ಯತೆ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ ಮತ್ತು ಜುಲೈ/ ಆಗಸ್ಟ್ ವೇಳೆಗೆ ಮಾನ್ಯತೆಯನ್ನು ಹೊಂದುವ ನಿರೀಕ್ಷೆಯಿದೆ.
- ಪ್ರಮಾಣಿತ/ ಸಾರ್ವತ್ರಿಕ ಪ್ರೋಟೋಕಾಲ್‌ಗಳಿಗೆ ಅನುಗುಣವಾಗಿ ಎಲ್ಲ ಅಗತ್ಯ ಪ್ರೋಟೋಕಾಲ್‌ಗಳು/ ಎಸ್‌ಒಪಿಗಳನ್ನು ಅಳವಡಿಸಲಾಗುತ್ತಿದೆ.
- ರೋಗಿಗಳ ದಾಖಲೆಗಳು, ಅಪಾಯಿಂಟ್‌ಮೆಂಟ್‌ಗಳು, ಫೀಡ್‌ಬ್ಯಾಕ್, ಬಿಲ್ಲಿಂಗ್‌ಗಳನ್ನು ಕಾಗದರಹಿತವಾಗಿಸುವ ಪರಿಸರ ಸ್ನೇಹಿ ಉಪಕ್ರಮವಾಗಿ ಎಚ್.ಎಂ.ಐ.ಎಸ್. ಮೂಲಕ ಡಿಜಿಟಲೈಸ್ ಮಾಡಲಾಗುತ್ತಿದೆ.

scan/ click for video

# ತಪಸ್

reach the unreached



ತಪಸ್ ಮಕ್ಕಳ ಸಂಕಲ್ಪ ಕಾರ್ಯಕ್ರಮ

ತಪಸ್ ರಾಷ್ಟ್ರೋತ್ಥಾನದ ಮಹತ್ವಾಕಾಂಕ್ಷಿ ಯೋಜನೆಯಾಗಿದ್ದು, 2012–13ರಲ್ಲಿ ಪ್ರಾರಂಭವಾಯಿತು.

ತಪಸ್ ಯೋಜನೆಯಲ್ಲಿ, ಪ್ರತಿ ವರ್ಷ, 10ನೇ ತರಗತಿಯಲ್ಲಿ ಉತ್ತೀರ್ಣರಾದ, ಆರ್ಥಿಕ ಅನುಕೂಲತೆ ಇಲ್ಲದ ಪ್ರತಿಭಾವಂತರಾದ 40 ವಿದ್ಯಾರ್ಥಿಗಳನ್ನು ಎರಡು ಹಂತದ ಪ್ರವೇಶ ಪರೀಕ್ಷೆ, ಮನೆ ಭೇಟಿ ಹಾಗೂ ವಸತಿ ಶಿಬಿರಗಳ ಮೂಲಕ ಆಯ್ಕೆ ಮಾಡಿಕೊಂಡು, ವಸತಿಯ ಜೊತೆಯಲ್ಲಿ 2 ವರ್ಷಗಳ ಪಿ.ಯು. ಶಿಕ್ಷಣ ಹಾಗೂ ಐಐಟಿ – ಜೆಇಇ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಬೇಸ್‌ನವರ ಸಹಕಾರದೊಂದಿಗೆ ಉಚಿತ ತರಬೇತಿಯನ್ನು ಕೊಡಮಾಡಲಾಗುತ್ತದೆ.




## ಉದ್ದೇಶ:

- ಗ್ರಾಮೀಣ ಪ್ರದೇಶದ ಪ್ರತಿಭಾವಂತ ಬಡ ಮಕ್ಕಳಿಗೆ ಐಐಟಿ–ಎನ್‌ಐಟಿ ಗಳಿಗೆ ಪ್ರವೇಶ ಪಡೆಯಲು ಅವಕಾಶ ಕಲ್ಪಿಸುವುದು.




## ಕ್ರಮಿಸಿರುವ ಮೈಲುಗಲ್ಲುಗಳು:

- ಇದುವರೆಗೆ 9 ತಂಡಗಳಲ್ಲಿ 333 ವಿದ್ಯಾರ್ಥಿಗಳು ಶಿಕ್ಷಣ ಪಡೆದಿದ್ದಾರೆ.
- 32 ವಿದ್ಯಾರ್ಥಿಗಳು ದೇಶದ 10 ಐಐಟಿಗಳಲ್ಲಿ ಪ್ರವೇಶ ಪಡೆದಿದ್ದು, 81 ವಿದ್ಯಾರ್ಥಿಗಳು ಎನ್‌ಐಟಿಗಳಲ್ಲಿ ಪ್ರವೇಶ ಪಡೆದಿರುತ್ತಾರೆ.
- ಬಾಂಬೆ ಐಐಟಿಯ ಸಮೀಕ್ಷಾ ತಂಡ ತಪಸ್ ಪ್ರಕಲ್ಪವನ್ನು ಸಂಪೂರ್ಣವಾಗಿ ಅವಲೋಕಿಸಿ, ತಪಸ್‌ನ ಕಾರ್ಯದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದೆ.



ತಪಸ್ ಯೋಜನೆ ಹಳೆಯ ವಿದ್ಯಾರ್ಥಿಗಳು

## ಪ್ರಸ್ತುತ ವರ್ಷ 2022–23ಕ್ಕೆ ಮಾಡಿಕೊಂಡಿದ್ದ ಯೋಜನೆ:

- ಶೇ.50ರಷ್ಟು ಮಕ್ಕಳು ಐಐಟಿ/ ಎನ್ಐಟಿಗಳಿಗೆ ಪ್ರವೇಶ ಪಡೆಯುವಂತಾಗಬೇಕು.

## ಕಾರ್ಯಕ್ರಮಗಳು:

- ಶಿರಸಿಯ ಸೋಂದಾ ಮಠದಲ್ಲಿ 3 ದಿನಗಳ ವ್ಯಕ್ತಿತ್ವ ವಿಕಸನ ಶಿಬಿರ ಆಯೋಜನೆ
- ಮನಃಶಾಸ್ತ್ರಜ್ಞರಾದ ಡಾ॥ ಮನ್ವಿತಾ ಅವರಿಂದ ಮನೋವಿಕಾಸಕ್ಕೆ ಬೇಕಾದ ಮಾರ್ಗದರ್ಶನ.
- ಖ್ಯಾತ ಶಿಕ್ಷಣ ತಜ್ಞರಾದ ಡಾ॥ ಗುರುರಾಜ ಕರ್ಜಗಿಯವರಿಂದ ಪ್ರೇರಣೆ.

























## ವರ್ಷದ ಸಾಧನೆ:

- 2021–22ರ ಬ್ಯಾಚಿನ 6 ಮಕ್ಕಳು ಐಐಟಿ ಹಾಗೂ 16 ವಿದ್ಯಾರ್ಥಿಗಳು ಎನ್ಐಟಿಗೆ ಪ್ರವೇಶ ಪಡೆದಿದ್ದಾರೆ.



## ಉಲ್ಲೇಖನೀಯ ಸಂಗತಿಗಳು:

- ತಪಸ್‌ನ 6 ವಿದ್ಯಾರ್ಥಿಗಳು ಐಐಟಿಗಳಲ್ಲಿ ಎಂ.ಟೆಕ್. ಮುಗಿಸುವ ಹಂತದಲ್ಲಿದ್ದಾರೆ.
- ತಪಸ್‌ನ 110ಕ್ಕೂ ಹೆಚ್ಚು ಹಿರಿಯ ವಿದ್ಯಾರ್ಥಿಗಳ ಮನೆ ಭೇಟಿ ಮಾಡಲಾಗಿದೆ.
- 2023–24ನೇ ಸಾಲಿನ ಪ್ರವೇಶಕ್ಕೆ ಸಂಬಂಧಿಸಿದಂತೆ ಡಿಸೆಂಬರ್ 25ರಲ್ಲಿ ನಡೆದ ಪ್ರವೇಶ ಪರೀಕ್ಷೆಯಲ್ಲಿ ಸುಮಾರು 6000 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ.

scan/ click for video

# saadhana ಸಾಧನಾ

reach the unreached




ಸಾಧನಾ ರಾಷ್ಟ್ರೋತ್ಥಾನದ ಮಹತ್ವಾಕಾಂಕ್ಷಿ ಯೋಜನೆಯಾಗಿದ್ದು, 2017–18ರಲ್ಲಿ ಪ್ರಾರಂಭವಾಯಿತು.

ಸಾಧನಾ ಯೋಜನೆಯಲ್ಲಿ, ಪ್ರತಿ ವರ್ಷ, 10ನೇ ತರಗತಿಯಲ್ಲಿ ಉತ್ತೀರ್ಣರಾದ, ಆರ್ಥಿಕ ಅನುಕೂಲತೆ ಇಲ್ಲದ ಪ್ರತಿಭಾವಂತರಾದ 50 ವಿದ್ಯಾರ್ಥಿನಿಯರನ್ನು ಎರಡು ಹಂತದ ಪ್ರವೇಶ ಪರೀಕ್ಷೆ, ಮನೆ ಭೇಟಿ ಹಾಗೂ ವಸತಿ ಶಿಬಿರಗಳ ಮೂಲಕ ಆಯ್ಕೆ ಮಾಡಿಕೊಂಡು, ವಸತಿಯ ಜೊತೆಯಲ್ಲಿ 2 ವರ್ಷಗಳ ಪಿ.ಯು. ಶಿಕ್ಷಣ ಹಾಗೂ ನೀಟ್, ಸಿಇಟಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಬೇಸ್‌ನವರ ಸಹಕಾರದೊಂದಿಗೆ ಉಚಿತ ತರಬೇತಿಯನ್ನು ಕೊಡಮಾಡಲಾಗುತ್ತದೆ.

## ಉದ್ದೇಶ:

- ಗ್ರಾಮೀಣ ಪ್ರದೇಶದ ಪ್ರತಿಭಾವಂತ ಬಡ ಹೆಣ್ಣು ಮಕ್ಕಳಿಗೆ ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಿಗೆ ಪ್ರವೇಶ ಪಡೆಯಲು ಅವಕಾಶ ಕಲ್ಪಿಸುವುದು.






## ಕ್ರಮಿಸಿರುವ ಮೈಲುಗಲ್ಲುಗಳು:

- ಇದುವರೆಗೆ 4 ಬ್ಯಾಚುಗಳಲ್ಲಿ 200 ವಿದ್ಯಾರ್ಥಿನಿಯರು ಈ ಯೋಜನೆಯ ಪ್ರಯೋಜನ ಪಡೆದಿದ್ದಾರೆ.
- ಇದುವರೆಗೆ 54 ವಿದ್ಯಾರ್ಥಿನಿಯರು ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ಪಡೆದಿರುತ್ತಾರೆ.

## ಪ್ರಸ್ತುತ ವರ್ಷ 2022–23ಕ್ಕೆ ಮಾಡಿಕೊಂಡಿದ್ದ ಯೋಜನೆ:

- ಶೇ.20ರಷ್ಟು ವಿದ್ಯಾರ್ಥಿನಿಯರು ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ಪಡೆಯುವಂತಾಗಬೇಕು.










### ಕಾರ್ಯಕ್ರಮಗಳು:

- ಹೆಬ್ರಿಯ ಅಮೃತ ಭಾರತಿ ಶಾಲೆಯಲ್ಲಿ 4 ದಿನಗಳ 'ವ್ಯಕ್ತಿತ್ವ ವಿಕಸನ ಶಿಬಿರ' ಆಯೋಜನೆ.
- ಮನಃಶಾಸ್ತ್ರಜ್ಞರಾದ ಡಾ॥ ಮನ್ವಿತಾ ಅವರಿಂದ ಮನೋವಿಕಾಸಕ್ಕೆ ಬೇಕಾದ ಮಾರ್ಗದರ್ಶನ.

### ವರ್ಷದ ಸಾಧನೆ:

- 2021–22 ಬ್ಯಾಚಿನ 16 ಮಕ್ಕಳು ವೈದ್ಯಕೀಯ ಕಾಲೇಜುಗಳಿಗೆ ಪ್ರವೇಶ ಪಡೆದಿದ್ದಾರೆ.

### ಉಲ್ಲೇಖನೀಯ ಸಂಗತಿಗಳು:

- 2022–23ನೇ ಸಾಲಿನಿಂದ ಶಿಕ್ಷಕಿಯರಾಗಬಯಸುವ ಮಕ್ಕಳಿಗೆ ಉಚಿತ 'ಸಾಧನಾ–ಶಿಕ್ಷಣ' ಯೋಜನೆಯನ್ನು ಪ್ರಾರಂಭಿಸಲಾಗಿದೆ.
- 40 ಮಕ್ಕಳಿಗೆ 6 ವರ್ಷಗಳ ಉಚಿತ ಶಿಕ್ಷಣ.
- ಇಬ್ಬರು ವಿದ್ಯಾರ್ಥಿನಿಯರು ಏಮ್ಸ್‌ಗೆ ಪ್ರವೇಶ ಪಡೆದಿದ್ದಾರೆ.
- ಸಾಧನಾದ 100ಕ್ಕೂ ಹೆಚ್ಚು ಹಿರಿಯ ವಿದ್ಯಾರ್ಥಿನಿಯರ ಮನೆ ಭೇಟಿ ಮಾಡಲಾಗಿದೆ.



- 2023–24ನೇ ಸಾಲಿನ ಪ್ರವೇಶಕ್ಕೆ ಸಂಬಂಧಿಸಿದಂತೆ ಡಿಸೆಂಬರ್ 25ರಲ್ಲಿ ನಡೆದ ಪ್ರವೇಶ ಪರೀಕ್ಷೆಯಲ್ಲಿ ಸುಮಾರು 8500 ವಿದ್ಯಾರ್ಥಿನಿಯರು ಪರೀಕ್ಷೆ ಬರೆದಿದ್ದಾರೆ.

# ಸೇವಾ ವಸತಿ ಪ್ರಕಲ್ಪ

scan/ click for video




1995ರಲ್ಲಿ ಬೆಂಗಳೂರಿನ ಸೇವಾವಸತಿಗಳಲ್ಲಿ (ಕೊಳೆಗೇರಿ) ರಾಷ್ಟ್ರೋತ್ಥಾನ ಪರಿಷತ್‌ನ ಸೇವಾ ಚಟುವಟಿಕೆಗಳು ಆರಂಭಗೊಂಡವು. 1999ರಿಂದ ಜಾಗರಣ ಪ್ರಕಲ್ಪದ ಅಡಿಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಅನೌಪಚಾರಿಕ ಶಿಕ್ಷಣ ಕೇಂದ್ರಗಳನ್ನು ಪ್ರಾರಂಭಿಸಲಾಯಿತು.

ಅನೌಪಚಾರಿಕ ಶಿಕ್ಷಣ ಕೇಂದ್ರಗಳಲ್ಲಿ ಕನ್ನಡ, ಗಣಿತ ವಿಷಯಗಳನ್ನು ಚಟುವಟಿಕೆಗಳ ಮೂಲಕ ಕಲಿಸಲು ಅನುಕೂಲವಾಗುವ ಪಠ್ಯರಚನೆ ಮಾಡಲಾಯಿತು. 200ಕ್ಕೂ ಹೆಚ್ಚು ಸೇವಾವಸತಿ (ಕೊಳೆಗೇರಿ)ಗಳಲ್ಲಿ 5000ಕ್ಕೂ ಹೆಚ್ಚು ಮಕ್ಕಳಿಗೆ ಅನೌಪಚಾರಿಕ ಶಿಕ್ಷಣ ಕೇಂದ್ರಗಳಲ್ಲಿ ಕನ್ನಡ ಓದುವ, ಬರೆಯುವುದನ್ನು, ಲೆಕ್ಕ ಮಾಡುವುದನ್ನು ಕಲಿಸಿಕೊಡಲು ಪ್ರಾರಂಭಿಸಲಾಯಿತು.

2005ರಲ್ಲಿ 4000ಕ್ಕೂ ಅಧಿಕ ಮಕ್ಕಳನ್ನು ಸರ್ವಶಿಕ್ಷಾ ಅಭಿಯಾನದಡಿಯಲ್ಲಿ ಶಾಲೆಗೆ ಸೇರಿಸಿ, ಶಾಲೆಗೆ ಸೇರಿದ ಮಕ್ಕಳು ಮತ್ತೆ ಶಾಲೆಯಿಂದ ಹೊರಗುಳಿಯಬಾರದೆಂದು ಶಾಲಾ ನಂತರ ವ್ಯಾಸಂಗಕೇಂದ್ರಗಳನ್ನು ಪ್ರಾರಂಭಿಸಿ, ಶಾಲಾ ಶಿಕ್ಷಣದಲ್ಲಿ ಆ ಮಕ್ಕಳು ಉತ್ತಮ ಸಾಧನೆ ಮಾಡುವಲ್ಲಿ ಸಹಕಾರ ನೀಡಲು ಪ್ರಾರಂಭಿಸಲಾಯಿತು.

## ಉದ್ದೇಶ:

- ಸೇವಾವಸತಿಗಳಲ್ಲಿ ಶಿಕ್ಷಣ, ಸ್ವಾವಲಂಬನೆ, ಆರೋಗ್ಯ ಮತ್ತು ಸಂಸ್ಕಾರ (ಮೌಲ್ಯ ಶಿಕ್ಷಣ)ಕ್ಕೆ ಸಂಬಂಧಿತ ಸೇವಾ ಚಟುವಟಿಕೆಗಳ ಕೊರತೆಯನ್ನು ನೀಗಿಸುವುದು.



- ಆ ಮೂಲಕ ಅಲ್ಲಿನ ಜನರನ್ನು ಸಶಕ್ತರನ್ನಾಗಿಸುವುದು.
- ಪರಿಷತ್‌ನ ಆಶಯವಾದ ಸ್ವಸ್ಥ–ಸುಸ್ಥಿರ ಸಮಾಜನಿರ್ಮಾಣ ಕಾರ್ಯಕ್ಕೆ ಪೂರಕವಾಗುವುದು.

## ಪ್ರಸ್ತುತ ಕಾರ್ಯವ್ಯಾಪ್ತಿ:

ಪ್ರಸ್ತುತ ಬೆಂಗಳೂರಿನಲ್ಲಿರುವ 570 ಸೇವಾವಸತಿಗಳ ಪೈಕಿ 212ರಲ್ಲಿ ಶಿಕ್ಷಣ (ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಶಾಲಾ ನಂತರದ ವ್ಯಾಸಂಗಕೇಂದ್ರಗಳು), ಸಂಸ್ಕಾರ ಶಿಕ್ಷಣ (ಉತ್ತಮ ಗುಣ ನಿರ್ಮಾಣಕ್ಕಾಗಿ ಮೌಲ್ಯಯುತ ಚಟುವಟಿಕೆಗಳು) ಹಾಗೂ ಇತರೇ ಸಂಬಂಧಿತ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ.

## ಮಾದರಿ ಸೇವಾವಸತಿ (ವಿಶೇಷ ಪ್ರಯೋಗ):

ಶಿಕ್ಷಣ, ಸ್ವಾವಲಂಬನೆ, ಆರೋಗ್ಯ ಮತ್ತು ಸಂಸ್ಕಾರ ಶಿಕ್ಷಣಕ್ಕೆ ಸಂಬಂಧಿಸಿದಂತೆ ವಿವಿಧ ರೀತಿಯ ಚಟುವಟಿಕೆಗಳನ್ನು ಆಯ್ದ 20 ಸೇವಾವಸತಿಗಳಲ್ಲಿ ನಡೆಸುವ ವಿಶೇಷ ಪ್ರಯೋಗವೊಂದನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಮಾದರಿ ಸೇವಾವಸತಿಗಳಲ್ಲಿ ಮುಂದಿನ ಕೆಲ ವರ್ಷಗಳ ಸತತ ಕಾರ್ಯದಿಂದಾಗಿ ಈ ಕೆಳಗಿನ ಬದಲಾವಣೆಗಳನ್ನು ಕಾಣುವ ಯೋಜನೆ ಮಾಡಲಾಗಿದೆ.

- **ಶಿಕ್ಷಣ:** ಸೇವಾವಸತಿಯ ಯಾವುದೇ ಮಗು ಶಾಲೆಯಿಂದ ಹೊರಗುಳಿಯಬಾರದು. ಕನಿಷ್ಠವೆಂದರೆ 12ನೇ ತರಗತಿವರೆಗಿನ ಶಿಕ್ಷಣ ಪಡೆದಿರಲೇಬೇಕು.











- **ಆರೋಗ್ಯ:** ಸೇವಾವಸತಿಯ ಎಲ್ಲರೂ ದೈಹಿಕ ಮತ್ತು ಮಾನಸಿಕ ಸ್ವಸ್ಥ ಜೀವನ ನಡೆಸಬೇಕು.
- **ಸ್ವಾವಲಂಬನೆ:** ಸೇವಾವಸತಿಯಲ್ಲಿ ದುಡಿಯುವ ಎಲ್ಲರಿಗೂ ಕೆಲಸವಿರಬೇಕು ಮತ್ತು ಎಲ್ಲ ಕುಟುಂಬಗಳೂ ಆರ್ಥಿಕವಾಗಿ ಸ್ವಾವಲಂಬಿಯಾಗಬೇಕು.
- **ಸಂಸ್ಕಾರ:** ಸೇವಾವಸತಿಯ ಎಲ್ಲ ಕುಟುಂಬಗಳೂ ಸಂಸ್ಕಾರವಂತ ಕುಟುಂಬಗಳಾಗಬೇಕು.



## ಕ್ರಮಿಸಿರುವ ಮೈಲುಗಲ್ಲುಗಳು:

- ಬೆಂಗಳೂರಿನ ಸೇವಾವಸತಿಗಳಲ್ಲಿ ಅನೌಪಚಾರಿಕ ಶಿಕ್ಷಣ ಕೇಂದ್ರಗಳನ್ನು ನಡೆಸುವ ಮೂಲಕ ಶಾಲೆಯಿಂದ ಹೊರಗುಳಿದ 4000ಕ್ಕೂ ಅಧಿಕ ಮಕ್ಕಳನ್ನು ಶಾಲೆಗೆ ಸೇರಿಸಲಾಗಿದೆ.
- ಆರೋಗ್ಯ ಸೇವೆಯ ಮೂಲಕ ಸೇವಾವಸತಿಯ 20,000ಕ್ಕೂ ಅಧಿಕ ಜನರಿಗೆ ಕಣ್ಣಿನ ಆರೋಗ್ಯ ತಪಾಸಣೆ ಮಾಡಿಸಲಾಗಿದೆ. 1000ಕ್ಕೂ ಅಧಿಕ ಜನರಿಗೆ ಕಣ್ಣುಪೊರೆ (ಕ್ಯಾಟರ್‍ಯಾಕ್ಟ್) ಶಸ್ತ್ರಚಿಕಿತ್ಸೆ ಮಾಡಿಸುವ ಮೂಲಕ ದೃಷ್ಟಿ ನೀಡಲಾಗಿದೆ.
- ಪ್ರಕಲ್ಪ ನಡೆಸುವ ವ್ಯಾಸಂಗಕೇಂದ್ರಗಳಲ್ಲಿ ಈ ವರೆಗೆ 10000ಕ್ಕೂ ಅಧಿಕ ಮಕ್ಕಳು ಕಲಿತಿದ್ದಾರೆ. 2000ಕ್ಕೂ ಅಧಿಕ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆದು ಸಮಾಜದಲ್ಲಿ ಗೌರವ ಸ್ಥಾನ ಪಡೆದಿದ್ದಾರೆ.
- 14 ಮಧುಮೇಹ ತಪಾಸಣೆ ಮತ್ತು ಚಿಕಿತ್ಸಾ ಕೇಂದ್ರಗಳಲ್ಲಿ ಸೇವಾವಸತಿಯ 800ಕ್ಕೂ ಅಧಿಕ







ಸೇವಾ ವಸತಿಯ ಕಲಿಕಾ ಕೇಂದ್ರಗಳು

ರೋಗಿಗಳಿಗೆ ಪ್ರತಿ ತಿಂಗಳೂ ಚಿಕಿತ್ಸೆ ಮತ್ತು ಔಷಧಿ ನೀಡಲಾಗುತ್ತಿದೆ.

- ಸೇವಾವಸತಿಗಳಲ್ಲಿ ನಡೆಸುತ್ತಿರುವ ಹೊಲಿಗೆ ಮತ್ತು ಕಂಪ್ಯೂಟರ್ ತರಬೇತಿಗಳಲ್ಲಿ 2000ಕ್ಕೂ ಹೆಚ್ಚು ಮಹಿಳೆಯರು, 1000ಕ್ಕೂ ಹೆಚ್ಚು ಯುವಕ–ಯುವತಿಯರು ತರಬೇತಿ ಪಡೆದು, ಸ್ವಾವಲಂಬಿಗಳಾಗಿದ್ದಾರೆ.



## 2022–23ರ ಯೋಜನೆ:

| ಚಟುವಟಿಕೆ | 2022–23ರ ಗುರಿ |
|---|---|
| ಸೇವಾವಸತಿಗಳ ಸಂಖ್ಯೆ | 200 |
| ವ್ಯಾಸಂಗಕೇಂದ್ರ | 275 |
| ಕಂಪ್ಯೂಟರ್ ತರಬೇತಿ ಕೇಂದ್ರ | 3 |
| ಸ್ವಸಹಾಯ ಸಂಘ | 100 |
| **ಮಾದರಿ ಸೇವಾವಸತಿ ಕಾರ್ಯ – 2022–23ರ ಗುರಿ** | |
| ಸೇವಾವಸತಿಗಳ ಸಂಖ್ಯೆ | 20 |
| ವ್ಯಾಸಂಗಕೇಂದ್ರ | 120 |
| 10th ಶ್ಯೂರ್ ಪಾಸ್ | 20 |
| ಸ್ವಸಹಾಯ ಸಂಘ | 41 |
| ಹೊಲಿಗೆ ತರಬೇತಿ ಕೇಂದ್ರ | 2 |
| ಕಂಪ್ಯೂಟರ್ ತರಬೇತಿ | 2 |
| ಉದ್ಯೋಗ ತರಬೇತಿ ಮತ್ತು ಮಾಹಿತಿ ಕೇಂದ್ರ | 1 |
| ಆರೋಗ್ಯ ಸೇವಾ ಕೇಂದ್ರ | 20 |
| ಕಿಶೋರ ಬಳಗ | 20 |
| ಕಾಲೇಜು ವಿದ್ಯಾರ್ಥಿ ಬಳಗ | 20 |







## ಕಾರ್ಯಕ್ರಮಗಳು:

- **ಬೇಸಿಗೆ ಶಿಬಿರ:** ಏಪ್ರಿಲ್ ರಜಾದಿನಗಳಲ್ಲಿ ಸೇವಾವಸತಿಗಳಲ್ಲಿ ನಡೆವ ವ್ಯಾಸಂಗಕೇಂದ್ರಗಳಲ್ಲಿ ಬೇಸಿಗೆ ಶಿಬಿರಗಳನ್ನು ನಡೆಸಲಾಯಿತು.
- **ಕಾಲೇಜು ವಿದ್ಯಾರ್ಥಿಗಳ ಪ್ರವಾಸ:** ಕಾಲೇಜು ವಿದ್ಯಾರ್ಥಿ ಬಳಗದ ವಿದ್ಯಾರ್ಥಿಗಳನ್ನು ಮೇ ತಿಂಗಳಲ್ಲಿ ರಾಷ್ಟ್ರೋತ್ಥಾನ ಗೋಶಾಲೆಯ ವೀಕ್ಷಣೆಗೆ ಕರೆದೊಯ್ಯಲಾಯಿತು. 3 ತಂಡಗಳಲ್ಲಿ ಒಟ್ಟು 264 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಮೊದಲನೇ ತಂಡ ಭೇಟಿ ನೀಡಿದಾಗ ಪರಿಷತ್‌ನ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ನಾ. ದಿನೇಶ್ ಹೆಗ್ಡೆಯವರು ವಿದ್ಯಾರ್ಥಿಗಳಿಗೆ ಭವಿಷ್ಯದ ಭಾರತದ ಪ್ರಜೆಗಳಾಗಿ ನಮ್ಮ ಕರ್ತವ್ಯಗಳೇನು ಎಂಬ ಬಗ್ಗೆ ಮಾರ್ಗದರ್ಶನ ಮಾಡಿದರು. ಶ್ರೀ ವೀರೇಶ್ ಮತ್ತು ಶ್ರೀ ಗುರು ಬಸವರಾಜ್ ಮಾರ್ಗದರ್ಶನ ಮಾಡಿದರು.
- **ಗುರುವಂದನಾ:** ವ್ಯಾಸಂಗಕೇಂದ್ರಗಳ ಮಕ್ಕಳು ತಾವು ಓದುತ್ತಿರುವ ಶಾಲೆಗಳ ಶಿಕ್ಷಕರನ್ನು ವ್ಯಾಸಂಗಕೇಂದ್ರಗಳಿಗೆ ಕರೆದು ಗುರುವಂದನೆ ಸಲ್ಲಿಸುವ ವಿಶಿಷ್ಟ ಕಾರ್ಯಕ್ರಮವನ್ನು ನಡೆಸಲಾಯಿತು.
- **ರಕ್ಷಾಬಂಧನ:** ಪ್ರಕಲ್ಪ ಚಟುವಟಿಕೆ ನಡೆಸುತ್ತಿರುವ ಸೇವಾವಸತಿಗಳ 10,000ಕ್ಕೂ ಹೆಚ್ಚು ಜನರಿಗೆ ರಕ್ಷೆಯನ್ನು ಕಟ್ಟಿ ಸಾಮರಸ್ಯ ಮೂಡಿಸುವ ಕಾರ್ಯಕ್ರಮವನ್ನು ಆಗಸ್ಟ್ 11ರ ರಕ್ಷಾಬಂಧನ ದಿನದಂದು ನಡೆಸಲಾಯಿತು.









ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್‌ಚಂದ್ ಗೆಹ್‌ಲೋಟ್‌ರೊಂದಿಗೆ ಸೇವಾ ವಸತಿಯ ಮಕ್ಕಳ ರಕ್ಷಾಬಂಧನ ಕಾರ್ಯಕ್ರಮ

- **ವರಮಹಾಲಕ್ಷ್ಮೀ ವ್ರತಾಚರಣೆ:** ಸ್ವಸಹಾಯ ಸಂಘದ ಮಹಿಳೆಯರಿಂದ ವರಮಹಾಲಕ್ಷ್ಮೀ ಹಬ್ಬದ ಆಚರಣೆ ನಡೆಯಿತು.

- **ರಾಜ್ಯಪಾಲರಿಗೆ ರಕ್ಷಾಬಂಧನ:** ಆಗಸ್ಟ್ 14ರಂದು ಸುಧಾಮನಗರ ಸೇವಾವಸತಿಯ 20 ಮಕ್ಕಳೊಂದಿಗೆ ರಾಜಭವನದಲ್ಲಿ ಘನತೆವೆತ್ತ ರಾಜ್ಯಪಾಲರಾದ ಸನ್ಮಾನ್ಯ ಶ್ರೀ ಥಾವರಚಂದ್ ಗೆಹಲೋಟ್‌ರವರು ರಕ್ಷಾಬಂಧನ ಉತ್ಸವ ಆಚರಿಸಿದರು. ಮಕ್ಕಳು ಮತ್ತು ರಾಜ್ಯಪಾಲರು ಪರಸ್ಪರ ರಕ್ಷೆ ಕಟ್ಟಿ ಸಂಭ್ರಮಿಸಿದರು. ರಾಜ್ಯಪಾಲರು ಮಕ್ಕಳಿಗೆ ಹಿತನುಡಿಗಳನ್ನು ಹೇಳಿ, ಸಿಹಿ ಕೊಟ್ಟು ಆಶೀರ್ವಾದ ಮಾಡಿದರು. ಮಕ್ಕಳಿಗೆ ರಾಜಭವನವನ್ನು ವೀಕ್ಷಿಸಲು ಅವಕಾಶ ಮಾಡಿಕೊಡಲಾಯಿತು.




- **ಸ್ವಾತಂತ್ರ್ಯದ ಅಮೃತ ಮಹೋತ್ಸವ:** ಸ್ವಾತಂತ್ರ್ಯೋತ್ಸವದ ನಿಮಿತ್ತ ಸೇವಾವಸತಿಯ ಹತ್ತಿರದ ಶಾಲೆಗಳಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಕಥೆಗಳನ್ನು ಹೇಳುವ ಕಾರ್ಯಕ್ರಮವನ್ನು ಆಗಸ್ಟ್ 8 ರಿಂದ 13ರವರೆಗೆ ನಡೆಸಲಾಯಿತು. 68 ಶಾಲೆಗಳಲ್ಲಿ ಕಾರ್ಯಕ್ರಮ ನಡೆಯಿತು. ಸೇವಾವಸತಿಯ ಎಲ್ಲ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಯನ್ನು ಅರಿಯಲು ಮತ್ತು ಕೊರತೆಯನ್ನು ತುಂಬುವ ಯೋಜನೆ ರೂಪಿಸಲು ಈ ಕಾರ್ಯಕ್ರಮ ಸಹಕಾರಿಯಾಯಿತು. ಈ ಶಾಲೆಗಳಲ್ಲಿ ಸಂಸ್ಕಾರ ಶಿಕ್ಷಣ ಸಂಬಂಧಿತ ಚಟುವಟಿಕೆಗಳನ್ನು ಮುಂದಿನ ದಿನಗಳಲ್ಲಿ ಪ್ರಾರಂಭಿಸಲಾಯಿತು.





- **ಶ್ರೀಕೃಷ್ಣ ಜನ್ಮಾಷ್ಟಮಿ:** ರಾಷ್ಟ್ರ ಪುರುಷನಾದ ಶ್ರೀ ಕೃಷ್ಣನನ್ನು ಸ್ಮರಿಸುವ ಮತ್ತು ಅವನಂತೆ ಧರ್ಮಕ್ಕಾಗಿ ಬದುಕುವುದನ್ನು ಕಲಿಯುವುದಕ್ಕಾಗಿ ಶ್ರೀಕೃಷ್ಣನ ವೇಷವನ್ನು ಹಾಕುವ, ಅವನ ವಿಶೇಷತೆಯನ್ನು ಅರಿಯುವ ವಿಶೇಷ ಕಾರ್ಯಕ್ರಮವನ್ನು ಆಚರಿಸಲಾಯಿತು.
- **ಸ್ವದೇಶೀ ದಿನ:** ಸೆಪ್ಟೆಂಬರ್ 11ರಂದು ಸ್ವದೇಶೀ ದಿನವನ್ನು ಆಚರಿಸಲಾಯಿತು. ಪ್ರಕಲ್ಪದ ಶಿಕ್ಷಕಿಯರಿಗೆ ಸ್ವದೇಶೀ ಜೀವನ ಶೈಲಿಯ ಬಗೆಗೆ ಹಿರಿಯರಿಂದ ಉಪನ್ಯಾಸವನ್ನು ಆಯೋಜಿಸಲಾಗಿತ್ತು.
- **ಆಯುಧಪೂಜಾ:** ರಾಷ್ಟ್ರೋತ್ಥಾನ ಪರಿಷತ್‌ನಿಂದ ನಡೆವ ಆಯುಧಪೂಜಾ ಸಮಾರಂಭದಲ್ಲಿ ಪ್ರತಿ ವರ್ಷವೂ ಸೇವಾವಸತಿ ಪ್ರಕಲ್ಪದ ಮಹಿಳಾ ಕಾರ್ಯಕರ್ತರಿಗೆ ಸೀರೆಯನ್ನು ಉಡುಗೊರೆಯಾಗಿ ನೀಡಲಾಗುತ್ತದೆ. ಅಕ್ಟೋಬರ್ 4ರಂದು ನಡೆದ ಆಯುಧಪೂಜಾ ಸಮಾರಂಭದಲ್ಲಿ RSSನ ಹಿರಿಯ ಪ್ರಚಾರಕರಾದ ಶ್ರೀ ಸು. ರಾಮಣ್ಣನವರು ಉಡುಗೊರೆ ನೀಡಿ ಆಶೀರ್ವದಿಸಿದರು.
- **ನವರಾತ್ರಿ ಉತ್ಸವ:** ನವರಾತ್ರಿ ಉತ್ಸವದ 9 ದಿನಗಳಲ್ಲಿ ಸ್ವಸಹಾಯ ಗುಂಪುಗಳ ಸದಸ್ಯರು ನಿತ್ಯ ಹತ್ತಿರದ ದೇವಸ್ಥಾನಗಳಲ್ಲಿ ಪೂಜೆ, ಭಜನೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡರು.
- **ಸ್ವರ್ಣಬಿಂದು ಪ್ರಾಶನ:** ಯುವ ಪಥದ ಸಹಕಾರದೊಂದಿಗೆ ಅಕ್ಟೋಬರ್‌ನಿಂದ ಪ್ರತಿ ತಿಂಗಳು ಪುಷ್ಯ ನಕ್ಷತ್ರ ದಿನದಂದು 650 ಮಕ್ಕಳಿಗೆ ಸ್ವರ್ಣ ಬಿಂದು ಪ್ರಾಶನ ಮಾಡಿಸಲಾಗುತ್ತಿದೆ. ಇದರ ಪರಿಣಾಮವಾಗಿ ಮಕ್ಕಳಲ್ಲಿ ಕಫ, ಕೆಮ್ಮು, ಶೀತದ ಬಾಧೆ ಕಡಿಮೆಯಾಗಿದೆ ಎಂದು ಪೋಷಕರ ಅಭಿಪ್ರಾಯವಾಗಿದೆ.
- **ದೀಪೋತ್ಸವ:** ಕಾರ್ತಿಕ ಮಾಸದಲ್ಲಿ ಸ್ವಸಹಾಯ ಗುಂಪುಗಳ ಸದಸ್ಯರು ಹತ್ತಿರದ ದೇವಸ್ಥಾನಗಳಲ್ಲಿ ನೂರಾರು ದೀಪಗಳನ್ನು ಬೆಳಗಿಸಿ ದೀಪೋತ್ಸವ ಆಚರಿಸಿದರು.
- **ಮಹಿಳಾ ಸ್ವಸಹಾಯ ಗುಂಪುಗಳ ಸಮಾವೇಶ:** 2022ರ ನವೆಂಬರ್ 27ರಂದು ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಸ್ವಸಹಾಯ ಗುಂಪುಗಳ ಸಮಾವೇಶವನ್ನು ನಡೆಸಲಾಯಿತು. 81 ಗುಂಪುಗಳ 696 ಸದಸ್ಯರು ಭಾಗವಹಿಸಿದ್ದರು. ಪರಿಷತ್‌ನ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ನಾ. ದಿನೇಶ್ ಹೆಗ್ಡೆ, ಆಡಳಿತ ಮಂಡಳಿ ಸದಸ್ಯರಾದ ಶ್ರೀ ರವಿಕುಮಾರ್, ರಾ.ಸ್ವ. ಸಂಘದ ಪ್ರಾಂತ ಕಾರ್ಯವಾಹ ಡಾ॥ ಜಯಪ್ರಕಾಶ್ ಉಪಸ್ಥಿತರಿದ್ದು, ಮಾರ್ಗದರ್ಶನ ಮಾಡಿದರು. ಬಿಬಿಎಂಪಿ ಕಲ್ಯಾಣ ವಿಭಾಗದ ಅಧಿಕಾರಿಗಳಾದ ಶ್ರೀ ಸೋಮಣ್ಣ ಮತ್ತು ಶ್ರೀಮತಿ ಲತಾ ಅವರುಗಳು ಸ್ವಸಹಾಯ ಗುಂಪುಗಳಿಗೆ ಸರಕಾರದ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು. ಸ್ವಸಹಾಯ ಗುಂಪುಗಳ ಸದಸ್ಯರು ಜಾನಪದ ಗೀತೆಗಳಿಗೆ ನೃತ್ಯ ಪ್ರದರ್ಶಿಸಿದರು.
- **ವಿವೇಕಾನಂದ ಜಯಂತಿ:** ಜನವರಿ 12ರಂದು ವಿವೇಕಾನಂದ ಜಯಂತಿಯನ್ನು ಆಚರಿಸಲಾಯಿತು. ಮಕ್ಕಳು ಕುವೆಂಪು ವಿರಚಿತ ಶ್ರೀ ವಿವೇಕಾನಂದ ಗುರುವರ ಹಾಡನ್ನು ಹಾಡಿ, ವಿವೇಕಾನಂದರ ಕಥೆಯನ್ನು ಹೇಳುವ ಮೂಲಕ







ವಿವೇಕಾನಂದ ಜಯಂತಿಯನ್ನು ಆಚರಿಸಿದರು. ಕಾಲೇಜು ವಿದ್ಯಾರ್ಥಿ ಬಳಗಗಳಲ್ಲಿ ವಿವೇಕಾನಂದ ಜಯಂತಿಯನ್ನು ಆಚರಿಸಲಾಯಿತು.

- **ಸಂಕ್ರಾಂತಿ ಉತ್ಸವ ಮತ್ತು ಗೋಪೂಜೆ:** ಪ್ರಕಲ್ಪದ ವತಿಯಿಂದ ಬೆಂಗಳೂರಿನ ಸೇವಾವಸತಿಗಳಲ್ಲಿ ಸಂಕ್ರಾಂತಿಯ ಆಚರಣೆಯನ್ನು ಮಾಡಲಾಯಿತು. ಆ ನಿಮಿತ್ತ ಪೊಂಗಲ್ ತಯಾರಿ ಮತ್ತು ಗೋಪೂಜೆಯನ್ನು ಏರ್ಪಡಿಸಲಾಗಿತ್ತು. ಮಕ್ಕಳು, ತಾಯಂದಿರು ಭಾಗಿಯಾಗಿ ಉತ್ಸವವನ್ನು ಸಡಗರದಿಂದ ಆಚರಿಸಿದರು.
- **ಭಾರತಮಾತಾ ಪೂಜನ್:** ಜನವರಿ 26ರಿಂದ ಜನವರಿ 31ರವರೆಗೆ ವ್ಯಾಸಂಗ ಕೇಂದ್ರಗಳಲ್ಲಿ ಮತ್ತು ಸ್ವಸಹಾಯ ಗುಂಪುಗಳಲ್ಲಿ ಭಾರತಮಾತಾ ಪೂಜನ್ ಆಚರಿಸಲಾಯಿತು. ಸ್ವಸಹಾಯ ಗುಂಪುಗಳಲ್ಲಿ ಸದಸ್ಯರಿಗೆ ಪ್ರತಿಜ್ಞಾವಿಧಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು.







## ತರಬೇತಿ ಕಾರ್ಯಾಗಾರಗಳು:

- ವ್ಯಾಸಂಗಕೇಂದ್ರಗಳ ಶಿಕ್ಷಕಿಯರಿಗೆ ಪ್ರತಿ ತಿಂಗಳ 1ನೇ ಭಾನುವಾರದಂದು ಪ್ರಶಿಕ್ಷಣವರ್ಗ ನಡೆಸಲಾಗುತ್ತಿದೆ.
- ಪ್ರಕಲ್ಪದ ಕ್ಷೇತ್ರ ಸಂಯೋಜಕರಿಗೆ ಪ್ರತಿ ತಿಂಗಳು ಪ್ರಶಿಕ್ಷಣ ವರ್ಗ ನಡೆಸಲಾಗುತ್ತಿದ್ದು, 3 ತಿಂಗಳಿಗೊಮ್ಮೆ ಅವರ ಕಾರ್ಯಪ್ರಗತಿಯ ಬಗೆಗೆ PPT ಪ್ರಸ್ತುತಿ ಇರುತ್ತದೆ.
- ಮಹಿಳಾ ಸ್ವಸಹಾಯ ಗುಂಪುಗಳ ಪ್ರತಿನಿಧಿಗಳಿಗೆ 3 ತಿಂಗಳಿಗೊಮ್ಮೆ ಪ್ರಶಿಕ್ಷಣವರ್ಗಗಳನ್ನು ನಡೆಸಲಾಗುತ್ತಿದೆ.
- ಪ್ರಕಲ್ಪದಿಂದ ನಡೆಯುತ್ತಿರುವ ವೃತ್ತಿ ತರಬೇತಿ ಕೇಂದ್ರಗಳ ಶಿಕ್ಷಕರಿಗೆ ಮಾಸಿಕ ಪ್ರಶಿಕ್ಷಣ ವರ್ಗ ನಡೆಸಲಾಗುತ್ತಿದೆ.
- ಪ್ರಕಲ್ಪದ ಕಾರ್ಯ ಚಟುವಟಿಕೆಗಳ ಸೇವಾವಸತಿ ಪೋಷಕ ಸಮಿತಿಗೆ 6 ತಿಂಗಳಿಗೊಮ್ಮೆ ಪ್ರಶಿಕ್ಷಣವರ್ಗ ನಡೆಸಲಾಗುತ್ತಿದೆ.

## ವರ್ಷದ ಸಾಧನೆ:

- **ಮಹಿಳಾ ಸ್ವಸಹಾಯ ಗುಂಪುಗಳು:**
  - o ಮಾದರಿ ಸೇವಾವಸತಿಗಳಲ್ಲಿ 41 ಸ್ವಸಹಾಯ ಗುಂಪುಗಳನ್ನು ರಚಿಸುವ ಗುರಿ ಹೊಂದಲಾಗಿತ್ತು.
  - o 59 ಗುಂಪುಗಳು ರಚನೆಯಾಗಿವೆ.
- 15 ಮಾದರಿ ಸೇವಾವಸತಿಗಳಲ್ಲಿ 7403 ಕುಟುಂಬಗಳಲ್ಲಿ 3683 ಕುಟುಂಬಗಳು ಸೇವಾ ವಸತಿಯ ಒಂದಿಲ್ಲೊಂದು ಚಟುವಟಿಕೆಗಳ ಫಲಾನುಭವಿ ಕುಟುಂಬಗಳಾಗಿವೆ.

- 10ನೇ ತರಗತಿ ವಿದ್ಯಾರ್ಥಿಗಳಿಗೆ 10th ಶ್ಯೂರ್ ಪಾಸ್ ಯೋಜನೆಯಡಿ 12 ಸ್ಥಾನಗಳಲ್ಲಿ ವಿಶೇಷ ತರಗತಿಗಳನ್ನು ನಡೆಸಲಾಯಿತು. 2021–22ರ ಸಾಲಿನಲ್ಲಿ ಪರೀಕ್ಷೆಗೆ ಕುಳಿತ 341 ವಿದ್ಯಾರ್ಥಿಗಳಲ್ಲಿ 289 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.
- ಆರೋಗ್ಯ ಸೇವಾ ಕೇಂದ್ರಗಳ ಮೂಲಕ 14 ಸೇವಾವಸತಿಗಳ 600 ಮಧುಮೇಹಿಗಳಿಗೆ ಪ್ರತಿ ತಿಂಗಳು ಉಚಿತ ಪರೀಕ್ಷೆ ಮತ್ತು ಔಷಧಿ ಸೌಲಭ್ಯ ಕಲ್ಪಿಸಲಾಗಿದೆ. ಅದರ ಪರಿಣಾಮವಾಗಿ ಅವರ ಆರೋಗ್ಯ ಸುಧಾರಿಸುತ್ತಿದೆ.

## ಉಲ್ಲೇಖನೀಯ ಸಂಗತಿಗಳು:

- 10th ಶ್ಯೂರ್ ಪಾಸ್ ಯೋಜನೆಯಲ್ಲಿ ಪಾಲ್ಗೊಂಡು ಉತ್ತೀರ್ಣರಾದ 289 ವಿದ್ಯಾರ್ಥಿಗಳು ಓದನ್ನು ನಿಲ್ಲಿಸದೇ, ಮುಂದುವರೆಸಿದ್ದಾರೆ.
- ಶ್ರೀಕೃಷ್ಣ ಜನ್ಮಾಷ್ಟಮಿಯಂದು ಸೇವಾವಸತಿಯ 4000ಕ್ಕೂ ಅಧಿಕ ಮಕ್ಕಳು ಶ್ರೀಕೃಷ್ಣನ ವೇಷ ಧರಿಸಿ ಮೆರವಣಿಗೆಯಲ್ಲಿ ಭಾಗವಹಿಸಿದ್ದರು.
- **ಡಾಕ್ಟರ್‌ಗಳಿಂದಲೇ ಸ್ವಯಂಪ್ರೇರಿತ ಸೇವಾಕಾರ್ಯ:** ವಿ.ವಿ. ಗಿರಿ ಕಾಲೋನಿ ಸೇವಾವಸತಿಯಲ್ಲಿ ಪ್ರತಿ ತಿಂಗಳು ನಡೆದ ಮಧುಮೇಹ ಪರೀಕ್ಷಾ ಶಿಬಿರಕ್ಕೆ ಬರುತ್ತಿರುವ ಡಾ॥ ಲಲಿತಮ್ಮನವರು ಸೇವಾವಸತಿಯ ಜನರ ಆರೋಗ್ಯ ತಪಾಸಣಾ ಶಿಬಿರವನ್ನು ಸೆಪ್ಟೆಂಬರ್ 21ರಂದು ಏರ್ಪಡಿಸಿದ್ದರು. 5 ವೈದ್ಯರನ್ನು ಶಿಬಿರದಲ್ಲಿ ತೊಡಗುವಂತೆ ಮಾಡಿದ್ದರು.
- ಹೆಚ್ಚಿನ ಬಡ್ಡಿಯಿಂದಾಗಿ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿದ್ದ 40 ಕುಟುಂಬಗಳು ಸ್ವಸಹಾಯ ಗುಂಪುಗಳ ಸಂಪರ್ಕದಿಂದಾಗಿ ಸಾಲಮುಕ್ತವಾಗಿವೆ.
- ಪ್ರಕಲ್ಪದ ಸೇವಾಕಾರ್ಯಕ್ಕೆ ಸ್ವಸಹಾಯ ಗುಂಪುಗಳ ಮಹಿಳೆಯರು ಕೈಜೋಡಿಸಿದ್ದಾರೆ. ಪ್ರಕಲ್ಪದ ಕಾರ್ಯ ತಮ್ಮದೂ ಹೌದೆಂದು ಒಪ್ಪಿ ಪಾಲ್ಗೊಳ್ಳುತ್ತಿದ್ದಾರೆ.



## ಉಲ್ಲೇಖನೀಯ ಹೇಳಿಕೆಗಳು:

ಆರ್ಥಿಕವಾಗಿ ತೊಂದರೆಯಲ್ಲಿದ್ದೆ, ಕೊರೋನಾದಿಂದಾಗಿ ಗಂಡನ ಕೆಲಸ ಹೋಗಿತ್ತು. ಆಗ ನಮ್ಮ ಪ್ರದೇಶದಲ್ಲಿ ರಾಷ್ಟ್ರೋತ್ಥಾನ ಪರಿಷತ್‌ನವರು ನಡೆಸುತ್ತಿದ್ದ ಹೊಲಿಗೆ ತರಬೇತಿ ಕೇಂದ್ರಕ್ಕೆ ಸೇರಿ, ಚೆನ್ನಾಗಿ ಕಲಿತುಕೊಂಡೆ. ಈಗ ಮನೆಯಲ್ಲಿಯೇ ಹೊಲಿದು ಸಂಪಾದಿಸುತ್ತಿದ್ದೇನೆ. ಕಷ್ಟ ಸ್ವಲ್ಪ ಮಟ್ಟಿಗೆ ಪರಿಹಾರವಾಗಿದೆ. ಸ್ವಂತ ಕಾಲಮೇಲೆ ನಿಲ್ಲಬಲ್ಲೆನೆಂಬ ಆತ್ಮವಿಶ್ವಾಸ ಬಂದಿದೆ. ಅದಕ್ಕಾಗಿ ರಾಷ್ಟ್ರೋತ್ಥಾನ ಪರಿಷತ್‌ಗೆ ಧನ್ಯವಾದ ಹೇಳುವೆ.

**ರೂಪಿಣಿ**
ಬಿನ್ನಿಮಿಲ್ ಬಳಿಯ ನೇತಾಜಿನಗರದ ಹೊಲಿಗೆ ತರಬೇತಿ ಕೇಂದ್ರದ ಶಿಕ್ಷಾರ್ಥಿ







ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ದಿನೇಶ್ ಹೆಗ್ಡೆಯವರು ಜನತಾ ಕಾಲೋನಿಯಲ್ಲಿ ನಡೆವ ಪ್ರಕಲ್ಪದ ಚಟುವಟಿಕೆಗಳನ್ನು ನೋಡಲು ಬಂದಿದ್ದರು. ಆಗ **ಅಮ್ಮಯ್ಯಮ್ಮ** ಎಂಬ ಮಹಿಳೆ ದಿನೇಶ್ ಜೀಯವರೊಂದಿಗೆ ಮಾತನಾಡುತ್ತಾ "ತಮ್ಮ ಮೊಮ್ಮಗ ಚಂದನ್ ಇಲ್ಲಿ ನಡೆವ 10ನೇ ತರಗತಿಗಳಿಗೆ ಬರದೇ ಹೋಗಿದ್ದರೆ ಫೇಲ್ ಆಗಿಬಿಡುತ್ತಿದ್ದ ಎಂದು 10th ಶ್ಯೂರ್ ತರಗತಿಗಳನ್ನು ನಡೆಸಿದ್ದರ ಬಗ್ಗೆ ಧನ್ಯವಾದ ಸಮರ್ಪಿಸಿದರು.


ಜನತಾ ಕಾಲೋನಿಯಲ್ಲಿ ನಡೆವ ಭವಾನಿ ಮತ್ತು ಲಕ್ಷ್ಮೀ ಮಹಿಳಾ ಸ್ವಸಹಾಯ ಗುಂಪಿನ ಸದಸ್ಯರಾದ **ಶ್ರೀಮತಿ ಪಚ್ಚಮ್ಮ** ಮತ್ತು **ಶ್ರೀಮತಿ ಗಾಯತ್ರಿಯವರು** ಗುಂಪಿನಲ್ಲಿ ಸಾಲ ಪಡೆದು, ಸ್ವ ಉದ್ಯೋಗ ಪ್ರಾರಂಭಿಸಿದ್ದಾರೆ. ಅವರು ಹೇಳುವುದೇನೆಂದರೆ, "ಸ್ವಸಹಾಯ ಗುಂಪಿನ ಸದಸ್ಯರಾಗಿದ್ದರಿಂದಾಗಿ ಇನ್ನೊಬ್ಬರ ಬಳಿ ಕೆಲಸ ಮಾಡುತ್ತಿದ್ದ ನಾವು ಈಗ ಗುಂಪಿನಿಂದ ಸಾಲ ಪಡೆದು ಸ್ವ ಉದ್ಯೋಗ ಪ್ರಾರಂಭಿಸುವಂತಾಗಿದೆ, ನಮ್ಮ ಆರ್ಥಿಕ ಕಷ್ಟವೂ ಈಗ ಕಡಿಮೆಯಾಗಿದೆ".

## ಮುಂದಿನ ಕಾರ್ಯವಿಸ್ತಾರ

| | 2022–23 | 2023–24 |
|---|---|---|
| ಮಹಿಳಾ ಸ್ವಸಹಾಯ ಗುಂಪುಗಳು | 119 | 250 |
| ಮಾದರಿ ಸೇವಾವಸತಿಗಳ ಫಲಾನುಭವಿ ಕುಟುಂಬಗಳ ಸಂಖ್ಯೆ | ಶೇಕಡಾ 50 | ಶೇಕಡಾ 75 |
| ಹೊಲಿಗೆ ತರಬೇತಿ ಕೇಂದ್ರ | 12 | 20 |
| ಕ್ಯಾಟರ್ಯಾಕ್ಟ್ ಮುಕ್ತ ಸೇವಾವಸತಿ | – | 20 |
| 10th ಶ್ಯೂರ್ ಪಾಸ್ ಯೋಜನೆ (ಮಾದರಿ ಸೇವಾವಸತಿಗಳ 10ನೇ ತರಗತಿಯ ಎಲ್ಲ ವಿದ್ಯಾರ್ಥಿಗಳನ್ನು ಉತ್ತೀರ್ಣರಾಗುವಂತೆ ಮಾಡುವುದು) | 13 | 20 |

# ರಾಷ್ಟ್ರೋತ್ಥಾನ ಸಾಹಿತ್ಯ ಹಾಗೂ ಉತ್ಥಾನ ಮಾಸಪತ್ರಿಕೆ

scan/ click for video




ರಾಷ್ಟ್ರತಪಸ್ವಿ ಶ್ರೀಗುರೂಜಿ ಪುಸ್ತಕ ಲೋಕಾರ್ಪಣಾ ಸಮಾರಂಭ

ಭಾರತದ ನೈಜ ಇತಿಹಾಸವನ್ನು, ಸಂಸ್ಕೃತಿ-ಪರಂಪರೆಯನ್ನು ಭಾರತೀಯರಿಗೆ ಮತ್ತೆ ನೆನಪಿಸಿ, ಜಾಗೃತಿಯನ್ನು ಉಂಟುಮಾಡಿ, ಒಟ್ಟಾರೆಯಾಗಿ ಭಾರತೀಯ ಜೀವನ ಮೌಲ್ಯಗಳನ್ನು ಜನ-ಮನದಲ್ಲಿ ಬೇರೂರಿಸುವ ಸಾಹಿತ್ಯನಿರ್ಮಾಣ ಮತ್ತು ಪ್ರಸಾರದ ಧ್ಯೇಯದೊಡನೆ 'ರಾಷ್ಟ್ರೋತ್ಥಾನ ಸಾಹಿತ್ಯ'ವು 1965ರಲ್ಲಿ ಪ್ರಾರಂಭವಾಯಿತು. ರಾಷ್ಟ್ರೋತ್ಥಾನ ಸಾಹಿತ್ಯದಿಂದ ಪ್ರಕಟವಾದ ಮೊದಲ ಪುಸ್ತಕ – ರಣವೀಳ್ಯ.

ಅದಾದನಂತರ ಇತಿಹಾಸ, ಸಂಸ್ಕೃತಿ, ಸಾಹಿತ್ಯ, ಆರೋಗ್ಯ, ವ್ಯಕ್ತಿಚಿತ್ರ, ಜೀವನಚರಿತ್ರೆ, ಆರ್ಥಿಕತೆ, ಪರಿಸರ, ವಿಜ್ಞಾನ, ಗಣಿತ, ವ್ಯಕ್ತಿತ್ವವಿಕಾಸ, ಹೀಗೆ ಹತ್ತು ಹಲವು ವಿಷಯಗಳಿಗೆ ಸಂಬಂಧಿಸಿದಂತೆ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪುಸ್ತಕಗಳು ನಿರಂತರವಾಗಿ ಪ್ರಕಟವಾಗತೊಡಗಿದವು.

ಮಕ್ಕಳ ಸಾಹಿತ್ಯ ಲೋಕದಲ್ಲಿ ಹೊಸ ಶಕೆ ಪ್ರಾರಂಭಿಸಿದ ಕೀರ್ತಿ ರಾಷ್ಟ್ರೋತ್ಥಾನ ಸಾಹಿತ್ಯದ 'ಭಾರತ-ಭಾರತಿ ಪುಸ್ತಕ ಸಂಪದ'ಕ್ಕೆ ಸಲ್ಲುತ್ತದೆ. ಈ ಮಾಲಿಕೆಯಲ್ಲಿ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಎಲ್ಲ ಪ್ರಾಂತ್ಯಗಳಿಗೂ ಸೇರಿದ ರಾಷ್ಟ್ರೀಯ ಮಹಾಪುರುಷರನ್ನು ಕುರಿತು ಪುಸ್ತಕಗಳನ್ನು ಪ್ರಕಟಿಸಲಾಗಿದೆ.

'ರಾಷ್ಟ್ರೋತ್ಥಾನ ಸಾಹಿತ್ಯ', 'ಸಾಹಿತ್ಯ ಸಿಂಧು ಪ್ರಕಾಶನ' ಹಾಗೂ 'ಭಾರತ-ಭಾರತಿ ಪುಸ್ತಕ ಸಂಪದ'ಗಳ ಮೂಲಕ ಇದುವರೆಗೆ ಸುಮಾರು 1,100ಕ್ಕೂ ಅಧಿಕ ಪ್ರಕಟನೆಗಳು ಹೊರಬಂದಿವೆ. ಭಾರತ-ಭಾರತಿ ಪುಸ್ತಕ ಸಂಪದದ ಪ್ರಕಟನೆಗಳು ಇದುವರೆಗೆ ಸುಮಾರು ಎರಡು ಕೋಟಿಗೂ ಹೆಚ್ಚಿನ ಸಂಖ್ಯೆಯಲ್ಲಿ ಮಾರಾಟವಾಗಿ ಐತಿಹಾಸಿಕ ದಾಖಲೆ ಸೃಷ್ಟಿಯಾಗಿದೆ.





ಕನ್ನಡ ಪುಸ್ತಕ ಹಬ್ಬ 2022ರಲ್ಲಿ ರಾಷ್ಟ್ರೋತ್ಥಾನ ಸಾಹಿತ್ಯದ ಗೂಗಲ್ ಪ್ಲೇ ಬುಕ್ಸ್ ಅವತರಣಿಕೆ ಅನಾವರಣ


ರಾಷ್ಟ್ರೋತ್ಥಾನ ಸಾಹಿತ್ಯದ ಹಲವು ಪ್ರಕಟನೆಗಳಿಗೆ ('ತೋರ್ ಬೆರಳು', 'ಅಜೇಯ', 'ಅದಮ್ಯ', 'ಶತಮಾನದ ತಿರುವಿನಲ್ಲಿ ಭಾರತ', 'ಗಾಂಧೀಯ ಅರ್ಥಶಾಸ್ತ್ರ') ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನಗಳು ದೊರೆತಿವೆ. 'ಉತ್ಕರ್ಷಪಥ' ಕೃತಿಗೆ 'ಸಿದ್ಧವನಹಳ್ಳಿ ಕೃಷ್ಣಶರ್ಮಾ ಸ್ಮಾರಕ ಗ್ರಂಥ ಪುರಸ್ಕಾರ' ಹಾಗೂ 'ಸಾಮಾಜಿಕ ಕ್ರಾಂತಿಸೂರ್ಯ ಡಾ॥ ಬಾಬಾಸಾಹೇಬ್ ಅಂಬೇಡ್ಕರ್' ಕೃತಿಗೆ – ಉತ್ಕೃಷ್ಟ ಅನುವಾದಕ್ಕಾಗಿ – ಕುವೆಂಪು ಭಾಷಾಭಾರತಿಯ ಪುರಸ್ಕಾರ ದೊರೆತಿದೆ. ರಾಷ್ಟ್ರೋತ್ಥಾನ ಸಾಹಿತ್ಯದ ಇದುವರೆಗಿನ ಕಾರ್ಯವನ್ನು ಪರಿಗಣಿಸಿ ಕನ್ನಡ ಸಾಹಿತ್ಯ ಪರಿಷತ್ತು 'ಅಂಕಿತ ದತ್ತಿ ಪುರಸ್ಕಾರ'ವನ್ನು ನೀಡಿದೆ.

## 2022–23ನೇ ಸಾಲಿನ ಚಟುವಟಿಕೆಗಳು:

- ಈ ಸಾಲಿನಲ್ಲಿ ರಾಷ್ಟ್ರೋತ್ಥಾನ ಸಾಹಿತ್ಯದಿಂದ ಒಟ್ಟು 8 ಪುಸ್ತಕಗಳು ಪ್ರಕಟವಾದವು. ಇವುಗಳಲ್ಲಿ 6 ಕನ್ನಡ ಕೃತಿಗಳು, 2 ಇಂಗ್ಲಿಷ್ ಕೃತಿಗಳು.
- ಸಾಹಿತ್ಯ ಸಿಂಧು ಪ್ರಕಾಶನದಿಂದ 1 ಪುಸ್ತಕ ಪ್ರಕಟವಾಗಿದೆ.
- 'ರಾಷ್ಟ್ರತಪಸ್ವಿ ಶ್ರೀಗುರೂಜಿ', 'ಸಾಹಿತ್ಯ ಮತ್ತು ಜೀವನಕಲೆ', 'ಗಾನಕಲೆ', 'ಹಲವರು ರಾಷ್ಟ್ರಾರಾಧಕರು', 'ದ್ರಷ್ಟಾರ ಸಾವರಕರ್', 'Essays & Speeches: Vol - 1 & 2' – ಈ ಕೃತಿಗಳ ಲೋಕಾರ್ಪಣ ಕಾರ್ಯಕ್ರಮಗಳು ನಡೆದಿವೆ. ಅದರಲ್ಲೂ, 'ರಾಷ್ಟ್ರತಪಸ್ವಿ ಶ್ರೀಗುರೂಜಿ' ಕೃತಿಯ












ಕನ್ನಡ ಪುಸ್ತಕ ಹಬ್ಬ 2022ರ ಸಮಾರೋಪ

ಲೋಕಾರ್ಪಣ ಕಾರ್ಯಕ್ರಮಗಳು ರಾಜ್ಯದಲ್ಲಿ 20ಕ್ಕೂ ಹೆಚ್ಚು ಕಡೆ ನಡೆದಿವೆ.

- ರಾಷ್ಟ್ರೋತ್ಥಾನ ಸಾಹಿತ್ಯದ ಸಂಪಾದಕೀಯ ವಿಭಾಗದಿಂದ ಕರಡು ತಿದ್ದುಪಡಿಗೆ ಸಂಬಂಧಿಸಿದಂತೆ ಒಂದು ದಿನದ ಕಮ್ಮಟ ನಡೆಸಲಾಗಿದೆ.
- ನವೆಂಬರ್ ತಿಂಗಳ ಕನ್ನಡ ಪುಸ್ತಕ ಹಬ್ಬದ ಸಂದರ್ಭದಲ್ಲಿ, 3 ಸಂವಾದಗಳು, 8 ಉಪನ್ಯಾಸಗಳು ನಡೆದಿವೆ. 'ಕನ್ನಡದಲ್ಲಿ ರಾಷ್ಟ್ರೀಯ ಸಾಹಿತ್ಯ' ವಿಷಯವಾಗಿ ಒಂದು ದಿನದ ವಿಚಾರ ಸಂಕಿರಣ ನಡೆಸಲಾಗಿದೆ.
- ಕನ್ನಡ ಪುಸ್ತಕ ಪ್ರಾಧಿಕಾರ ನೀಡುವ 'ಅತ್ಯುತ್ತಮ ಪ್ರಕಾಶನ ಪ್ರಶಸ್ತಿ' 2022ನೇ ಸಾಲಿನಲ್ಲಿ ರಾಷ್ಟ್ರೋತ್ಥಾನ ಸಾಹಿತ್ಯಕ್ಕೆ ದೊರೆತಿದೆ.










## ರಾಷ್ಟ್ರೋತ್ಥಾನ ಸಾಹಿತ್ಯ ಮಾರಾಟ ವಿಭಾಗ:

- ಪ್ರತಿವರ್ಷದಂತೆ 2022ರ ನವೆಂಬರ್‌ನಲ್ಲೂ 1 ತಿಂಗಳ ಕಾಲ ಕನ್ನಡ ಪುಸ್ತಕ ಹಬ್ಬವನ್ನು ಚಾಮರಾಜಪೇಟೆಯ ಕೇಶವಶಿಲ್ಪ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಸಾವಿರಾರು ಓದುಗರು ಹಬ್ಬಕ್ಕೆ ಭೇಟಿಯಿತ್ತಿದ್ದರು.
- ದಾವಣಗೆರೆ, ಶಿವಮೊಗ್ಗ, ಹಗರಿಬೊಮ್ಮನಹಳ್ಳಿ ಮತ್ತು ತಿಪಟೂರಿನಲ್ಲಿ ಪುಸ್ತಕ ಪ್ರದರ್ಶನ ಮತ್ತು ಮಾರಾಟವನ್ನು ಆಯೋಜಿಸಲಾಗಿತ್ತು.
- ಅಪ್ರತಿಮ ದೇಶಭಕ್ತ ಸ್ವಾತಂತ್ರ್ಯವೀರ ಸಾವರ್ಕರ್



ಈ ಕೃತಿಯು ಈ ವರ್ಷ 10,000ಕ್ಕೂ ಹೆಚ್ಚು ಸಂಖ್ಯೆಯಲ್ಲಿ ಮಾರಾಟವಾಗಿದೆ.



- 12,000ಕ್ಕೂ ಮೆಲ್ಪಟ್ಟು ಗ್ರಾಹಕರು ಸಾಹಿತ್ಯದ ಮಳಿಗೆ/ ಪ್ರದರ್ಶನ/ Online Storeಗಳಿಗೆ ಭೇಟಿ ನೀಡಿದ್ದಾರೆ.
- ಒಟ್ಟು 1.17 ಲಕ್ಷ ಪುಸ್ತಕಗಳು ರಾಷ್ಟ್ರೋತ್ಥಾನ ಸಾಹಿತ್ಯದ ಮೂಲಕ ಜನರ ಕೈ ಸೇರಿವೆ.
- ರಾಷ್ಟ್ರೋತ್ಥಾನ ಸಾಹಿತ್ಯದ 286 ಶೀರ್ಷಿಕೆಗಳ 60,009 ಪ್ರತಿಗಳು ಹಾಗೂ ಬೇರೆ ಪ್ರಕಾಶನಗಳ 10 ಸಾವಿರಕ್ಕೂ ಹೆಚ್ಚಿನ ಶೀರ್ಷಿಕೆಗಳ 64,243 ಪ್ರತಿಗಳು, ಒಟ್ಟು 1 ಕೋಟಿ 88 ಲಕ್ಷ ರೂಪಾಯಿಯಷ್ಟು ವ್ಯಾಪಾರವಾಗಿರುತ್ತದೆ.
- ಈ ಸಾಲಿನಲ್ಲಿ ಅಂಗಡಿ ಮಳಿಗೆಗಳಿಗೆ 20 ಸಾವಿರಕ್ಕೂ ಹೆಚ್ಚಿಗೆ ಮಂದಿ ಭೇಟಿ ಕೊಟ್ಟಿದ್ದಾರೆ. ಪ್ರದರ್ಶನ ಹಾಗೂ ಕಾರ್ಯಕ್ರಮಗಳಲ್ಲಿ 40 ಸಾವಿರಕ್ಕೂ ಹೆಚ್ಚಿಗೆ ಮಂದಿ ಹಾಗೂ ಡಿಜಿಟಲ್ ಮಾರ್ಕೆಟಿಂಗ್ ಮೂಲಕ 70 ಸಾವಿರಕ್ಕೂ ಹೆಚ್ಚಿಗೆ ಮಂದಿಯನ್ನು ತಲುಪಲಾಗಿದೆ.
- ರಾಷ್ಟ್ರೋತ್ಥಾನ ಸಾಹಿತ್ಯವು ವರ್ಷಪೂರ್ತಿ ವಿವಿಧ ಸಮ್ಮೇಳನ ಮತ್ತು ಕೂಟಗಳಲ್ಲಿ ಭಾಗವಹಿಸುತ್ತ ಪುಸ್ತಕ ಪ್ರಸಾರವನ್ನು ನಿರಂತರವಾಗಿ ನಡೆಸಿಕೊಂಡು ಬಂದಿದೆ.
- ಈ ವರ್ಷ 4 ಪುಸ್ತಕ ಪ್ರದರ್ಶನಗಳನ್ನು ಆಯೋಜಿಸಲಾಗಿದೆ ಹಾಗೂ 36 ಕಾರ್ಯಕ್ರಮಗಳಲ್ಲಿ ಭಾಗವಹಿಸಲಾಗಿದೆ.
- ಬೆಂಗಳೂರಿನಲ್ಲಿರುವ 3 ಮಳಿಗೆಗಳು ಹಾಗೂ ಆನ್‌ಲೈನ್ ಮಳಿಗೆ – www.sahityabooks.com ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿವೆ. Google Play Booksನಲ್ಲೂ ಲಭ್ಯ ಇವೆ.



ಉತ್ಥಾನ ಪ್ರಬಂಧ ಸ್ಪರ್ಧೆ – 2022ರ ವಿಜೇತರು


## ಉತ್ಥಾನ: ಸದಭಿರುಚಿಯ ಕೌಟುಂಬಿಕ ಮಾಸಪತ್ರಿಕೆ

### 2022–23 ವಾರ್ಷಿಕ ಕಾರ್ಯಕಲಾಪಗಳು

**2023ರ ಜನವರಿಯಲ್ಲಿ ಸಂಕ್ರಾಂತಿ – ಗಣರಾಜ್ಯೋತ್ಸವ ವಿಶೇಷಾಂಕ:**


ಕಳೆದ 4 ದಶಕಗಳಂತೆ ಈ ಬಾರಿಯೂ ಜನವರಿ ತಿಂಗಳಲ್ಲಿ 'ಉತ್ಥಾನ ಸಂಕ್ರಾಂತಿ ವಿಶೇಷಾಂಕ'ವನ್ನು ಹೊರತರಲಾಗಿದ್ದು ಓದುಗರ ಮೆಚ್ಚುಗೆಗೆ ಪಾತ್ರವಾಗಿದೆ.

ವಿಶೇಷಾಂಕದ ವಿಷಯ: ಸ್ವಾತಂತ್ರ್ಯದ ಅಮೃತಮಹೋತ್ಸವ: ಕನ್ನಡ ನೆಲದ ಕೊಡುಗೆ – ಪ್ರೇರಕ ಶೌರ್ಯಗಾಥೆಗಳ ಮೆಲುಕು.





ಭಾರತದ ಅಮೃತಮಹೋತ್ಸವ (2022–23) ಸಂಭ್ರಮಾಚರಣೆ ನಡೆದಿರುವ ಈ ಶುಭಸಂದರ್ಭದಲ್ಲಿ ಕನ್ನಡ ನೆಲದಲ್ಲಿ ಪರಕೀಯದಾಸ್ಯದ ಆ ದಿನಗಳಲ್ಲಿ ಅಸೀಮ ಸ್ವಾಭಿಮಾನ ಮೆರೆದು, ಸರ್ವಸ್ವವನ್ನೂ ತ್ಯಾಗಮಾಡಿ, ಪರಕೀಯ ಆಳ್ವಿಕೆಗೆ ದಿಟ್ಟ ಸವಾಲೆಸೆದ ಹಾಗೂ ಜೊತೆಜೊತೆಗೆ ನಡೆದ ಸಾಮಾಜಿಕ ಪರಿವರ್ತನೆಯ ಪ್ರಯಾಸಗಳನ್ನು ಕುರಿತ ರೋಚಕವೂ, ಪ್ರೇರಣಾದಾಯಕವೂ ಆದ ಆಯ್ದ ಮೆಲುಕುಗಳನ್ನು ಈ ಸಂಚಿಕೆಯಲ್ಲಿ ಮೆಲುಕು ಹಾಕಲಾಗಿದೆ.

- ಕನ್ನಡ ನೆಲದಲ್ಲಿ ನಡೆದ ಒಟ್ಟು 70 ಅಪರೂಪದ – ಅಜ್ಞಾತ ಸಂಗತಿಗಳಿವೆ.
- ಬ್ರಿಟಿಷರು, ಪೋರ್ಚುಗೀಸರು, ಫ್ರೆಂಚರ ವಿರುದ್ಧದ ನಡೆದ ಹೋರಾಟ
- ಶಸ್ತ್ರ, ಅಹಿಂಸೆ ಮತ್ತು ಸಮಾಜಸುಧಾರಣೆ – ಹೀಗೆ ಹಲವು ಮುಖಗಳ ಪ್ರೇರಕ ಪ್ರಸಂಗಗಳಿವೆ
- ಕರ್ನಾಟಕದ ಎಲ್ಲ 31 ಜಿಲ್ಲೆಗಳ ಕನಿಷ್ಠ ಒಂದು ಪ್ರೇರಕ ಸಂಗತಿಯಿದೆ.
- ಒಟ್ಟು 24 ಜಿಲ್ಲೆಗಳ 57 ಲೇಖಕರ ಲೇಖನಗಳಿವೆ.





**'ಉತ್ಥಾನ' ಕಥಾಸ್ಪರ್ಧೆ – 2022:**

- ಭಾಗವಹಿಸಿದ ಒಟ್ಟು 398 ಕಥೆಗಳು – ರಾಜ್ಯದ 31 ಜಿಲ್ಲೆಗಳಿಂದ, 5 ಹೊರರಾಜ್ಯಗಳು ಹಾಗೂ ವಿದೇಶದಿಂದ 3
- ತೀರ್ಪುಗಾರರು: ಪ್ರೊ. ಪ್ರೇಮಶೇಖರ, ಖ್ಯಾತ ಲೇಖಕರು, ಅಂಕಣಕಾರರು, ಕತೆಗಾರರು





**ಕಾಲೇಜು ವಿದ್ಯಾರ್ಥಿ ಪ್ರಬಂಧ ಸ್ಪರ್ಧೆ:**

- **ವಿಷಯ:** ಭವಿಷ್ಯದಲ್ಲಿ ನಾನೇನಾಗಬೇಕು?: ಉದ್ಯೋಗದಾತನಾಗಲೇ? ಉದ್ಯೋಗಿಯಾಗಲೇ?
- 82 ಕಾಲೇಜುಗಳ ಒಟ್ಟು 196 ವಿದ್ಯಾರ್ಥಿಗಳು ಪ್ರಬಂಧ ಮಂಡಿಸಿದರು.
- **ತೀರ್ಪುಗಾರರು:** ಕೃಷಿಕರು ಹಾಗೂ ಅಖಿಲ ಭಾರತೀಯ ಸಾಹಿತ್ಯ ಪರಿಷತ್ತಿನ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯರಾದ ಶ್ರೀ ಗುರುರಾಜ ಗಂಟಿಹೊಳೆ, ಕೊಪ್ಪಳದ ಗಂಗಾವತಿಯ ಎಸ್‌ಎಂಎನ್‌ಎಂ ಬಾಲಕಿಯರ ಸ.ಪ.ಪೂ ಕಾಲೇಜಿನ ಕನ್ನಡ ಉಪನ್ಯಾಸಕರಾದ ಡಾ. ಸೋಮಕ್ಕ ಎಂ. ಹಾಗೂ ಶಿವಮೊಗ್ಗದ ಖ್ಯಾತ ಕೀಲು ಮತ್ತು ಮೂಳೆ ತಜ್ಞರಾದ ಡಾ. ಸುಧೀಂದ್ರ ಪಿ. ಆರ್. ಅವರು ತೀರ್ಪುಗಾರರಾಗಿ ಬಹುಮಾನಿತ ಪ್ರಬಂಧಗಳನ್ನು ಆಯ್ಕೆ ಮಾಡಿದರು.










**ವಿಶೇಷ ಸಂಚಿಕೆಗಳು:**

- **ಪಶ್ಚಿಮಘಟ್ಟದ ಅರಣ್ಯರೋದನ (ಅಕ್ಟೋಬರ್ 2022ರ ಸಂಚಿಕೆ):** ಪಶ್ಚಿಮಘಟ್ಟ ಸಂರಕ್ಷಣೆ ಕುರಿತ ಗಾಡ್ಗೀಳ್ ವರದಿ ಹಾಗೂ ಡಾ. ಕಸ್ತೂರಿ ರಂಗನ್ ವರದಿಯ ಕುರಿತ ಅಧ್ಯಯನಶೀಲ ವಿಮರ್ಶಾತ್ಮಕ ಲೇಖನಗಳನ್ನೊಳಗೊಂಡ ಸಂಚಿಕೆ
- ಸಾವರ್ಕರ್ ಅವರ ಚಿಂತನೆ–ಸಾಧನೆಗಳ ಪ್ರಮುಖ ಆಯಾಮಗಳನ್ನು ಪ್ರಕಟಿಸುವುದರ ಮೂಲಕ ಅವರ ಕಾಲಜಯೀ ವಾರಸಿಕೆಯನ್ನು ಈಗಿನ ತರುಣ ಪೀಳಿಗೆಗೆ ಪರಿಚಯಿಸುವ ಸರಣಿ ಲೇಖನಮಾಲೆಯನ್ನು ಪ್ರಕಟಿಸಲಾಯಿತು. ಇದು ಜನಸಾಮಾನ್ಯರಿಂದ ವಿದ್ವತ್‌ವಲಯಗಳಲ್ಲಿಯೂ ಬಹುಮೆಚ್ಚುಗೆಗೆ ಪಾತ್ರವಾಗಿದೆ. ಬಹುಬೇಡಿಕೆಯ ಮೇರೆಗೆ ಪುಸ್ತಕ ರೂಪವನ್ನೂ ಪಡೆದಿದೆ.
- **ಅನುಭವದೊಂದಿಗೆ ಪ್ರಯೋಗ:** ಕಾರಂತ ಹಾಗೂ ಶಾರದೆಗೆ ಮಂದಿರ ಕಾಶ್ಮೀರದಲ್ಲಿ (ಡಿಸೆಂಬರ್ 2022), ಪರಿಸರ ವಿಶೇಷ ಸಂಚಿಕೆ (ಜೂನ್ 2022) ಮುಂತಾದ ವಿಶೇಷ ಲೇಖನಗಳು ಓದುಗರ ಮೆಚ್ಚುಗೆಗೆ ಪಾತ್ರವಾಯಿತು.



**ವಿಶೇಷ ಪ್ರಯತ್ನಗಳು:**

- ಯುವ ಲೇಖಕರನ್ನು ಜೋಡಿಸಿಕೊಳ್ಳಲಾಗಿದೆ.
- ಪ್ರಸಾರಕ್ಕಾಗಿ: ಗ್ರಂಥಾಲಯ ಇಲಾಖೆಯ ಅಧಿಕೃತ ಆದೇಶದ ಮೇರೆಗೆ ರಾಜ್ಯದ 16 ಜಿಲ್ಲೆಯ 285 (ನಗರ + ಜಿಲ್ಲಾ) ಗ್ರಂಥಾಲಯಗಳಿಗೆ ಸರಬರಾಜು ಮಾಡಲಾಗುತ್ತಿದೆ ಹಾಗೂ ಏಜೆಂಟರುಗಳನ್ನು ಗುರುತಿಸಲಾಗಿದೆ.
- ಜಾಹೀರಾತು ಸಂಗ್ರಹಕ್ಕೆ ವಿಶೇಷ ಪ್ರಯತ್ನ ನಡೆಸಲಾಗಿದೆ.
- ಆನ್‌ಲೈನ್ ಉಪನ್ಯಾಸ ಮಾಲಿಕೆಯಲ್ಲಿ ಜಗನ್ನಾಥರಾವ್ ಜೋಶಿ ಅವರ ಕುರಿತು ಶ್ರೀ ಮಂಗೇಶ್ ಭೇಂಡೆ ಅವರು ಜೂನ್ 28, 2022ರಂದು ನಡೆಸಿಕೊಟ್ಟ ಉಪನ್ಯಾಸ 9 ಸಾವಿರ ಮಂದಿ ವೀಕ್ಷಿಸಿದರು. Reach 25,000ಕ್ಕೂ ಅಧಿಕ



# ಸಂವಿತ್ ರಿಸರ್ಚ್ ಫೌಂಡೇಶನ್



Samvit Modules Awareness for Matrumandali
@ Amrutha Bharathi Vidyalaya, Hebri. – 11th Feb 2023



IKS Mela 2022 - Indian Knowledge Systems Division of MoE
@ AICTE, New Delhi from 29th to 31st July 2022

ಸ್ವಸ್ಥ–ಸುಸ್ಥಿರ ಸಮಾಜನಿರ್ಮಾಣದ ಗುರಿ ಹೊಂದಿರುವ ರಾಷ್ಟ್ರೋತ್ಥಾನ ಪರಿಷತ್ತಿನ ಪ್ರಕಲ್ಪಗಳಲ್ಲಿ ಒಂದಾದ ಸಂವಿತ್ ರಿಸರ್ಚ್ ಫೌಂಡೇಶನ್, ಶೈಕ್ಷಣಿಕ ತಜ್ಞರು, ಶಿಕ್ಷಕರು ಹಾಗೂ ಸಂಶೋಧಕರನ್ನೂ ಒಂದೆಡೆ ಸೇರಿಸಿ, ಸಮಗ್ರ ಶಿಕ್ಷಣ ಪದ್ಧತಿಯ ಕ್ರಮಗಳನ್ನು ಸುಧಾರಿಸಲು ಸಲಹೆ ಹಾಗು ಸಾಧನಗಳನ್ನು ರೂಪಿಸಿ, ಸಿದ್ಧಪಡಿಸಲು ಏರ್ಪಡಿಸಿರುವ ಒಂದು ಮುಕ್ತ ವೇದಿಕೆ.

ರಾಷ್ಟ್ರೀಯ ಶಿಕ್ಷಣ ನೀತಿ – 2020ರ ರಚನಾಪೂರ್ವ ಅನುಮೋದನೆಗಳನ್ನು ಆಹ್ವಾನಿಸಿರುವ ಹಿನ್ನೆಲೆಯಲ್ಲಿ, ಸಂವಿತ್ 2018ರಲ್ಲಿ NEP-2020ಕ್ಕೆ ಹಲವು ಸಂಶೋಧನಾ ವರದಿಗಳನ್ನು ತಯಾರಿಸಿ ಸಲ್ಲಿಸುವ ಪ್ರಕ್ರಿಯೆಯ ಮೂಲಕ ಪ್ರಾರಂಭಗೊಂಡಿದೆ.

## ಉದ್ದೇಶ:

- ಶಿಕ್ಷಣ ನೀತಿಗಳನ್ನು ರೂಪಿಸುವವರು ರಾಷ್ಟ್ರಮಟ್ಟದಲ್ಲಿ ನೂತನ ಶಿಕ್ಷಣ ಕ್ರಮದ ವಿಶಿಷ್ಟ ಸಂಶೋಧನಾ ಕ್ರಮಗಳನ್ನು ಪ್ರಾಯೋಗಿಕವಾಗಿ ಅನುಸರಿಸಲು ಮತ್ತು ಅಳವಡಿಸಿಕೊಳ್ಳಲು ನೆರವಾಗುವುದು.
- ದೊಡ್ಡ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲು ಪೂರಕವಾಗಿರುವ ಹಾಗೂ ವಯಸ್ಸಿಗೆ ಅನುಗುಣವಾಗಿರುವ ಸಂಶೋಧನಾ ಮಾದರಿಗಳನ್ನು, ಸಲಹೆ ಮತ್ತು ಸಾಧನಗಳನ್ನು ರೂಪಿಸುವುದು ಮತ್ತು ತಯಾರಿಸುವುದು.
- ಸಂಶೋಧನಾ ಮಾದರಿಗಳನ್ನು ರೂಪಿಸಿ, ಅದನ್ನು ವಿವಿಧ ಶಿಕ್ಷಣ ಸಂಸ್ಥೆಗಳಿಗೆ ಒದಗಿಸಿ, ಅವುಗಳ ವೈಜ್ಞಾನಿಕ ಬಳಕೆಗೆ ಅವಕಾಶ ಕಲ್ಪಿಸುವುದು.




IKS Workshop
@ Bharatiya Bhasha Samiti, New Delhi – June 2022



Interactive Sessions with Sri. Ayachitulu Lakshman Rao and
Prof. Ganti Suryanarayana Murthy– April 2022

- ಸಂಶೋಧನಾ ಪ್ರಬಂಧಗಳು, ವಿವಿಧ ಪ್ರಯೋಗ ಹಾಗೂ ಶಿಕ್ಷಣ ಕ್ರಮಗಳ ಪ್ರಯೋಗಾತ್ಮಕ ಹಾಗೂ ಅಧ್ಯಯನಾಧಾರಿತ ವಿಷಯಗಳ ಯಶಸ್ವಿ ಪ್ರಯೋಗಗಳ ವರದಿಗಳನ್ನು ಪ್ರಕಟಿಸುವುದು.
- ವ್ಯಾಪಕ ಹಾಗೂ ವಿಸ್ತೃತ ಅಳವಡಿಕೆಗಾಗಿ ಶಿಕ್ಷಕರಿಗೆ ಸೂಕ್ತ ತರಬೇತಿ ನೀಡುವುದು.
- ವಿಭಿನ್ನ ಶೈಕ್ಷಣಿಕ ಸಂಸ್ಥೆಗಳ ಶೈಕ್ಷಣಿಕ ಸಂಶೋಧನಾ ವಿವರಗಳು ಹಾಗೂ ಸಮಗ್ರ ಮಾಹಿತಿ ಸಂಗ್ರಹಿಸುವುದು.

## ಕ್ರಮಿಸಿರಿವ ಮೈಲುಗಲ್ಲುಗಳು:

- NEP-2020 ಅಳವಡಿಕೆಯ ರಾಷ್ಟೀಯ ಯೋಜನೆಯ ತಂಡಕ್ಕೆ, ಸಂವಿತ್‌ನ ಸೇರ್ಪಡೆ.
- NEP-2020ರ ಪೂರಕ ಹಾಗೂ ಭಾರತದ ಜ್ಞಾನಪರಂಪರೆಯನ್ನು ಒಳಗೊಂಡ ಪಠ್ಯಪುಸ್ತಕಗಳನ್ನು ವಿವೇಕ ಸಿಂಧು ಸರಣಿ ಪುಸ್ತಕಗಳಾಗಿ ಸಿದ್ಧಪಡಿಸುವ ಯೋಜನೆಯಲ್ಲಿ, ಪ್ರಸ್ತುತ ಇಂಗ್ಲಿಷ್, ವಿಜ್ಞಾನ, ಗಣಿತ, ಹಾಗೂ ಪರಿಸರ ವಿಜ್ಞಾನ ವಿಭಾಗಗಳಲ್ಲಿ, ತರಗತಿ ಒಂದರಿಂದ ತರಗತಿ ನಾಲ್ಕರವರೆಗೆ ಪೂರ್ಣಗೊಂಡಿದೆ (26 ಪುಸ್ತಕಗಳು).
- ಸರಳ, ಸಮರ್ಥ ಅನುಕರಣೀಯ ವ್ಯಕ್ತಿತ್ವ ವಿಕಸನದ ಮಾದರಿಗಳನ್ನು ರಚಿಸಿ, ಶಿಕ್ಷಣ ವ್ಯವಸ್ಥೆಯಲ್ಲಿ ಈಗಾಗಲೇ ಉಂಟಾಗಿರುವ ಮಿತಿಗಳನ್ನು ನಿವಾರಿಸುವ ನಿಟ್ಟಿನಲ್ಲಿ ಯೋಜಿಸಿರುವ, ಕಥಾ ಭಾರತಿ (Stories for Life) ಮತ್ತು ಯೋಗ ಭಾರತಿ (Yoga at School) ಎನ್ನುವ ಪಠ್ಯೇತರಕ್ರಮವನ್ನು ಸಿದ್ಧಪಡಿಸಿ ಕರ್ನಾಟಕದಾದ್ಯಂತ 17 ಜಿಲ್ಲೆಗಳಲ್ಲಿನ 414 ಶಾಲೆಗಳಲ್ಲಿ ಅಳವಡಿಸಲ್ಪಟ್ಟಿದೆ. ಯೋಜನೆಯ ಫಲಾನುಭವಿಗಳು: 1,85,000+ ಮಕ್ಕಳು ಹಾಗೂ 1300+ ಶಿಕ್ಷಕರು.
- **ಸಂವಿತ್ ಕಥಾ ಭಾರತಿ:** 2022–23ರ ಯೋಜನೆಗೆ ಅನುಗುಣವಾಗಿ, ಮಕ್ಕಳಿಗಾಗಿ ಹಾಗೂ ಶಿಕ್ಷಕರಿಗಾಗಿ 1 ರಿಂದ 10ನೇ ತರಗತಿ ವರೆಗಿನ ಪುಸ್ತಕಗಳ ಡಿಜಿಟಲ್ ಪ್ರತಿಗಳು ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಸಿದ್ಧಪಡಿಸಲಾಗಿದೆ (40 ಪುಸ್ತಕಗಳು).
- **ಸಂವಿತ್ ಯೋಗ ಭಾರತಿ:** 2022–23ರ ಯೋಜನೆಯಲ್ಲಿ, ಮಕ್ಕಳಿಗಾಗಿ 6 ರಿಂದ 12ನೇ ತರಗತಿವರೆಗಿನ ಪುಸ್ತಕಗಳ ಡಿಜಿಟಲ್ ಪ್ರತಿಗಳನ್ನು ಇಂಗ್ಲಿಷ್ ಭಾಷೆಯಲ್ಲಿ ಸಿದ್ಧಪಡಿಸಲಾಗಿದೆ (7 ಪುಸ್ತಕಗಳು).




International Conference on Fulfilling the Vision of NEP 2020
in English Language Textbook @ Lucknow



SKB Seva Vasati
Nov 2022

## ಪ್ರಸ್ತುತ ವರ್ಷ 2022–23ಕ್ಕೆ ಮಾಡಿಕೊಂಡಿದ್ದ ಯೋಜನೆಗಳು:

- ಆಯ್ದ ಪ್ರಮುಖ ಸಂಸ್ಥೆಗಳನ್ನು ಸಂವಿತ್‌ನ ಜೊತೆ ಜೋಡಿಸುವ ಯೋಜನೆ.
- ವಿವೇಕ ಸಿಂಧು ಸರಣಿ ಶಾಲಾ ಪಠ್ಯ ಪುಸ್ತಕಗಳು – NEP-2020 ಪೂರಕ ಹಾಗೂ ಭಾರತದ ಜ್ಞಾನಪರಂಪರೆಯನ್ನು ಒಳಗೊಂಡ ಪಠ್ಯಪುಸ್ತಕಗಳನ್ನು, ಇಂಗ್ಲಿಷ್, ವಿಜ್ಞಾನ, ಗಣಿತ, ಹಾಗೂ ಪರಿಸರ ವಿಜ್ಞಾನ ವಿಭಾಗಗಳಲ್ಲಿ, ತರಗತಿ 1 ರಿಂದ 8ರ ವರೆಗೆ, ಸಿದ್ಧಪಡಿಸುವ ಯೋಜನೆ.
- ಸಂವಿತ್ ಸಂಸ್ಥೆಯು ಸಿದ್ಧಪಡಿಸಿರುವ ಪಠ್ಯೇತರ ಕ್ರಮವನ್ನು ಕರ್ನಾಟಕದ ಎಲ್ಲ ವಿದ್ಯಾಭಾರತಿ ಶಾಲೆಗಳಲ್ಲೂ ಅಳವಡಿಸುವ ಯೋಜನೆ.
- ಶಾಲೆಗಳಲ್ಲಿನ ಅನುಷ್ಠಾನದ ಪ್ರಗತಿಯನ್ನು ಗಮನಿಸಲು ಸಂವಿತ್ ಮೊಬೈಲ್ Appನ್ನು ಸಿದ್ಧಪಡಿಸುವ ಯೋಜನೆ.
- ಕನ್ನಡ ಹಾಗೂ ಹಿಂದಿ ಭಾಷೆ ಅಳವಡಿಸಿರುವ ವೆಬ್ಸೈಟಿಗೆ ಚಾಲನೆ – www.samvitresearch.org ; ಹಾಗೂ ಸೋಶಿಯಲ್ ಮೀಡಿಯಾ ಅಕೌಂಟ್ಸ್
- **ಸಂವಿತ್ ಕಥಾ ಭಾರತಿಯ ವಿಸ್ತಾರ** – ಮಕ್ಕಳಿಗಾಗಿ ಮತ್ತು ಶಿಕ್ಷಕರಿಗಾಗಿ ರಾಮಾಯಣ ಹಾಗೂ ಮಹಾಭಾರತ ಕಥೆಗಳ ಆಧಾರಿತ ಚಟುವಟಿಕೆ ಮತ್ತು ಅಭ್ಯಾಸ ಪುಸ್ತಕಗಳು.
- **ಸಂವಿತ್ ಯೋಗ ಭಾರತಿ ಅನುಷ್ಠಾನ** – ಮಕ್ಕಳಿಗಾಗಿ ಮತ್ತು ಶಿಕ್ಷಕರಿಗಾಗಿ 1 ರಿಂದ 12ನೇ ತರಗತಿಯವರೆಗಿನ ಪುಸ್ತಕಗಳ ಡಿಜಿಟಲ್ ಪ್ರತಿಗಳು (12+4 ಪುಸ್ತಕಗಳು).
- **ಸಂವಿತ್ ಉತ್ಸವ ಭಾರತಿ** – ಶಾಲೆಗಳಲ್ಲಿ ಪ್ರತಿ ತರಗತಿಗಳಲ್ಲಿ ಆಯ್ದ 21 ಮುಖ್ಯ ದಿನಗಳ ಆಚರಣೆ ನಡೆಸಲು ಪೂರಕವಾದ, ವಯಸ್ಸಿಗೆ ಅನುಗುಣವಾದ ಚಟುವಟಿಕೆಗಳ ಕಿರು ಪುಸ್ತಕಗಳು ಶಿಕ್ಷಕರಿಗಾಗಿ (21 ಕಿರು ಪುಸ್ತಕಗಳು).

## 2022–23ನೇ ಸಾಲಿನಲ್ಲಿ ನಡೆದ ಕಾರ್ಯಕ್ರಮಗಳು ಮತ್ತು ತರಬೇತಿ ಕಾರ್ಯಾಗಾರಗಳು:

- ವಿವೇಕ ಸಿಂಧೂ ಪಠ್ಯಪುಸ್ತಕಗಳ ಅಳವಡಿಕೆ ಕುರಿತು ಶಿಕ್ಷಕರಿಗೆ ಕಾರ್ಯಾಗಾರ – 2
- ಶಾಲಾ ಪ್ರಾಂಶುಪಾಲರಿಗೆ ಸಂವಿತ್‌ನ ಪಠ್ಯಕ್ರಮಗಳ ಪ್ರಾಮುಖ್ಯತೆ ಕುರಿತು ಕಾರ್ಯಾಗಾರ – 2
- ಸಂವಿತ್ ಕಥಾ ಭಾರತಿ ಪಠ್ಯಕ್ರಮ ಕುರಿತ ಶಾಲಾ ಶಿಕ್ಷಕರ ತರಬೇತಿ ಕಾರ್ಯಾಗಾರ – 8
- ಸಂವಿತ್ ಯೋಗ ಭಾರತಿ ಪಠ್ಯಕ್ರಮ ಕುರಿತ ಶಾಲಾ ಶಿಕ್ಷಕರ ತರಬೇತಿ ಕಾರ್ಯಾಗಾರ – 20



SKB Training from May-Jul 2022


SYB Training from May-Jul 2022

- ಗ್ರಾಮ ವಿಕಾಸ ಕಾರ್ಯಕರ್ತರಿಗಾಗಿ ತರಬೇತಿ ಕಾರ್ಯಾಗಾರ – 2
- ಸೇವಾ ವಸತಿ ಕಾರ್ಯಕರ್ತರಿಗಾಗಿ ತರಬೇತಿ ಕಾರ್ಯಾಗಾರ – 2
- ಯೋಗ ಜೀವನಮ್ – ಸರ್ಕಾರಿ ಶಾಲಾ ಶಿಕ್ಷಕರಿಗೆ ತರಬೇತಿ ಕಾರ್ಯಾಗಾರ – 1

## ಸೇವಾ ಚಟುವಟಿಕೆಗಳು:

ಸೇವಾ ವಸತಿ ಹಾಗೂ ಪ್ರಶಿಕ್ಷಣ ಭಾರತಿ ಪ್ರಕಲ್ಪಗಳ ಸಂಯೋಜನೆಯಲ್ಲಿ, ಸಂವಿತ್ ಕಥಾ ಭಾರತಿ ಮತ್ತು ಸಂವಿತ್ ಯೋಗ ಭಾರತಿ ತರಬೇತಿಗಳನ್ನು ಆಯೋಜಿಸಿ ನಡೆಸಿದೆ.

## ವರ್ಷದ ಸಾಧನೆ ಹಾಗೂ ಉಲ್ಲೇಖನೀಯ ಸಂಗತಿಗಳು:

- ಸಂವಿತ್ NCF ಕೋರ್ ಸಮಿತಿಗೆ ಸದಸ್ಯರಾಗಿ ಸೇರ್ಪಡೆಯಾಗಿದೆ.
- NCERT, N. Delhi, ಸಂವಿತ್‌ಅನ್ನು ರಾಷ್ಟ್ರೀಯ ಪಠ್ಯಪುಸ್ತಕ ತಯಾರಿಕಾ ತಂಡಕ್ಕೆ ಆಹ್ವಾನಿಸಿದೆ.
- IKS Division of AICTE, Ministry of Education, New Delhi, ಸಂವಿತ್–ಅನ್ನು ಶಾಲಾ ಶಿಕ್ಷಣ ವ್ಯಾಪ್ತಿಯಲ್ಲಿ IKS ಸೆಂಟರ್ ಆಗಿ ಮಾನ್ಯತೆ ನೀಡಿ, ಸಂವಿತ್‌ನ 2 ಯೋಜನೆಗಳಿಗೆ ಅನುದಾನವನ್ನು ನೀಡಿದೆ.
- "ಶಾಲೆಗಳಲ್ಲಿ ಮೌಲ್ಯ ಶಿಕ್ಷಣ" – ಕರ್ನಾಟಕ ರಾಜ್ಯ ಮಟ್ಟದ ಸಭೆಯಲ್ಲಿ ಭಾಗವಹಿಸುವ ಅವಕಾಶ ದೊರೆತಿದೆ.

## ಮುಂದಿನ ಕಾರ್ಯ ವಿಸ್ತಾರ:

- ವಿವೇಕ ಸಿಂಧೂ ಸರಣಿಯ ಪಠ್ಯಪುಸ್ತಕಗಳನ್ನು 8ನೇ ತರಗತಿಯವರೆಗೆ ಪೂರ್ಣಗೊಳಿಸುವ ಯೋಜನೆಯಾಗಿದೆ.
- ಸಂವಿತ್ ಯೋಗ ಭಾರತಿಯ ಅನುಷ್ಠಾನದೊಂದಿಗೆ ಯೋಗದ ವಿಷಯಗಳಲ್ಲಿ IKS ಸೆಂಟರ್ ಮುಖಾಂತರ ಸಂಶೋಧನೆ ನಡೆಸುವ ಯೋಜನೆಯಾಗಿದೆ.
- ಕಥಾ ಭಾರತಿ (Stories for Life) ಮತ್ತು ಯೋಗ ಭಾರತಿ (Yoga at School) ಎನ್ನುವ ಪಠ್ಯೇತರಕ್ರಮವನ್ನು ಹೊರ ರಾಜ್ಯದ ಶಾಲೆಗಳಲ್ಲಿ ಅಳವಡಿಸಲು ಯೋಜನೆಯಾಗಿದೆ.

## ಉಲ್ಲೇಖನೀಯ ಹೇಳಿಕೆಗಳು:

"... ಮಕ್ಕಳು ಕಥೆಗಳ ಮೂಲಕ ಕಲಿತ ಮೌಲ್ಯಗಳನ್ನು ಅನುಗುಣವಾಗಿ ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಪ್ರಯತ್ನದಲ್ಲಿ ಸಫಲತೆಯನ್ನು ಕೂಡಾ ನಾವು ಗಮನಿಸಿದ್ದೇವೆ ..."

"... ಕೋವಿಡ್ ಪರಿಸ್ಥಿತಿಯ ಮುಂಚಿನಿಂದಲೂ ಯೋಗ ತರಗತಿಗಳು ಪ್ರಾರಂಭಗೊಂಡಿದ್ದು, ವಿದ್ಯಾರ್ಥಿಗಳು ಕೋವಿಡ್ ಪರಿಸ್ಥಿತಿಯ ನಡುವೆ ಹಾಗೂ ನಂತರದಲ್ಲಿ ಉತ್ತಮ ಮನೋಧಾರ್ಢ್ಯ ಹಾಗೂ ದೇಹದಾರ್ಢ್ಯ ಬೆಳವಣಿಗೆಗೆ ಸಹಕಾರಿಯಾಗಿದೆ ..."
**ಎಂ. ಎನ್. ಶೈಲಜಾ,** ಪಾಂಶುಪಾಲರು, VSM ಇಂಗ್ಲಿಷ್ ಸ್ಕೂಲ್

"... ಯೋಗ ತರಬೇತಿಗೆ ಆಯಾ ತಿಂಗಳಿಗೆ ತಕ್ಕಂತೆ ಪಠ್ಯಕ್ರಮದ ಎಲ್ಲ ಅಂಶಗಳನ್ನು ವೀಡಿಯೋದಲ್ಲಿ ಕೂಡಾ ದೊರೆಯುವಂತೆ ಮಾಡಿರುವುದು ನಮಗೆಲ್ಲ ಸಹಕಾರಿಯಾಗಿದೆ ..."
**ಸಿಂಧು ಐತಾಳ,** ಯೋಗ ಶಿಕ್ಷಕಿ, ಸೇವಾ ಸಂಗಮ ವಿದ್ಯಾ ಕೇಂದ್ರ, ತೆಕ್ಕಟ್ಟೆ

"... ನಾನು ಈ ಕಥೆಗಳಿಂದ ಪ್ರೇರಣೆಗೊಂಡಿದ್ದೇನೆ. ಮೌಲ್ಯ ಶಿಕ್ಷಣದ ಅವಧಿಯಲ್ಲಿ ಮಕ್ಕಳಿಗೆ ಬೋಧಿಸುತ್ತಿದ್ದೇನೆ. ಇದರಿಂದ ಮಕ್ಕಳಲ್ಲಿ ಕುತೂಹಲದೊಂದಿಗೆ ಉತ್ತಮವಾದ ಬದಲಾವಣೆಯನ್ನು ಕಂಡಿದ್ದೇನೆ ..."
**ಶರ್ಮಿಳಾ ಎಸ್,** ಶಿಕ್ಷಕಿ, ಪ್ರಿಯದರ್ಶಿನಿ ವಿದ್ಯಾ ಸಂಸ್ಥೆ, ಬೆಟ್ಟಂಪಾಡಿ

"ಸಂವಿತ್ ಯೋಗ ಭಾರತಿಯ ಶಿಕ್ಷಕರಾದ ನಾವುಗಳು, ಯೋಗ ತರಗತಿಗಳನ್ನು ನಮ್ಮ ದೈನಂದಿನ ವೇಳಾಪಟ್ಟಿಯಲ್ಲಿ ಸೇರಿಸಿಕೊಂಡು ತಪ್ಪದೇ ನಡೆಸುತ್ತಿದ್ದೇವೆ. ಇದರಿಂದ ಮಕ್ಕಳಿಗೆ ಉತ್ತಮ ಆರೋಗ್ಯ, ಸಂತೋಷ, ಪರಸ್ಪರ ಹೊಂದಾಣಿಕೆ ಬೆಳೆಯುವಂತಾಗಿದೆ. ಯೋಗ ಗೀತೆಗಳನ್ನು ಕಲಿಯುವಂತಾಗಿದೆ. ಧನ್ಯವಾದಗಳು.
**ಮಹಾಂತೇಶ್,** BLDEA, ಬಿಜಾಪುರ

**Rashtrotthana Parishat**

93/1, Keshava Shilpa, Kempegowda Nagara
Bengaluru - 560 004, KA

Contact: 080-2661 2730/ 31/ 32/ 94482 84602
Email: info@rashtrotthana.org

**www.rashtrotthana.org**

FB & Instagram: rashtrotthanaparishath
Twitter: rashtrotthana_p
YouTube: Rashtrotthana
LinkedIn: rashtrotthana-parishat

ರಾಷ್ಟ್ರೋತ್ಥಾನ ಪರಿಷತ್